ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 22
ಜೂನ್ 2, 2013

ಪುಟ 16 ರೂ. 10/-



ಚೀನಾ ಪ್ರಧಾನಮಂತ್ರಿಗಳ ಮಹತ್ವದ ಭೇಟಿ





ಅಗ್ಗದ ಅಕ್ಕಿಯಿಂದ ಅಲಸ್ಯ ಹೆಚ್ಚುವುದೇ?

ಮಂತ್ರಿಮಂಡಲ ರಚನೆ : ಮುಗಿಯದ ಕಾರುಭಾರು!



ಬೆಳ್ತಂಗಡಿ : ಮೂರನೇ ರಾಜಕೀಯ ಶಕ್ತಿಯಾಗಿ ಸಿಪಿಐ(ಎಂ)



ಕಾರ್ಮಿಕ ಸಂಘಗಳ ಬೇಡಿಕೆ : ಯುಪಿಎ2 ಸರ್ಕಾರ ಎಷ್ಟು ಪ್ರಾಮಾಣಿಕ ?



ಚರಕ ಎಂಬ ವೈದ್ಯರ ವಿಚಾರಗಳಿಗೂ ವಚನ ಚಳುವಳಿಗಳಿಗೂ ಎತ್ತಣಂದೆತ್ತ ಸಂಬಂಧವಯ್ಯಾ?

'ಬಿಗ್‌ಬಾಸ್' ಎಂಬ ರಿಯಾಲಿಟಿ ಶೋ ವಿಕೃತಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಐಪಿಎಲ್ ಎಂಬ ಜೂಜಿನಾಟ

ಕ್ರಿಕೆಟ್ ಎಂಬುದು ನಿಜವಾಗಿಯೂ ಇಲ್ಲಿ ಒಂದು ಆಟವಾಗಿ ಉಳಿದಿದೆಯೇ? ಎಂಬ ಪ್ರಶ್ನೆ ಕೇಳಿಕೊಂಡರೇ ಉತ್ತರ ಇಲ್ಲವೇ ಇಲ್ಲ. ಯಾಕೆ ಏನು ಓದಿ.

– ಲಿಂಗರಾಜು

ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ನ ಮಾಜಿ ಅಧ್ಯಕ್ಷ ಕಿರಣ್ ಮೋರೆ 'ಕ್ರಿಕೆಟ್‌ನಲ್ಲಿ ಬೆಟ್ಟಿಂಗ್‌ನ್ನು ಕಾನೂನು ಬದ್ಧಗೊಳಿಬೇಕೆಂದು' ಹೇಳಿಕೆಯೊಂದನ್ನು ನೀಡಿದ್ದರು. ಈ ಹೇಳಿಕೆ ಹಲವು ಸಂದೇಹ ಅನುಮಾನ ಹಾಗೂ ಹತ್ತಾರು ಅರ್ಥಗಳನ್ನು ಹುಟ್ಟಿಹಾಕಿತ್ತು. ಈ ಮಾತನ್ನು ನೇರವಾಗಿ ಅರ್ಥಮಾಡಿಕೊಳ್ಳವುದಾದರೆ ಜೂಜುಕೋರತನಕ್ಕೆ ಕಾನೂನು ಯಾವುದೇ ರೀತಿಯಲ್ಲಿ ಅಡ್ಡಿಪಡಿಸಬಾರದೆಂಬುದಾಗಿತ್ತು. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸುವಾಗ ಬೆಟ್ಟಿಂಗ್ ಮಾಫಿಯಾವನ್ನು ದೃಷ್ಟಿಯಲ್ಲಿಟ್ಟುಕೊಂಡು ಐಪಿಎಲ್ ಜನ್ಮ ತಳೆಯಿತೇನೋ ಎಂಬ ಅನುಮಾನಗಳಿಗೆ ರೆಕ್ಕೆಪುಕ್ಕಗಳು ಬಂದಿವೆ. 2013 ರ ಐಪಿಎಲ್ ಟೂರ್ನಿಯಲ್ಲಿ ಶ್ರೀಶಾಂತ್, ಅಜಿತ್ ಚಾಂಡಿಲ, ಅಂಕಿತ್ ಚೌಹಾಗ್ ಎಂಬ ಮೂರು ಆಟಗಾರರು ಬೆಟ್ಟಿಗ್ ಸುಳಿಯಲ್ಲಿ ಸಿಲುಕಿ ವಿವಾದಗಳನ್ನು ಹುಟ್ಟುಹಾಕಿದ್ದಾರೆ. ಈ ಬಗ್ಗೆ ಸಮಗ್ರ ನಿಷ್ಪಕ್ಷಪಾತ, ನಿಷ್ಠುರ ತನಿಖೆಯಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಆದರೆ 'ಫಿಕ್ಸಿಂಗ್'ನ ಹಿಂದಿರುವ ಮಾಫಿಯಾ ದೊರೆಗಳು ಯಾರು? ಮೂಲ ಎಲ್ಲಿ? ಇತ್ಯಾದಿಗಳನ್ನು ಹೊರಗೆಳೆಯುವ ಸಾಹಸಕ್ಕೆ ಕೈ ಹಾಕುವರೇ? ಇದು ತುಸು ಕಷ್ಟವೆನಿಸಬಹುದೇನೋ.........! ಕೇವಲ ಮೇಲ್ಮೈ ತನಿಖೆ ನಡೆಸಿ ಕೈ ತೊಳೆದುಕೊಂಡರೂ ಆಶ್ಚರ್ಯ ಪಡಬೇಕಿಲ್ಲ.

ದೇಶದ ವಿತ್ತ ನೀತಿಗಳಿಗೆ ಸಂಬಂಧ ಕಲ್ಪಿಸಿಕೊಂಡು ವಿಶ್ಲೇಷಿಸುವುದಾದರೆ, ಇವೆಲ್ಲವೂ ಜಾಗತೀಕರಣ ಹಾಗೂ ಉದಾರವಾದಿ ನೀತಿಗಳ ಫಲವಾಗಿ ಬಂದ ಬಳುವಳಿಗಳಾಗಿವೆ. ಈ ಬಗ್ಗೆ ವಿಷದವಾಗಿ ಚರ್ಚಿಸುವುದು ಅಗತ್ಯ. 2013 ಐಪಿಎಲ್ ಟೂರ್ನಿಯ ಕೆಲ ಪಂದ್ಯಗಳಲ್ಲಿ 'ಸ್ಪಾಟ್ ಫಿಕ್ಸಿಂಗ್' ಆಗಿರುವ ಕುರಿತು ಟಿವಿ, ಪತ್ರಿಕೆ, ವೀಡಿಯೊಗಳಲ್ಲಿ ಬಹಳ ಸುದ್ಧಿಯಾಗುತ್ತಿವೆ. ಆದರೆ ಆಟ ನೋಡಲು ಸ್ಟೇಡಿಯಂಗಳಲ್ಲಿ ಪ್ರೇಕ್ಷಕರ ನೂಕು ನುಗ್ಗಲು ಕಡಿಮೆಯಾಗಿಲ್ಲ. ಹಾಗೂ ಪ್ರಸಾರದ 'ಟಿಆರ್‌ಪಿ'ಯೂ ಕಡಿಮೆಯಾಗಿಲ್ಲ! ಹೀಗಾಗಿ ಇಂಡಿಯಾದಲ್ಲಿ ಕ್ರಿಕೆಟ್ ಅತ್ಯಂತ ಜನಪ್ರಿಯ ಕ್ರೀಡೆ ಎಂಬುದನ್ನು ತಳ್ಳಿಹಾಕಲಾಗದು.

ಇಂಗ್ಲೆಂಡಿನಲ್ಲಿ ಜನ್ಮ ತಳೆದ ಈ 'ಸಭ್ಯರ ಆಟ' ಬ್ರಿಟೀಷ್ ವಸಾಹತುವಿನ ಮೂಲಕ ಇಂಡಿಯಾಗೂ ಪರಿಚಯವಾಯಿತು. ಆದರೆ ಆರಂಭದಲ್ಲಿ ಕ್ರಿಕೆಟ್ ಅಷ್ಟೇನು ಜನಪ್ರಿಯವಾಗಿರಲಿಲ್ಲ. 1990 ರ ದಶಕದ ನಂತರ ಒಂದು ಜನಪ್ರಿಯ ಕ್ರೀಡೆಯಾಗಿ ಕಾಣಿಸಿಕೊಂಡಿತು. ಹಾಗನ್ನುವ ಬದಲು ಜನಪ್ರಿಯಗೊಳಿಸಲಾಯಿತು ಎನ್ನುವುದು ಸೂಕ್ತ. ಕ್ರಿಕೆಟ್‌ನಲ್ಲಿ ಗೆದ್ದವರಿಗೆ ಕೊಟ್ಯಾಂತರ ರೂಪಾಯಿ ಬಹುಮಾನ ಘೋಷಿಸುವ ನಮ್ಮ ಸರ್ಕಾರಗಳು ಹಾಕಿ-ಕಬಡ್ಡಿಯಲ್ಲಿ ಮುಂತಾದ ಕ್ರೀಡೆಗಳಲ್ಲಿ ಗೆದ್ದವರಿಗೆ ಸಾಧಾರಣ ಸನ್ಮಾನವನ್ನು ಮಾಡುವುದಿಲ್ಲ. ಕನಿಷ್ಠ ಗೌರವವನ್ನು ನೀಡುವುದಿಲ್ಲ. ಹೀಗಾಗಿ ಕ್ರಿಕೆಟ್ ಹೊರತುಪಡಿಸಿ ಉಳಿದ ಕ್ರೀಡೆಗಳು ನೇಪಥ್ಯಕ್ಕೆ ಸರಿಯುವಂತಾಯಿತು. ಕ್ರಿಕೆಟ್ ಬಿಟ್ಟು ಇತರೆಲ್ಲಾ ಕ್ರೀಡೆಗಳು ಪ್ರಯೋಜನಕ್ಕೆ ಬಾರದ ಕ್ರೀಡೆಗಳಾದವು. ಕ್ರಿಕೆಟ್ ಆ ಎಲ್ಲ ಜಾಗವನ್ನು ಆಕ್ರಮಿಸಿಕೊಂಡಿತು. ಜನಪ್ರಿಯಗೊಳಿಸಲಾದ ಕ್ರಿಕೆಟ್ ಸಂಸ್ಥೆ ಬಿಸಿಸಿಐ ವಿಶ್ವದ ಶ್ರೀಮಂತ ಸಂಸ್ಥೆಯಾಗಿ ಬೆಳೆದು ನಿಂತಿತು. ಅಪಾರ ಪ್ರಮಾಣದ ಹಣ ಹರಿದು ಬರಲಾಂಭಿಸಿತು. ಕ್ರಿಕೆಟ್ ಆಟಗಾರರು ಸಿನಿಮಾ ತಾರೆಗಳನ್ನು ಮೀರಿಸಿ 'ಸ್ಟಾರ್‌ಗಿರಿ' ಪಡೆದು ಕೊಂಡರು.

ಬಿಸಿಸಿಐನ 2011 – 12 ರ ವಹಿವಾಟು ಈ ರೀತಿ ಇದೆ

ಐಪಿಎಲ್‌ನಿಂದ– 265.4 ಕೋಟಿ ರೂ.

ಮಾಧ್ಯಮಗಳಲ್ಲಿನ ಪ್ರಸಾರದ ಹಕ್ಕಿನಿಂದ – 437.75 ಕೋಟಿ ರೂ.

ಬ್ಯಾಂಕ್‌ಗಳಿಂದ ಬಡ್ಡಿ – 73.68 ಕೋಟಿ ರೂ.



ಇತರೆ ಆದಾಯಗಳು ಸೇರಿ ಒಟ್ಟು 849.44 ಕೋಟಿ ರೂ. ವ್ಯವಹಾರ ನಡೆಸಿದೆ.

ಹಣದ ತೈಲಿಯನ್ನು ನೋಡಿದ ಕ್ರಿಕೆಟ್‌ನ ಗಂಧಗಾಳಿಯೂ ಇಲ್ಲದವರು ಬಿಸಿಸಿಐನೊಳಗೆ ನುಗ್ಗುವ ಪ್ರಯತ್ನ ಆರಂಭಿಸಿದರು. ಈಗಲೂ ಕೂಡ ಕ್ರಿಕೆಟ್‌ಗೆ ಸಂಬಂಧವೇ ಇಲ್ಲದ ಉದ್ಯಮಿ ಎಸ್. ಶ್ರೀನಿವಾಸ್ ಅಧ್ಯಕ್ಷರಾಗಿದ್ದಾ-ರೆ. ರಾಜಕಾರಣಿಗಳಾದ ಶರದ್‌ಪವಾರ್, ಅರುಣ್‌ಜೇಟ್ಲಿ ಸೇರಿದ್ಧಂತೆ ಬಹುತೇಕ ಉದ್ಯಮಪತಿಗಳು ಬಿಸಿಸಿಐನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟು ಕೊಂಡಿದ್ದಾರೆ.

ಕ್ರಿಕೆಟ್‌ನ್ನು ಜನಪ್ರಿಯಗೊಳಿಸುವ ಪ್ರಯತ್ನದ ಹಿಂದೆ ವ್ಯಾಪಾರದ ಉದ್ದೇಶವೇ ಹೊರತು ಬೇರೇನು ಕಾಣಸಿಗುವುದಿಲ್ಲ. ಏಕೆ–ಂದರೆ ಕ್ರಿಕೆಟ್ ದಿನವಿಡೀ ಆಡಬಹುದಾದ ಆಟ ಹಾಗೂ ಪ್ರತಿ ಓವರ್‌ನ ಬಳಿಕ ವಿಶ್ರಾಂತಿ ಸಿಗುವ ಆಟ. ಹೀಗಾಗಿ ಈ ಕ್ರೀಡೆಯನ್ನು ಬಳಸಿಕೊಂಡು ತಮ್ಮ ಸರಕುಗಳನ್ನು ಜಾಹಿರಾತಿನ ಮೂಲಕ ಪ್ರಚಾರ ಮಾಡಿ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವ ಪ್ರಯತ್ನದ ಭಾಗವಾಗಿಯೇ ಇದನ್ನ ಜನಪ್ರಿಯಗೊಳಿಸಲಾಯಿತು. ಆದರೆ ಹಾಕಿ ಅಥವಾ ಪುಟ್‌ಬಾಲ್ ಕೇವಲ 1.30 ಗಂಟೆಯ ಆಟ, ವಿಶೇಷವೆಂದರೆ 45 ನಿಮಿಷಗಳವರೆಗೆ ಯಾವುದೇ ವಿಶ್ರಾಂತಿ ಸಿಗುವುದಿಲ್ಲ. ಹೀಗಾಗಿ ಜಾಹಿರಾತುಗಳಿಗೆ ಜಾಗವಿಲ್ಲ. ಆದ್ದರಿಂದ ಈ ಆಟಗಳಿಗೆ ಇಂಡಿಯಾದಲ್ಲಿ ಪ್ರಾಯೋಜಕರೂ ಸಿಗುವುದಿಲ್ಲ.

ಭಾರತದಲ್ಲಿ ಉದಾರವಾದಿ ಆರ್ಥಿಕ ನೀತಿಗಳಿಗೆ ಅಡಿಪಾಯ ಹಾಕಿದಂದಿನಿಂದ ಇಲ್ಲಿ ಎಲ್ಲವನ್ನೂ ಸರಕಾಗಿ **(commodi-ty)** ಕಾಣುವುದು ಪ್ರಾರಂಭವಾಯಿತು. ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ (ಜೂಜುಕೋರ ಬಂಡವಾಳ) ಯಾವುದೇ ಅಡೆತಡೆ ಇಲ್ಲದೆ ಹರಿದಾಡಿದ ಪರಿಣಾಮ ಕ್ರಿಕೆಟ್‌ನಲ್ಲಿ ಬೆಟ್ಟಿಂಗ್ ಭೂತವೂ ತಿರುಗಾಡಲು ಆರಂಭಿಸಿತು. ಹೀಗಾಗಿ ಮ್ಯಾಚ್ ಫಿಕ್ಸಿಂಗ್ – ಸ್ಪಾಟ್ ಫಿಕ್ಸಿಂಗ್ ಆಗಿರುವುದು ಒಂದು ಆಕಸ್ಮಿಕ ಘಟನೆ ಅಲ್ಲ. ಬದಲಾಗಿ ಅದೊಂದು ಪ್ರಕ್ರಿಯೆ. ಈ ಪ್ರಕ್ರಿಯೆಯ ಭಾಗವಾಗಿ 'ಸಭ್ಯರ ಕ್ರೀಡೆ' ಕ್ರಿಕೆಟ್ ಬಂಡವಾಳದಾರರಿ... ಬಹಳ ದೊಡ್ಡ ಮಾರುಕಟ್ಟೆಯಾಯಿತು. ಕ್ರಿಕೆ–ಟಿಗರು ಸರಕುಗಳಾಗಿ ರೂಪಾಂತರಗೊಂಡರು. ಇಂಗ್ಲೆಂಡಿನಲ್ಲಿ ಜನಪ್ರಿಯವಾಗಿದ್ದ ಕೌಂಟಿ (ಕ್ಲಬ್) ಕ್ರಿಕೆಟ್ ಮಾದರಿಯನ್ನು ಇಂಡಿಯಾಗೆ ಎಳೆದು ತರಲಾಯಿತು. ಟೆಸ್ಟ್‌ನಿಂದ ಏಕದಿನ ನಂತರ 20–20 (ಟ್ವೆಂಟಿ–ಟ್ವೆಂಟಿ) ಎಂದು ಕರೆದು ದೇಶ ದೇಶಗಳ ನಡುವೆ ನಡೆಯುತ್ತಿದ್ದ ಆಟವನ್ನು ಪ್ರಾಂಚೈಸಿಗಳ ನಡುವಿನ ಆಟವಾಗಿ ಮಾರ್ಪಾಟು ಮಾಡಲಾಯಿತು. ಇದೇ ಇಂದು ಇಂಡಿಯನ್ ಪ್ರಿಮಿಯರ್ ಲೀಗ್ (ಐಪಿಎಲ್)ಎಂಬ ಹೆಸರಿನಲ್ಲಿ ನಡೆಯುತ್ತಿರುವ ಆಟವಲ್ಲ ಬದಲಾಗಿ ಮನರಂಜನೆಯ ಕೂಟ.

2006 ರಲ್ಲಿ ಜನ್ಮತಳೆದ ಈ ಐಪಿಎಲ್ ಬಂಡವಾಳದಾರರ, ಭೂಗತದೊರೆಗಳ ಹಾಗೂ ತೆರಿಗೆಗಳ್ಳ ಕಪ್ಪು ಹಣದ ಖದೀಮರ ಪಾಲಿಗೆ ಭಾಗ್ಯಲಕ್ಷ್ಮಿಯೇ ಮನೆಗೆ ಬಂದಂತಾಯಿತು. ಕ್ರಿಕೆಟ್ ಆಟಗಾರರು ಪ್ರಾಂಚೈಸಿಗಳ ಹರಾಜಿನಲ್ಲಿ ಅಕ್ಷರಶಃ ಸರಕುಗಳಾದರು. ರಾಷ್ಟ್ರೀಯ ತಂಡದಲ್ಲಿ ಸ್ಥಾನ ಸಿಗದೇ ರಣಜಿಯಲ್ಲೇ ತೃಪ್ತಿಕಾಣುತ್ತಿದ್ದ ಹಲವಾರು ಆಟಗಾರರು ಧಿಡೀರ್ ಶ್ರೀಮಂತರಾದರು. ವಿದೇಶಿ ಆಟಗಾರರು ಹಣ ತೈಲಿಗೆ ಆಕರ್ಷಿತರಾಗಿ ಐಪಿಎಲ್‌ನಲ್ಲಿ ನಾಮುಂದು – ತಾಮುಂದು ಎಂದು ಬಿಕರಿಯಾಗಲು ರೆಡಿಯಾದರು. ಹರಾಜಿನ ಹಣ ಮಾತ್ರವಲ್ಲದೇ ಲಕ್ಷ–ಲಕ್ಷ ರೂ.ಗಳ ಬಹುಮಾನಗಳು ಆಟಗಾರರನ್ನು ಉದ್ದೀಪನಗೊಳಿಸಿ ಪ್ರತಿ ಬಾಲ್ ಅನ್ನು ಸಿಕ್ಸರ್ ಎತ್ತುವ ಆಸೆ ಬುರುಕರನ್ನಾಗಿಸಲಾಯಿತು. ಅಂತರಾಷ್ಟ್ರೀಯ ಪಂದ್ಯಗಳಲ್ಲಿ ವಿಶ್ರಾಂತಿ ಸಿಗದಿದ್ದರೆ ಟೈಂ ಟೇಬಲ್ ಸರಿಪಡಿಸಿ ಎನ್ನುವ ಆಟಗಾರರು ಐಪಿಎಲ್‌ನಲ್ಲಿ ಎಡೆಬಿಡದೇ ಬೆವರು ಹರಿಸುತ್ತಿದ್ದಾರೆ. ಇವರ ಪರಿಶ್ರಮ ತೆ

ಪುಟ 4 ಕ್ಕೆ

ಸಂಪಾದಕೀಯ

ಅಗ್ಗದ ಅಕ್ಕಿಯಿಂದ ಆಲಸ್ಯ ಹೆಚ್ಚುವುದೆ?

ಎಪಿಎಲ್ – ಬಿಪಿಎಲ್ ಎಂಬ ತಾರತಮ್ಯವನ್ನು ತೆಗೆದುಹಾಕಿ ಎಲ್ಲ ಕುಟುಂಬಗಳಿಗೂ ಒಂದೇ ತೆರನಾದ ಪಡಿತರ(ರೇಷನ್) ಕಾರ್ಡುಗಳನ್ನು ವಿತರಿಸಿ, ಕೆ.ಜಿ.ಗೆ 2 ರೂ. ಮೀರದ ದರದಲ್ಲಿ ಪ್ರತಿಯೊಂದು ಕುಟುಂಬಕ್ಕೆ ತಿಂಗಳಿಗೆ 35 ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಬೇಕೆಂದು ಎಡಪಕ್ಷಗಳು ಕಳೆದ ಕೆಲವು ವರ್ಷಗಳಿಂದ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿವೆ. ರಾಜ್ಯದಲ್ಲಿ 14ನೇ ವಿಧಾನಸಭೆಗಾಗಿ ನಡೆದ ಚುನಾವಣೆಯಲ್ಲಿ ಸರಳ ಬಹುಮತ ಪಡೆದು ಅಧಿಕಾರವಹಿಸಿಕೊಂಡಿರುವ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ (ಮಾತ್ರ) ಕೆ.ಜಿ.ಗೆ 1 ರೂ. ದರದಲ್ಲಿ 30 ಕೆ.ಜಿ. ಅಕ್ಕಿಯನ್ನು ಬರುವ ಜೂನ್ 1 ರಿಂದಲೇ ವಿತರಿಸಲಾಗುವುದೆಂದು ಘೋಷಣೆ ಮಾಡಿದ್ದಾರೆ. ಒಂದು ಬಡ ಕುಟುಂಬಕ್ಕೆ ತಿಂಗಳಿಗೆ ಮೂವತ್ತೈದು ಕೆ.ಜಿ. ಯಾಗಲಿ, ಮೂವತ್ತೇ ಕೆ.ಜಿ. ಯಾಗಲಿ ಅಗ್ಗದ ಅಕ್ಕಿಯನ್ನು ವಿತರಿಸುವುದರಿಂದ ಬಡವರಲ್ಲಿ ಆಲಸ್ಯ ಹೆಚ್ಚುತ್ತದೆ; ಮೊದಲೇ ತೋಟ, ಗದ್ದೆಗಳಿಗೆ ಕೂಲಿಗೆ ಬರುವವರ ಸಂಖ್ಯೆ ಗಣನೀಯವಾಗಿ ಕುಸಿದಿದೆ; ಈಗ ತಿಂಗಳಿಗೆ ಮೂವತ್ತು ಕೆ.ಜಿ. ಅಕ್ಕಿ ಹೆಚ್ಚುಕಮ್ಮಿ ಪುಕ್ಕಟ್ಟೆ ಎಂಬಂತೆ ಸಿಗುತ್ತದೆ ಎಂದಾದರೆ ಮೊದಲು ತಿಂಗಳಿಗೆ ಹತ್ತೆಂಟು ದಿನವಾದರೂ ಕೆಲಸಕ್ಕೆ ಹೋಗುತ್ತಿದ್ದವರು ಇನ್ನು ಮುಂದೆ ಮನೆಯಲ್ಲೆ ಕುಳಿತು ಬಿಡುತ್ತಾರೆ ಎಂದು ಗ್ರಾಮೀಣ ಶ್ರೀಮಂತರು ಮತ್ತು ನಗರ ಪ್ರದೇಶಗಳ [illegible]ಲ್ ಮಧ್ಯಮ ವರ್ಗದ ಒಂದು ವಿಭಾಗ ದೊಡ್ಡ ರಾದ್ಧಾಂತವನ್ನೇ ಎಬ್ಬಿಸತೊಡಗಿದೆ.

ಸತ್ಯಕ್ಕೆ ದೂರವಾದ ವಾದಗಳಿವು. ಭಾರತದ ಬಡತನದ ಕನಿಷ್ಠ ಅರಿವು ಮತ್ತು ಬಡವರ ಬಗ್ಗೆ ಕನಿಷ್ಠ ಅನುಕಂಪ ಇಲ್ಲದವರ ತರ್ಕವಿದು. ತಮಿಳುನಾಡಿನಲ್ಲಿ ಕಳೆದ ಒಂದೆ-ರಡು ವರ್ಷಗಳಿಂದ ಬಡವರಿಗೆ ಉಚಿತವಾಗಿಯೇ ಅಕ್ಕಿಯನ್ನು ಕೊಡುತ್ತಾರೆ. ಅದರ ಪರಿಣಾಮವಾಗಿ ತಮಿಳುನಾಡಿನ ಬಡ ಕೂಲಿಕಾರರೆಲ್ಲರೂ ಕೆಲಸಮಾಡುವುದನ್ನು ಬಿಟ್ಟು ಮನೆಗಳಲ್ಲಿ ಕುಳಿತುಕೊಂಡಿದ್ದಾರಾ? ಬಡ ಕೂಲಿಕಾರರು ಹೊಟ್ಟೆಗಿಲ್ಲದೆ ಉಪವಾಸ-ವನವಾಸ ಅನುಭವಿಸುತ್ತಾ ತಮ್ಮ ಎದುರಿನಲ್ಲೇ ಬಿದ್ದಿರಬೇಕು, ತಮಗೆ ಬೇಕಾದಾಗಲೆಲ್ಲಾ ಇವರು ಬಂದು ತಾವು ಕೊಟ್ಟಷ್ಟು ಕೂಲಿಗೆ ದುಡಿಯುತ್ತಿರಬೇಕು ಎಂದು ಇವರು ಬಯಸುತ್ತಾರೆ. ಬಡ ಕೂಲಿಕಾರರೆಂದರೆ ಅವರು ನಮ್ಮ ಹಾಗೇ ಮನುಷ್ಯರು, ಅವರಿಗೂ ಬೇರೆ ಬೇರೆ ಅವಶ್ಯಕತೆಗಳು ಇರುತ್ತವೆ. ಅವುಗಳನ್ನು ಪೂರೈಸಿಕೊಳ್ಳಲು ಅವರು ಕಷ್ಟ ಪಟ್ಟು ದುಡಿಯುತ್ತಾರೆ ಎಂಬುದನ್ನು ಶ್ರೀಮಂತ ವರ್ಗ ಗಮನಿಸುವುದಿಲ್ಲ.

ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿರುವ ತನ್ನ ಗಂಡನ ಆರೈಕೆಗಾಗಿ ಹೆಂಡತಿ ದುಡಿಯುತ್ತಿರುತ್ತಾಳೆ. ಮದುವೆಯಲ್ಲಿ ಕೊಡಬೇಕಾಗುವ ವರದಕ್ಷಿಣೆ ಹಣವನ್ನು ಜೋಡಿಸಲು ಯುವತಿಯರು ನಗರ ಪ್ರದೇಶಗಳಿಗೆ ದುಡಿಯಲು ಹೋಗುತ್ತಾರೆ. ಶಾಲೆ ಕಾಲೇಜಿಗೆ ಬೇಕಾಗುವ ಹಣವನ್ನು ಸಂಗ್ರಹಿಸಲು ವಿದ್ಯಾರ್ಥಿಗಳು ಕಟ್ಟಡ ಕಾರ್ಮಿಕರಾಗಿ ದುಡಿಯಲು ಬೆಂಗಳೂರಿಗೆ ಬರುತ್ತಾರೆ. ನಗರಗಳಿಗೆ ವಲಸೆ ಬರುವ ಈ ಗ್ರಾಮೀಣ ಬಡಜನಗಳು ಎಲ್ಲಿಯೋ ರಸ್ತೆ ಬದಿಯಲ್ಲಿ, ಕೊಳಚೆ ಹರಿದು ಹೋಗುವ ಕಾಲುವೆ ಪಕ್ಕದಲ್ಲಿ ಡೇರೆಗಳನ್ನು ಹಾಕಿಕೊಂಡು ಜೀವನಸಾಗಿಸುತ್ತಾರೆ. ಇವರಿಗೆ ನಗರದಲ್ಲಿ ರೇಷನ್ ಕಾರ್ಡುಗಳು ದೊರೆಯುವುದಿಲ್ಲ. ಹಳ್ಳಿಯಲ್ಲಿ ಅವರಿಗೊಂದು ರೇಷನ್ ಕಾರ್ಡ್ ಇದ್ದರೆ ಅಲ್ಲಿ ಸಿಗುವ ಅಕ್ಕಿಯನ್ನೇ ಬೆಂಗಳೂರಿಗೆ ತಂದು ಅವರು ಊಟ ಮಾಡುತ್ತಾರೆ. ಇಲ್ಲದಿದ್ದರೆ ಇಲ್ಲಿ ಅಕ್ಕಿ ನುಚ್ಚನ್ನೇ ಅವರು ನೆಚ್ಚಿಕೊಳ್ಳಬೇಕಾಗುತ್ತದೆ. ರಾಜ್ಯದಲ್ಲಿರುವ ಇಂತಹ ಲಕ್ಷಾಂತರ ಕುಟುಂಬಗಳಿಗೆ ತಿಂಗಳಿಗೆ 30 ಕೆಜಿ ಅಗ್ಗದ ಅಕ್ಕಿ ಸಿಕ್ಕರೆ, ಅವರು ಆಹಾರದ ಬಹುಮುಖ್ಯ ಚಿಂತೆಯಿಂದ ಮುಕ್ತರಾಗಿ ತಮ್ಮ ಇತರ ಅವಶ್ಯಕತೆಗಳಿಗಾಗಿ ಬೇಕಾಗುವ ಹಣವನ್ನು ಸಂಗ್ರಹಿಸಲು ಇನ್ನು ಹೆಚ್ಚು ಕಷ್ಟ ಪಟ್ಟು ದುಡಿಯಲು ಸಾಧ್ಯವಾಗುತ್ತದೆ.


ಇಂದು ಕೂಲಿಕಾರ ಬಡವರ ಆದಾಯದಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಳ ಆಗಿರುವುದನ್ನೂ ಒಪ್ಪಿದರೂ ಅಗತ್ಯ ವಸ್ತುಗಳ ಬೆಲೆಗಳು ಯಾವ ಪ್ರಮಾಣದಲ್ಲಿ ಏರುತ್ತಿರುತ್ತವೆಯೋ, ಆ ಪ್ರಮಾಣದಲ್ಲಿ ಅವರ ಆದಾಯವಂತೂ ಏರುವುದಿಲ್ಲ. ಹೊಟ್ಟೆಗೆ ಬೇಕಾಗುವ ಅನ್ನವನ್ನು ಸರ್ಕಾರ ರೇಷನ್ ಮೂಲಕ ಒದಗಿಸಿದರೂ, ದುಬಾರಿಯಾಗಿರುವ ವಸತಿ, ಆರೋಗ್ಯ, ಶಿಕ್ಷಣ, ಪ್ರಯಾಣ ಮೊದಲಾದ ಬಾಬ್ತುಗಳಿಗೆ ಹಣ ಜೋಡಿಸಲು ಬಡವರು ಕಷ್ಟಪಟ್ಟು ದುಡಿಯದೆ ಬೇರೆ ದಾರಿ ಅವರಿಗಿಲ್ಲ. ತಿಂಗಳಿಗೆ ಬೇಕಾಗುವ ಅಕ್ಕಿ ಸಿಕ್ಕಿದೆ ಎಂದಾಕ್ಷಣ ಅವರು ಆಲಸಿಗಳಾಗಲು ಸಾಧ್ಯವಿಲ್ಲ. ಬದುಕಿನ ಇತರ ದುಬಾರಿಯಾಗುತ್ತಿರುವ ಕನಿಷ್ಠ ಅವಶ್ಯಕತೆಗಳಿಗಾಗಿ ಹಣ ಜೋಡಿಸಲು ದುಡಿಯಲೇ ಬೇಕಾಗುತ್ತದೆ.

ಒಬ್ಬ ಮನುಷ್ಯನಿಗೆ ಆರೋಗ್ಯವಾಗಿರಲು ತಿಂಗಳಿಗೆ ಕನಿಷ್ಠ 14 ಕೆ.ಜಿ. ಆಹಾರ ಬೇಕಾಗುತ್ತದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಒಂದು ಸಣ್ಣ ಕುಟುಂಬದಲ್ಲಿ ಇಬ್ಬರು ವಯಸ್ಕರು (ಗಂಡ-ಹೆಂಡತಿ) ಇದ್ದರೆ ಅವರಿಬ್ಬರಿಗೆ ತಿಂಗಳಿಗೆ 28 ಕೆ.ಜಿ. ಆಹಾರ ಬೇಕಾಗುತ್ತದೆ. ಮನೆಯಲ್ಲಿ ಒಂದೇ ಒಂದು ಮಗು ಇದೆ ಎಂದರೆ ಆ ಮಗುವಿಗೆ ತಿಂಗಳಿಗೆ ಕನಿಷ್ಟ 7 ಕೆ.ಜಿ. ಆಹಾರ ಬೇಕಾಗುತ್ತದೆ. ಅಂದರೆ ಒಂದು ಕಿರು ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ 7 ಕೆ.ಜಿ. ಆಹಾರ ಬೇಕಾಗುತ್ತದೆ. ಅಂದರೆ ಒಂದು ಕಿರು ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ 35 ಕೆ.ಜಿ. ಆಹಾರ ಬೇಕಾಗುತ್ತದೆ. ಆಹಾರವೆಂದರೆ ಅದು ಪೌಷ್ಠಿಕ ಆಹಾರವಾಗಿರಬೇಕು. ಅದರಲ್ಲಿ ಮೊಟ್ಟೆ,

ಪುಟ 6 ಕ್ಕೆ

ಮಂತ್ರಿಮಂಡಲ ರಚನೆ : ಮುಗಿಯದ ಕಾರುಭಾರು

ಸೋಮವಾರ ಪ್ರಮಾಣವಚನ ಸ್ವೀಕರಿಸಿದ್ದ ಸಿದ್ಧರಾಮಯ್ಯನವರು ಮಂತ್ರಿಮಂಡಲ ರಚಿಸಲು ವಾರದವರೆಗೂ ಕಾಯಬೇಕಾಗಿ ಬಂದ ಪ್ರಸಂಗವೇ ಕಾಂಗ್ರೆಸ್ ಒಳಗಿನ ರಸಾಯನವನ್ನು ಹೇಳುತ್ತದೆ. ಪ್ರಸ್ತುತವಾಗಿ ಮುಖ್ಯಮಂತ್ರಿಯವರನ್ನು ಒಳಗೊಂಡು ಒಟ್ಟು 34 ಜನ ಮಂತ್ರಿಗಳನ್ನು ಹೊಂದಬಹುದು . ಇದೀಗ 28 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಇನ್ನು 5 ಜನರನ್ನು ಸಚಿವರನ್ನಾಗಿಸಲು ಅವಕಾಶವಿದೆ. ಪಕ್ಷದೊಳಗಿನ ಒತ್ತಡಗಳು ಎರಡನೆಯ ಕಂತಿಗೆ ಹೋಗಲು ಕಾರಣ. ಇವುಗಳನ್ನು ತುಂಬಿಕೊಂಡು ಅತೃಪ್ತರನ್ನು ತೃಪ್ತಿಗೊಳಿಸುವ ಸಾಧ್ಯತೆ ಇದೆ. ಈಗಾಗಲೇ ಹೈಕಮಾಂಡ್ ಜೊತೆಗೆ ಒಂದು ಸುತ್ತಿನ ಮಾತುಕತೆ ಮುಗಿದಿವೆ. ಇದು ಪೂರ್ಣಗೊಂಡರೂ ಬಿರುಕಿರುವ ಕಾಂಗ್ರೆಸ್‌ನಲ್ಲಿ ತಿಕ್ಕಾಟ ನಿಲ್ಲುವ ಸಾಧ್ಯತೆಗಳೇ ಇಲ್ಲ.



ಮಂತ್ರಿಮಂಡಲವನ್ನು ರಚಿಸುವ ಮೂಲಕ ಸಿದ್ಧರಾಮಯ್ಯನವರು ಮೊದಲ ಯುದ್ಧ(?) ಗೆದ್ದಿದ್ದಾರೆ ಎಂದು ಬಣ್ಣಿಸಲಾಗುತ್ತಿದೆ. ಘಟನುಘಟಿಗಳೇ ತುಂಬಿರುವ ಕಾಂಗ್ರೆಸ್‌ನಲ್ಲಿ ಎಲ್ಲರೂ ಮುಖ್ಯ ಮಂತ್ರಿಯಾಗಬೇಕೆನ್ನುವವರೇ. ಹೀಗಾಗಿ ಮಂತ್ರಿಗಿರಿಗೆ, ಪ್ರಮುಖ ಖಾತೆಗಳಿಗೆ ಭಾರೀ ಲಾಭಿ ನಡೆದಿತ್ತು. ಇದರಲ್ಲಿ ಹಲವು ಹಗರಣಗಳಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿರುವ ಡಿ.ಕೆ.ಶಿವಕುಮಾರ್, ರೋಷನ್ ಬೇಗ್,ಮುಂತಾದವರಿಗೆ ಕಳಂಕಿತರೆಂದು ಹೊರಗಿಡಲಾಗಿದೆ. ಮೇಲಾಗಿ ಮೇಲ್ ಮನೆಯ ಸದಸದಸ್ಯರ್‍ಯಾರನ್ನೂ ಮಂತ್ರಿ ಮಾಡಲಾಗಿಲ್ಲ. ಜಾತಿ ಲೆಕ್ಕಾಚಾರದಲ್ಲಿ ಹಿಂದಿನ ಸರಕಾರಗಳಲ್ಲಿ ಅತಿ ಹೆಚ್ಚು ಸಚಿವರಾಗುತ್ತಿದ್ದ ಮೇಲ್ ಜಾತಿಗಳಾದ ಒಕ್ಕಲಿಗರು 6, ಲಿಂಗಾಯತರು 6 ಮತ್ತು ಬ್ರಾಹ್ಮಣ ಸಮುದಾಯಗಳಿಂದ ಬಂದ ಇಬ್ಬರಿಗೆ ಹಾಗೂ ಉಳಿದ 14 ಸ್ಥಾನಗಳನ್ನು ಅಲ್ಪಸಂಖ್ಯಾತ , ಹಿಂದುಳಿದ, ದಲಿತರಿಗೆ ನೀಡಲಾಗಿದೆ. ಹಿಂದಿನಂತೆ ಜಾತಿ ಪರಿಗಣನೆಯ ಪರಿಪಾಠವನ್ನೇ ಇಲ್ಲಿ ಪಾಲಿಸಲಾಗಿದ್ದು ಕಾಂಗ್ರೆಸ್ ಪಕ್ಷವು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅಹಿಂದ ಸೂತ್ರ ಹಿಡಿದು ಹೆಚ್ಚು ಸ್ಥಾನ ಗಳಿಸುವ ಲೆಕ್ಕಾಚಾರವೇ ಇಲ್ಲಿ ಕಾಣುತ್ತದೆ. ಆದ್ದರಿಂದಲೇ ಸಿದ್ಧರಾಮಯ್ಯನವರಿಗೆ ಸ್ವಲ್ಪ ಹೆಚ್ಚಿನ ಆಯ್ಕೆ ಸ್ವಾತಂತ್ರ್ಯ ನೀಡಿದೆಯಂತೆ. ಖಾತೆಗಳ ಹಂಚಿಕೆಗೂ ಸಹ.

ಮಂತ್ರಿಗಳು, ಮಂತ್ರಿಮಂಡಲ ಇಡೀ ರಾಜ್ಯಕ್ಕೆ ಸಂಬಂಧಿಸಿರುವುದು. ಅದು ಯಾವುದೇ ಜಾತಿ , ಜಿಲ್ಲೆಗಳ ಪರಿಗಣನೆ ಮೀರಿ ಅನುಭವ, ಉತ್ಸಾಹ, ಕ್ರಿಯಾಶೀಲತೆಯೇ ಪ್ರಧಾನ ಮಾನದಂಡವಾಗಿರಬೇಕು. ಈ ಗುಣಗಳೇ ಬೇಕಾಗಿರುವುದು. ಆದರೆ ಮಂತ್ರಿ ಪದವಿ ಪಡೆಯುವುದು, ಅಧಿಕಾರ ಅನುಭವಿಸುವುದು ಹಿರಿಮೆಯೆಂದೂ, ಜಾತಿ ಮೇಲಾಟದ ಸ್ಪರ್ಧೆಯಲ್ಲಿ ಸ್ಥಾನ ಗಿಟ್ಟಿಸಿಕೊಂಡು ಜಾತಿಗಳನ್ನು ಓಲೈಸುವುದು ಇಂದಿನ ಅನಾರೋಗ್ಯಕರ ಪ್ರವೃತ್ತಿಯಾಗಿದೆ. ಅದನ್ನೇ ಇವರೂ ಪಾಲಿಸಿದ್ದಾರೆ. ನಿಜ, ಕಳಂಕಿತರನ್ನು ಹೊರಗಿಡಲೇಬೇಕು. ಮುಂದೆಯೂ ಅದು ಎಷ್ಟು ಒತ್ತಡ ಬಂದರೂ ಸೇರಿಸಿಕೊಳ್ಳಕೂಡದು. ಆದರೆ ಇದರಲ್ಲಿ ಕಾಂಗ್ರೆಸ್ ಎಷ್ಟು ದಿನ ಈ ನಿಲುವನ್ನು ನಿರ್ವಹಿಸಲಿದೆ ನೋಡಬೇಕು. ಯಾ-ಕೆಂದರೆ ಕೇಂದ್ರದಲ್ಲೇ ಹಗರಣಗಳಿಂದ ಬಿರಿಯುತ್ತಾ, ಪ್ರಧಾನಿಯಾದಿಯಾಗಿ ಅಂತಹವರನ್ನೇ ಈಗಲೂ ಸಮರ್ಥಿಸಿಕೊಂಡು ಸಾಗುತ್ತಿರುವಾಗ ರಾಜ್ಯದಲ್ಲಿ ಎಷ್ಟು ದಿನ ಹೀಗೇ ಹೋಗಬಹುದು. ಕೆಲವು ಸಚಿವರ ರಾಜಿನಾಮೆ ಪಡೆಯಬೇಕಾಗುವ ಸನ್ನಿವೇಶದಿಂದ ಮುಜುಗರಕ್ಕೀಡಾಗುವುದನ್ನು ತಪ್ಪಿಸಿಕೊಳ್ಳಲು ನಡೆಸಿದ ಒಂದು ಪ್ರಯತ್ನವಾಗಿದೆ.

ಈ ಎಲ್ಲಾ ಪ್ರಸಂಗಗಳಿಂದ ಕಾಂಗ್ರೆಸ್ ಒಳಗೆ ಇರುವ ಅಧಿಕಾರದಾಹೀ ಅತೃಪ್ತರು ಸುಮ್ಮನೇ ಕೂಡುತ್ತಾರೆಂದು ಭಾವಿಸಲು ಸಾಧ್ಯವೇಇಲ್ಲ. ಮಂತ್ರಿಗಳಾದವರು ಹಣ ಹೆಚ್ಚು ಓಡಾಡುವ ಖಾತೆಗಳಿಗೆ ಖ್ಯಾತೆ ತೆಗೆದದ್ದಾಯಿತು. ಮುಖ್ಯಮಂತ್ರಿಗಳ ಆಪ್ತರಿಗೇ ದೊಡ್ಡ ಆದಾಯದ ಖಾತೆಗಳನ್ನು ನೀಡಲಾಗಿದೆಯೆಂದೂ ಆಕ್ಷೇಪಿಸಲಾಗಿದೆ, ಇನ್ನು ಸ್ಥಾನ ಸಿಗದವರ ಒಳ ಬಂಡಾಯ, ಲಾಭಿ ಒತ್ತಡಗಳು, ಬೀದಿ ಪ್ರತಿಭಟನೆಗಳು ಹೊಸ ಸ್ವರೂಪ ಪಡೆದರೆ ಆಶ್ಚರ್ಯವಿಲ್ಲ. ಆಕಾಂಕ್ಷಿಗಳಿಗೆ ಮಂತ್ರಿಗಿರಿ ಸಿಗದಿದ್ದಾಗ ಪಕ್ಷದ ಮುಖಂಡರ ಮನೆಮುಂದೆ ಮತ್ತು ಪಕ್ಷದ ಕಛೇರಿಗಳೆದುರು ನಡೆಸಿದ ಪ್ರತಿಭಟನೆಗಳು ಈ ಬಾರಿಯ ವಿಶೇಷವಾಗಿತ್ತು. ಕಛೇರಿಗಳ ಪೀಠೋಪಕರಣಗಳನ್ನು ಪುಡಿಗುಟ್ಟಿ . ಕೇಂದ್ರ ನಾಯಕರ ಫೋಟೋ ಹರಿದು ಹಾಕಿದ್ದು ಹೈಕಮಾಂಡ್ ನ ಸುಪ್ರೀಮಸಿ ವಿರುದ್ಧದ ಸೆಡ್ಡು ಹೊಡೆದಂತಾಗಿದೆ. ಇದು ಖಂಡಿತಕ್ಕೂ ಜಗಳವನ್ನು ಹೆಚ್ಚಿಸಲಿದೆ.

ಸಿದ್ಧರಾಮಯ್ಯನವರು ಹೇಳಿಕೊಂಡಂತೆ ಇದು ಮುಳ್ಳಿನ ಹಾದಿ ಇರಬಹುದು. ಆದ-ರೆ ಈ ಕಾಂಗ್ರೆಸ್ಸಿಗರು ತಮ್ಮ ಹಾದಿಯನ್ನು ಹೂವಿನದ್ದಾಗಿಸಿಕೊಳ್ಳುವ ಇರಾದೆಯಲ್ಲಿ ಜನರನ್ನು ಹಾದಿಗೆ ತಳ್ಳಬಾರದು.

ಆದ್ದರಿಂದ ಕೂಡಲೇ ಎಲ್ಲಾ ಖಾಲಿ ಇರುವ ಸ್ಥಾನ ತುಂಬಿ, ಜನರ ನಿರೀ-ಕ್ಷೆಗೆ ತಕ್ಕಂತೆ ಆಡಳಿತ ನಡೆಸಲು ಗಮನ ನೀಡಬೇಕು. ಹತ್ತಾರು ಸಮಸ್ಯೆಗಳಲ್ಲಿ ಜನ ತತ್ತರಿಸುತ್ತಿದ್ದಾರೆ ಎಂಬುದನ್ನು ಹೊಸ ಸೂತ್ರದಾರರು ನೆನಪಿನಲ್ಲಿಟ್ಟುಕೊಳ್ಳಬೇಕು.

ಐಎಎಸ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್‌ಗಳಿಸಿದ ಡಾ. ರಾಜೇಂದ್ರರಿಗೆ ಶುಭಾಶಯಗಳು.



ರಾಣೇಬೆನ್ನೂರ್ ತಾಲೂಕಿನ ಕರೂರು ಗ್ರಾಮದ ಡಾ. ರಾಜೇಂದ್ರ ಕೆ.ವಿ. ಇವರು ಐಎಎಸ್ ಪರೀಕ್ಷೆಯಲ್ಲಿ ರಾಷ್ಟ್ರ ಮಟ್ಟದಲ್ಲಿ 32ನೇ ರ್‍ಯಾಂಕ್ ಹಾಗೂ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ. ಅವರಿಗೆ 'ಜನಶಕ್ತಿ' ಕನ್ನಡ ವಾರ ಪತ್ರಿಕೆಯ ಪರವಾಗಿ ಹಾರ್ದಿಕ ಅಭಿನಂದನೆಗಳು.

ಡಾ. ರಾಜೇಂದ್ರ ಅವರ ತಂದೆ ವಿಶ್ವನಾಥ ಇಲ್ಲಿನ ರಾಮ್ಕೋ ಇಂಡಸ್ಟ್ರೀಸ್ ಕಂಪೆನಿಯಲ್ಲಿ ಕೆಲಸಮಾಡುತ್ತಿರುವ ಕಾರ್ಮಿಕ. ಇವರು ಮೂಲತಃ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನವರು. ತಂದೆ ವಿಶ್ವನಾಥ ಮತ್ತು ತಾಯಿ ಸುಲೋಚನಾ ಅವರ ಸೂಕ್ತ ಪ್ರೋತ್ಸಾಹದಿಂದ ಶ್ರಮಪಟ್ಟು ಓದಿ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಇಡೀ ಕರ್ನಾಟಕಕ್ಕೆ ಟಾಪರ್ ಆಗಿ ಹೊರಹೊಮ್ಮಿದ ಡಾ. ರಾಜೇಂದ್ರ ಫಲಿತಾಂಶ ಹೊರಬೀಳುತ್ತಿದ್ದಂತೆ ಪ್ರತಿಕ್ರಿಯಿಸಿದ್ದು ಹೀಗೆ. "ಹಳ್ಳಿ ಮತ್ತು ನಗರಗಳ ಮಧ್ಯ ಇರುವ ವಿಪರೀತ ತಾರತಮ್ಯವನ್ನು ಸರಿಪಡಿಸುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದಾಗ ಐಎಎಸ್ ಮಾಡುವ ಐಡಿಯಾ ಹೊಳೆಯಿತು. ಕಷ್ಟಪಟ್ಟು ಓದಿದೆ. ಇವತ್ತು 32ನೇ ರ್‍ಯಾಂಕ್ ಬಂದಿದ್ದೇನೆ ಅಂದ್ರೆ ನಂಬೋಕೆ ಆಗ್ತಿಲ್ಲ"


ಡಾ. ರಾಜೇಂದ್ರ ತಮ್ಮ ಪ್ರಾಥಮಿಕ ಮತ್ತು ಹೈಸ್ಕೂಲ್ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲೇ ಪೂರ್ಣಗೊಳಿಸಿದ್ದರು. ಪಿಯುಸಿ ಯಲ್ಲಿ ವಿಜ್ಞಾನ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಉತ್ತಮ ಅಂಕಗಳನ್ನು ಗಳಿಸಿ ತೇರ್ಗಡೆಯಾದ ಬಳಿಕ ದಾವಣಗೆರೆಯ ಬಾಪುಜಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪಾಸಾದರು. ಆದರೆ ಅಷ್ಟಕ್ಕೆ ಅವರು ತೃಪ್ತರಾಗಲಿಲ್ಲ. ತಮ್ಮ ಚಿಕ್ಕಂದಿನ ಐಎಎಸ್ ಕನಸು ಪದೇ ಪದೇ ನೆನಪಾಗುತ್ತಿತ್ತಂತೆ. ಸಾರ್ವಜನಿಕ ಸೇವೆಮಾಡುವ ಮಹದಾಸೆಯಿಂದ ಐಎಎಸ್ ಪಾಸು ಮಾಡಲು ನಿರ್ಧರಿಸಿದರು. ಈ ನಡುವೆ ಯುಪಿಎಸ್‌ಸಿಯ ಮಧ್ಯ ರೈಲ್ವೆ ಮೆಡಿಕಲ್ ಪರೀಕ್ಷೆಯಲ್ಲಿ ದೇಶಕ್ಕೇ 97ನೇ ರ್‍ಯಾಂಕ್ ಪಡೆದು ಸಫಲತೆ ಕಂಡಿದ್ದರು. ಕೊನೆಗೂ ಅಂದುಕೊಂಡಂತೆ ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು ಮಾತ್ರವಲ್ಲ ರಾಜ್ಯಕ್ಕೇ ಪ್ರಥಮ ಸ್ಥಾನ ಗಳಿಸುವಲ್ಲಿ ಯಶಸ್ವಿಯಾದರು.

ಕಾರ್ಮಿಕ ವರ್ಗದ ಹಿನ್ನೆಲೆಯ ಡಾ. ರಾಜೇಂದ್ರ ಅವರ ಈ ಮಹತ್ವದ ಸಾಧನೆಗಾಗಿ ರಾಮ್ಕೋ ಇಂಡಸ್ಟ್ರೀಸ್ ವರ್ಕರ್ಸ್ ಯೂನಿಯನ್ (ಸಿಐಟಿಯು) ಅವರರನ್ನು ಹಾರ್ದಿಕವಾಗಿ ಅಭಿನಂದಿಸುತ್ತದೆ.

-ಜಿ. ಮೌಲಾಸಾಬ್

ಹೀಗೊಂದು ಆದರ್ಶ ಅಂತರ್ ಜಾತಿಯ ವಿವಾಹ

ಹೊಸಪೇಟೆ ತಾಲೂಕಿನ ಕಡ್ಡಿರಾಂಪುರದದಲ್ಲಿ ಇತ್ತೀಚೆಗೊಂದು ಅಂತರ್ ಜಾತಿಯ ಮದುವೆ ನಡೆಯಿತು. ಗಂಡು ಮತ್ತು ಹೆಣ್ಣಿನ ಎರಡು ಕುಟುಂಬದವರು ಸೇರಿ ಮದುವೆ ನಡೆಸಿ ಕೊಟ್ಟಿದ್ದು ಇದರಲ್ಲಿ ವಿಶೇಷ. ರಾಜುನಾಯ್ಕ ಕಡ್ಡಿರಾಂಪುರದ ತಾಂಡದ ಕೂಲಿಕಾರ ಕುಟುಂಬದ ಒಬ್ಬ ಸಾಮಾನ್ಯ ಹುಡುಗ. ಕಳೆದೆರಡು ವರ್ಷದಲ್ಲಿ ತನ್ನ ತಂದೆ – ತಾಯಿಯನ್ನು ಕಳೆದುಕೊಂಡವ. ಜೊತೆಗೆ ಲಕ್ಷ್ಮೀ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯ ಬ್ರಾಹ್ಮಣ ಸಮುದಾಯದ ಯುವತಿ. ಇವರಿಬ್ಬರು ಕಳೆದ 7 ವರ್ಷಗಳಿಂದ ಪ್ರೀತಿ ಮಾಡುತ್ತಿದ್ದು ಇತ್ತೀಚೆಗೆ ಮದುವೆಯಾಗಿದ್ದಾರೆ. ಇವರು ಹೊಸಪೇಟೆಯಲ್ಲಿ ನರ್ಸಿಂಗ್ ಮುಗಿಸಿದ್ದಾರೆ. ಇವರು ಪ್ರೇಮ ಆರಂಭವಾಗಿದ್ದೆ ಕಾಲೇಜು ಜೀವನದಲ್ಲಿ. ಅಲ್ಲಿಂದ ಅರಂಭವಾದ ಪ್ರೇಮ ಮನೆಯಲ್ಲಿ ಮೊದಲು ತಿಳಿದ ತಕ್ಷಣವೇ ಅವರಿಬ್ಬರನ್ನು ದೂರ ಮಾಡಬೇಕೆಂದು ಹೆಣ್ಣಿನ ಮತ್ತು ಗಂಡಿನ ಕಡೆಯ ಸಮುದಾಯ ಜೋರಾಗಿ ಗಲಾಟೆ ಮಾಡಿದ್ದುಂಟು. ನಂತರ ಮನೆಗಳಲ್ಲಿ ಪ್ರೀತಿಸುತ್ತಿದ್ದ ಈ ಇಬ್ಬರ ಗಾಢ ಬದ್ಧತೆ ಅರಿತು ಕೊನೆಗೆ ಅವರಿಬ್ಬರನ್ನು ಮದುವೆ ಮಾಡಿಸಿದ್ದಾರೆ. ಪ್ರಸ್ತುತ ಈಗ ಇವರಿಬ್ಬರು ಸರಕಾರಿ ಆಸ್ಪತ್ರೆ ಹಡಗಲಿ ಮತ್ತು ಗಜೇಂದ್ರಗಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಮದುವೆ ಜಾತಿವಾದಿ ಚಿಂತನೆಗೆ ಪೆಟ್ಟು ಕೊಟ್ಟಿದ್ದು ಸಮಾನತೆಯ ಸಮಾಜ ಬಯಸುವವರಿಗೆ ಖುಷಿ ತಂದಿದೆ. ಈ ಪ್ರಸಂಗದಲ್ಲಿ "ಎಸ್‌ಎಫ್‌ಐ, ಡಿವೈಎಫ್‌ಐ" ಸಂಘಟನೆಯ ನಾಯಕರು ಪ್ರೇಮಿಗಳು ಒಂದಾಗಲು ಸಹಕಾರ ಬೆಂಬಲ ನೀಡಿದ್ದಾರೆ.



– ಸುರೇಶ್ ಚೌವ್ಹಾಣ್, ಹೊಸಪೇಟೆ


ಐಪಿಎಲ್ ಎಂಬ ....

ಪುಟ 2 ರಿಂದ

ಪ್ರತಿಯಾಗಿ ಫ್ರಾಂಚೈಸಿಗಳು ಆಟಗಾರರಿಗೆ ಪಾರ್ಟಿ, ಫ್ಯಾಶನ್ ಶೋ, ಏರ್ಪಡಿಸಿ ಮೋಜು–ಮಸ್ತಿಗೆ ಕೊರತೆಯಾಗದಂತೆ ನೋಡಿಕೊಳ್ಳುತ್ತಿವೆ. ಈ ಐಪಿಎಲ್ ಅಮಲಿನಲ್ಲಿ ಕೆಲ ಕ್ರಿಕೆಟಿಗರು ತಮ್ಮ ರಾಷ್ಟ್ರೀಯ ತಂಡವನ್ನು ತೊರೆಯಲು ಸಿದ್ಧರಿದ್ದಾರೆ. ವೆಸ್ಟ್ ಇಂಡೀಸ್ ಆಟಗಾರ ಕ್ರಿಸ್‌ಗೇಲ್ ಇದಕ್ಕೆ ಉದಾಹರಣೆಯಾಗಿ ಕಾಣುತ್ತಾರೆ.

ಬೆಟ್ಟಿಂಗ್‌ಗಾಗಿ ಫಿಕ್ಸಿಂಗ್

ಬಂಡವಾಳಶಾಹಿ ಲಾಭಕೋರತನ ಎನ್ನುವುದು ಭ್ರಷ್ಟಾಚಾರವನ್ನು ಮೈಗಂಟಿಸಿಕೊಂಡೇ ಬೆಳೆಯುತ್ತದೆ ಎಂಬುದನ್ನು ದೃಢಪಡಿಸುವಂತೆ ಕ್ರಿಕೆಟ್‌ನಲ್ಲಿ ಮ್ಯಾಚ್ ಫಿಕ್ಸಿಂಗ್–ಸ್ಪಾಟ್ ಫಿಕ್ಸಿಂಗ್ ಹಗರಣಗಳು ಒಂದೊಂದಾಗಿ ಹೊರ ಬರುತ್ತಿವೆ. ದಕ್ಷಿಣ ಆಫ್ರಿಕಾ ತಂಡದ ನಾಯಕನಾಗಿದ್ದ ಹ್ಯಾನ್ಸಿ ಕ್ರೋನಿಯೋ ಮೂಲಕ ಬಯಲಾದ ಈ ಫಿಕ್ಸಿಂಗ್ ಭೂತ, ಮ್ಯಾಚ್ ಫಿಕ್ಸಿಂಗ್‌ನಿಂದ ಸ್ಪಾಟ್ ಫಿಕ್ಸಿಂಗ್‌ಗೆ ಬಂದು ನಿಂತಿದೆ.



ಪೂರ್ಣ ಆಟದ ಸೋಲು–ಗೆಲುವುಗಳನ್ನು ಅಪರ ತಪರ ಮಾಡುವ ಮ್ಯಾಚ್ ಫಿಕ್ಸಿಂಗ್ ತುಸು ಕಷ್ಟವೆನಿಸತೊಡಗಿದಾಗ ಸ್ಪಾಟ್ ಫಿಕ್ಸಿಂಗ್ ದಾರಿ ಒದಗಿಸಿಕೊಟ್ಟಿದೆ. ಐಪಿಎಲ್ ಟೂರ್ನಿಯಲ್ಲಿ ಭೂಗತ ಜಗತ್ತು ಸಕ್ರಿಯವಾಗಿದೆ ಎಂಬ ವರದಿಗಳು ಬರುತ್ತಿವೆ. ಬಾಲಿವುಡ್ ಕೂಡ ಬುಕ್ಕಿಂಗ್‌ನೊಂದಿಗೆ ಸಂಬಂಧ ಬೆಸೆದು ಕೊಂಡಿರುವುದು ನಟ ವಿಂದೂ ದಾರಾಸಿಂಗ್ ಮೂಲಕ ಬಯಲಾಗಿದೆ. ಬೆಟ್ಟಿಂಗ್ ಮಾಫಿಯಾ ಐಪಿಎಲ್‌ನ ಸುತ್ತ ತನ್ನ ಕಬಂಧ ಬಾಹುಗಳನ್ನು ಚಾಚಿ ವಿಜೃಂಭಿಸುತ್ತಿದೆ.

ಮೋರಿಷಸ್ ಸೇರಿದಂತೆ ಹಲವು ದ್ವೀಪ ರಾಷ್ಟ್ರಗಳಿಂದ ಕೋಟ್ಯಾಂತರ ರೂಪಾಯಿ ಹಣ ರವಾನೆಯಾಗುತ್ತಿದೆ ಎಂದು ಹೇಳಲಾಗಿದೆ. ಆಘಾತಕಾರಿ ಅಂಶವೇನೆಂದರೆ ಫ್ರಾಂಚೈಸಿಗಳೇ ನೇರವಾಗಿ ಬೆಟ್ಟಿಂಗ್ ನಲ್ಲಿ ಭಾಗಿಯಾಗಿದ್ದಾರೆ ಎಂಬ ನಿರಾಕರಿಸಲಾಗದ ವರದಿಗಳು ಬರುತ್ತಿವೆ.

ಫ್ರಾಂಚೈಸಿಗಳ – ಸಂದೇಹದ ನಡೆ

ಐಪಿಎಲ್ ಫ್ರಾಂಚೈಸಿಗಳ ಹಿನ್ನೆಲೆಯನ್ನು ಗಮನಿಸಿದರೆ ಸಂದೇಹ ಮೂಡುವುದು ಸಹಜವೆನಿಸುತ್ತದೆ. ಬೆಂಗಳೂರು ರಾಯಲ್ ಚಾಲೆಂಜರ್ಸ್ ಮಾಲಿಕ ವಿಜಯ ಮಲ್ಯರ ವಾಣಿಜ್ಯ ಸಾಮ್ರಾಜ್ಯ ಕುಸಿದು ಬೀಳುವ ಅಪಾಯದಲ್ಲಿದೆ ಎಂದು ಹೇಳಲಾಗುತ್ತಿದೆ. ಆದರೆ ವಿಜಯ ಮಲ್ಯ ಮತ್ತು ಮಗ ಸಿದ್ಧಾರ್ಥ ಮಲ್ಯ ರೂಪದರ್ಶಿಯರ ಸಂಗಡ ಅರಾಮವಾಗಿ ಕಾಲಕಳೆಯುತ್ತಾ ಏನೂ ಆಗೆ ಇಲ್ಲವೆಂಬಂತೆ ಐಪಿಎಲ್‌ನಲ್ಲಿ ಬ್ಯುಸಿಯಾಗಿದ್ದಾರೆ. ಇನ್ನು ಎನ್. ಶ್ರೀನಿವಾಸನ್ ಬಿಸಿಸಿಐನ ಅಧ್ಯಕ್ಷರಾಗಿದ್ದುಕೊಂಡು ಚೆನ್ನೈ ಸೂಪರ್ ಕಿಂಗ್ಸ್ ಮಾಲಿಕರಾಗಿದ್ದಾರೆ. ಇವ[illegible] ಅಳಿಯ ಹಾಗೂ ಸಿಎಸ್‌ಕೆನ ಸಿಇಓ ಗುರುನಾ[illegible] ಮೇಯಪ್ಪನ್ ಬೆಟ್ಟಿಂಗ್ ಮಾಫಿಯಾದೊಂದಿ[ಗೆ] ಸಂಪರ್ಕ ಹೊಂದಿದ್ದಾರೆ ಎಂಬ ವರದಿಗ[ಳು] ಇವೆ. ಪುಣೆ ವಾರಿಯರ್ಸ್ ಮಾಲೀಕ ಸ[ಮೂಹ] ಸಹರಾ ಇತ್ತೀಚೆಗೆ ಐಟಿ ದಾಳಿಗೆ ಒಳಗಾಗಿ[ದ್ದು] ಈಗ ಅದು ಐಪಿಎಲ್‌ನಿಂದ ಹೊ[ರ] ಹೋಗಲು ನಿರ್ಧರಿಸಿದೆ. ಇವೆಲ್ಲವುಗ[ಳು] ಫ್ರಾಂಚೈಸಿಗಳ ಸಂದೇಹದ ನಡೆಯನ[್ನು] ಖಚಿತಪಡಿಸುವಂತಿವೆ.

ಏನಿದು ಸ್ಪಾಟ್ ಫಿಕ್ಸಿಂಗ್

ಕೆಲ ವರ್ಷಗಳ ಹಿಂದೆ ಪಾಕಿಸ್ತಾ[ನ] ಆಟಗಾರರಾದ ಸಲ್ಮಾನ್‌ಭಟ್, ಮಹಮ್ಮ[ದ್] ಆಸಿಫ್ ಎಂಬ ಇಬ್ಬರು ಕ್ರಿಕೆಟಿಗರು ಈ ಸ್ಪಾ[ಟ್] ಫಿಕ್ಸಿಂಗ್‌ನಲ್ಲಿ ಸಿಕ್ಕಿಬಿದ್ದಿದ್ದರು. ಮ್ಯಾಚ್ ಫಿಕ್ಸಿಂ[ಗ್] ಕಷ್ಟವೆನಿಸಿ ಬೆಟ್ಟಿಂಗ್ ಮಾಫಿಯಾ ಸ್ಪಾ[ಟ್] ಫಿಕ್ಸಿಂಗ್‌ಗೆ ಇಳಿಯಿತು. ತಂಡದ ಇಬ್ಬ[ರು] ಅಥವಾ ಮೂವರು ಆಟಗಾರರನ[್ನು] ಬುಕ್ ಮಾಡಿಕೊಂಡು 1 ಓವರ್‌ನ[ಲ್ಲಿ] ಇಂತಿಷ್ಟೇ ರನ್ ನೀಡಬೇಕು ಅಥವಾ ಬರಬೇಕು, ನೋಬಾ[ಲ್] ಅಥವಾ ವೈಡ್ ಹಾಕಬೇಕು ಇದಕ[್ಕೆ] ಇಂತಿಷ್ಟು ಹಣ ನೀಡುತ್ತೇವೆಂದು ಒಪ್ಪಂದವೇರ್ಪಡುತ್ತದೆ. ಇದರ ಮೇಲೆ ಬೆಟ್ಟಿಂಗ್ ಅಕ್ರಮ ನಡೆಯುತ್ತದೆ. ಅದೇ ರೀತಿ ರಾಜಸ್ತಾನ ರಾಯಲ್ಸ್ ತಂಡದ ಆಟಗಾರ[ರು] ಒಂದು ಓವರ್‌ನಲ್ಲಿ 12–14 ರನ್ ನೀಡಲು 60 ಲಕ್ಷ ರೂ. ಗೆ ಡೀಲ್ ಆಗಿದ್ದಾರೆ. ದುಡ್ಡು ಮಾಡಲು ಬೇರಾವ ದಾರಿ ಬೇಕು? ಕೇವಲ ಒಂದೇ ಓವರ್‌ನಲ್ಲಿ ಅವನ ಹಣೆಬರಹವೇ ಬದಲಾಗುತ್ತದೆ.

ಇನ್ನು ವಿಶ್ವಕಪ್ ಗೆದ್ದ ತಂಡದಲ್ಲಿದ್ದ ವೇಗದ ಬೌಲರ್ ಶ್ರೀಶಾಂತ್ ಹಾಗೂ ರಣಜಿ ಆಟಗಾರ ಅಂಕಿತ್ ಚೌಹಾಣ್ (ಈ ಮೂವರು ರಾಜಸ್ಥಾನ್ ರಾಯಲ್ಸ್ ಆಟಗಾರರು) ಫಿಕ್ಸಿಂಗ್‌ನಲ್ಲಿ ಸಿಕ್ಕಿಬಿದ್ದು ಬಂಧನದಲ್ಲಿದ್ದಾರೆ. ರಾಷ್ಟ್ರೀಯ ತಂಡದಲ್ಲಿದ್ದ ಶ್ರೀಶಾಂತ್ ಹಗರಣದಲ್ಲಿ ಭಾಗಿಯಾಗಿದ್ದು ಬಹುದೊಡ್ಡ ಚರ್ಚೆಗೆ ಗ್ರಾಸವಾಗಿದೆ. ವಿಚಾರಣೆಯ ವೇಳೆ ಈತ ಬುಕ್ಕಿಗಳಿಂದ ಎಂ.ಎಸ್. ಧೋನಿ ಮತ್ತು ಹರಭಜನ್‌ಸಿಂಗ್ ದುಬಾರಿ ಬೆಲೆಯ ಹಮ್ಮರ್ ಕಾರುಗಳನ್ನು ಉಡುಗೆಯಾಗಿ ಪಡೆದಿದ್ದಾರೆ ಎಂಬ ಸ್ಫೋಟಕ ಮಾಹಿತಿ ನೀಡಿದ್ದಾನೆ. ಈ ಬಗ್ಗೆ ತನಿಖೆಯಾಗಬೇಕಿದೆ.

ಜಾಗತೀಕರಣದ ಪರಿಣಾಮವಾಗಿ ಎಗ್ಗಿಲ್ಲದೆ ಹರಿದಾಡುತ್ತಿರುವ ಜೂಜುಕೋರ ಬಂಡವಾಳ ತನ್ನ ಲಾಭಕ್ಕಾಗಿ ಒಂದು ಕ್ರೀಡೆಯನ್ನು ಹೇಗೆ ಭ್ರಷ್ಟಗೊಳಿಸುತ್ತದೆ ಎಂಬುದಕ್ಕೆ ಇದೊಂದು ಜೀವಂತ ಪುರಾವೆ. ಸಾಮಾಜಿಕ ಮೌಲ್ಯಗಳು ಅಪಾಯದ ಸ್ಥಿತಿ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಕಾನೂನು ಅಸ್ತ್ರ ಬಳಸಿ ನಿಷ್ಪಕ್ಷಪಾತ ನಿಷ್ಠುರ ತನಿಖೆಯಾಗಬೇಕು. ಸತ್ಯ ಹೊರಬರಬೇಕು. ಆದರೆ ಆಳದಲ್ಲಿ ಕುಳಿತು ರಿಮೋಟ್ ಮೂಲಕ ನಿಯಂತ್ರಿಸುವ ಪ್ರಭುತ್ವ ಆಶ್ರಯದ ಮಾಫಿಯಾಗಳನ್ನು ಹೊರಗೆಳೆಯುವುದು ಸಾಧ್ಯವೇ?

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೊನೆಯ ಆ ಎರಡು ರಾತ್ರಿಗಳು ... ಬಾಗೇಪಲ್ಲಿ ಕ್ಷೇತ್ರದಲ್ಲಿ ಜರುಗಿದ ಪ್ರಮಾಧ

ಪಿ. ಮುನಿವೆಂಕಟಪ್ಪ

ಕರ್ನಾಟಕ ವಿಧಾನಸಭಾ ಚುನಾವಣೆ 2013 ಘೋಷಣೆಗೆ ಆರು ತಿಂಗಳ ಮುಂಚೆನೇ ಬಾಗೇಪಲ್ಲಿ ಕ್ಷೇತ್ರದಲ್ಲಿ ಚುನಾವಣೆ ಕಾವು ತಾರಕಕ್ಕೇರಿತ್ತು. ರಾಜ್ಯದ ಬಿ.ಜೆ.ಪಿ ಸರ್ಕಾರದ ಭ್ರಷ್ಟಾಚಾರ ಹಾಗೂ ಸ್ಥಳೀಯ ಕಾಂಗ್ರೆಸ್ ಶಾಸಕರ ಅಭಿವೃದ್ಧಿ ಕುರಿತಾದ ಅನಾಸಕ್ತಿಯಿಂದ ಇಡೀ ಕ್ಷೇತ್ರದ ಜನರ ಪ್ರತಿ-ರೋಧ ಉಕ್ಕೇರಿತ್ತು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ, ಅಭಿವೃದ್ಧಿಗೆ ಆದ್ಯತೆ ನೀಡದ ಆಡಳಿತ, ಸ್ವಜನ ಪಕ್ಷಪಾತ ಹಾಗೂ ದುರಾಡಳಿತ ಜನರ ಆಕ್ರೋಶಕ್ಕೆ ಕಾರಣವಾಗಿತ್ತು.

ಸಿ.ಪಿ.ಐ(ಎಂ) ಪಕ್ಷವು ಕ್ಷೇತ್ರದ ಜನರ ಜ್ವಲಂತ ಸಮಸ್ಯೆಗಳಾದ ಮನೆ ನಿವೇಶನ, ಕುಡಿಯುವ ನೀರು, ಗ್ರಾಮೀಣ ಉದ್ಯೋಗ ಖಾತ್ರಿ ಸಮರ್ಪಕ ಜಾರಿ, ಬರ ಪರಿಹಾರ ಕಾಮಗಾರಿಗಳ ಅನುಷ್ಠಾನ, ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ, ದಲಿತರ – ಮುಸ್ಲಿಂ ಅಲ್ಪಸಂಖ್ಯಾತರ, ಹಿಂದುಳಿದ ವರ್ಗಗಳ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರ ಹೋರಾಟಗಳನ್ನು ನಡೆಸಿ ಜನತೆಯನ್ನು ಕೆಂಬಾವುಟದ ಅಡಿಯಲ್ಲಿ ಅಣಿನೆರೆಸುತ್ತಾ ಬಲಿಷ್ಟ ಶಕ್ತಿಯಾಗಿ ಹೊರಹೊಮ್ಮುವ ಸ್ಥಿತಿಗೆ ತಲುಪಿತ್ತು.

ಇದರ ನಡುವೆಯೇ ಕ್ಷೇತ್ರದಲ್ಲಿ ಸಮಾಜ ಸೇವೆಯ ಹೆಸರಿನಲ್ಲಿ ಎಸ್.ಎನ್.ಸುಬ್ಬಾರೆಡ್ಡಿ ಎಂಬ ಹೋಟೆಲ್ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಸಾಮೂಹಿಕ (500) ಮದುವೆ, ವಧು–ವರರರಿಗೆ ಉಚಿತ ಸೀಮೆಹಸು ವಿತರಣೆ (ಕಡ್ಡಾಯವಾಗಿ ಬಾಗೇಪಲ್ಲಿ ಕ್ಷೇತ್ರದವರಿಗೆ ಮಾತ್ರ) ಮದುವೆಗಳ ಹೆಸರಿನಲ್ಲಿ ಕ್ಷೇತ್ರದಲ್ಲಿ ಎಲ್ಲಾ ಮಹಿಳೆಯರಿಗೆ ಅರಸಿನ, ಕುಂಕುಮ, ಬಳೆ ಹಾಗೂ ಸೀರೆ ವಿತರಣೆ ಹಾಗೂ ಜನರಿಗೆ ಮರಳು ಮಾಡುವ ಹಲವು ಸಮಾಜ ಸೇವೆಯ ಕಾರ್ಯಕ್ರಮಗಳನ್ನು ನಡೆಸಿ ಜನರನ್ನು ಆಕರ್ಷಿಸುವ ವಂಚನೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದರು. ಮತ್ತೊಂದೆಡೆ ಜೆ.ಡಿ.ಎಸ್, ಕಾಂಗ್ರೆಸ್, ಬಿ.ಜೆ.ಪಿ ಪಕ್ಷಗಳು ಮತದಾರನನ್ನು ಸೆಳೆಯಲು ಜಾತಿ ಹಾಗೂ ಹಣದ ಲೆಕ್ಕಾಚಾರದಲ್ಲಿ ತೊ– ಡಗಿದ್ದರು.

ಇಡೀ ಕ್ಷೇತ್ರದಲ್ಲಿ ಯುವ ಜನತೆ ಅತ್ಯಂತ ಉತ್ಸುಕವಾಗಿತ್ತು. ಸಿ.ಪಿ.ಐ(ಎಂ) ಅಭ್ಯರ್ಥಿ ಜಿ.ವಿ.ಶ್ರೀರಾಮರೆಡ್ಡಿ ನಾಮಪತ್ರ ಸಲ್ಲಿಕೆ ದಿನದಂದು ಸಿ.ಪಿ.ಐ(ಎಂ) ಪಕ್ಷ ಕೇವಲ 5000 ಜನರು ಕೆಂಪು ಸಮವಸ್ತ್ರಧಾರಿಗಳು ಮಾತ್ರ ಭಾಗವಹಿಸಲು ತೀರ್ಮಾನಿಸಿತ್ತು. ಆದರೆ ನಾಮಪತ್ರ ಸಲ್ಲಿಕೆಯ ದಿನ ಬೆಳಿಗ್ಗೆ 09 ಗಂಟೆಗೆ 10 ಸಾವಿರಕ್ಕೂ ಹೆಚ್ಚು ಜನ ಕೆಂಪು ಸಮವಸ್ತ್ರದಲ್ಲಿ ಹಾಜರಿದ್ದರು. ಸಂಜೆ 3 ಗಂಟೆ ವರೆಗೆ ನೀರಿಲ್ಲದೆ, ಊಟವಿಲ್ಲದೆ ಕಾಯುತ್ತಿದ್ದರು. ನಂತರ ರ್‍ಯಾಲಿ ಅತ್ಯಂತ ಆಕರ್ಷಕವಾಗಿ, ಶಿಸ್ತು ಬದ್ಧವಾಗಿ ಸಾಗಿ ಬಹಿರಂಗ ಸಭೆ ನಡೆಸಲಾಯಿತು. ಈ ಬಹಿರಂಗ ಸಭೆಗೆ ಸಿ.ಪಿ.ಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯರು ಹಾಗೂ ಆಂಧ್ರದ ಮಾಜಿ ಶಾಸಕರಾದ ಕಾಂ॥ ಅಬ್ದುಲ್ ಗಫೂರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ್ದರು. ಇದರಿಂದ ಕಂಗೆಟ್ಟ ಜೆ.ಡಿ.ಎಸ್, ಪಕ್ಷೇತರ, ಕಾಂಗ್ರೆಸ್ ಪಕ್ಷಗಳು ಅವರ ನಾಮಪತ್ರ ದಿನಾಂಕಗಳನ್ನು ಬದಲಿಸಿದರು. ಪ್ರಮುಖವಾಗಿ ಪಕ್ಷೇತರ ಅಭ್ಯರ್ಥಿ ಎಸ್.ಎನ್.ಸುಬ್ಬಾರೆಡ್ಡಿ ಸುಮಾರು 1 ½ ಕೋಟಿ ಖರ್ಚು ಮಾಡಿ ಆಂಧ್ರ ಹಾಗೂ ಇತರೆ ಕಡೆಗಳಿಂದ ಜನರನ್ನು ತಂದು ಏಪ್ರಿಲ್ 17 ರಂದು 20,000 ಜನರ ರ್‍ಯಾಲಿ ನಡೆಸಿ ನಾಮಪತ್ರ ಸಲ್ಲಿಸಿದರು. ಪ್ರಪ್ರಥಮ ಬಾರಿಗೆ 27 ಜನ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು



ವ್ಯಾಪಕ ಪ್ರಚಾರ :

ಏಪ್ರಿಲ್ 20 ರಿಂದ ಬಹಿರಂಗ ಚುನಾವಣಾ ಪ್ರಚಾರ ಪ್ರಾರಂಭವಾದಂತೆಯೇ ಸಿ.ಪಿ.ಐ(ಎಂ) ಪಕ್ಷ 14 ಧ್ವನಿವರ್ಧಕ ಕಾರುಗಳಲ್ಲಿ ಪ್ರಚಾರ ನಡೆಸಲು ಪ್ರಾರಂಭಿಸಿತು ಸಿ.ಪಿ.ಐ(ಎಂ) ಅಭ್ಯರ್ಥಿ ಕಾಂ॥ ಜಿ.ವಿ.ಶ್ರೀರಾಮರೆಡ್ಡಿರವರು ಸುಡು ಬಿಸಿಲಿನಲ್ಲಿ ಕ್ಷೇತ್ರದ ಪ್ರಮುಖ ಊರುಗಳಲ್ಲಿ ಮನೆ–ಮನೆ ಮತಯಾಚಿಸಿದರು. ಪ್ರಮುಖವಾಗಿ ಚಾಕವೇಲು, ಚೇಳೂರು, ಪುಲ್‌ಗಲ್. ಪಾಳ್ಯಕೆರೆ, ನಲ್ಲಗುಟ್ಲಪಲ್ಲಿ ಪಂಚಾಯ್ತಿ, ಪಾತಪಾಳ್ಯ, ಬಿಳ್ಳೂರು, ಗೂಳೂರು ಮಾರ್ಗಾನುಕುಂಟೆ, ಹಂಪಸಂದ್ರ, ಸೋಮೇನಹಳ್ಳಿ, ಸೋಮೇಶ್ವರ, ಗುಡಿಬಂಡೆ ಕಡೆಗಳಲ್ಲಿ ಮನೆ ಮನೆ ಮತಯಾಚಿಸಿದರು. ಉಳಿದಂತೆ ಪ್ರತಿ ಹಳ್ಳಿಗೂ ಬೇಟಿ ನೀಡಿ ಮತ ಯಾಚನೆಯನ್ನು ನಾಮಪತ್ರ ಸಲ್ಲಿಕೆಗೆ ಮುಂಚೆಯೇ ಮಾಡಿದ್ದರು.

ಸಿಪಿಐ(ಎಂ) ಪಕ್ಷದ ವತಿಯಿಂದ ಪ್ರಮುಖ ಕಡೆ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಬಾಗೇಪಲ್ಲಿ ಪಟ್ಟಣದಲ್ಲಿ 3 ಕಡೆ, ಬಿಳ್ಳೂರು, ಚಾಕವೇಲು, ಚೇಳೂರು, ಪಾತಪಾಳ್ಯ, ಮಿಟ್ಟೇಮರಿ, ಹಂಪಸಂದ್ರ, ಗುಡಿಬಂಡೆ ಕಡೆಗಳಲ್ಲಿ ಬಹಿರಂಗ ಸಭೆಗಳು ನಡೆಸಿ ಚುನಾವಣೆಯ ಮಹತ್ವ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತನಾಡಲಾಯಿತು. ಸಮಾಜಸೇವಕರ, ಕಾಂಗ್ರೆಸ್, ಜೆ.ಡಿ.ಎಸ್ ಸುಳ್ಳು ಭರವಸೆಗಳು ಹಾಗೂ ಇವರಿಂದಾಗುವ ಅಪಾಯಗಳ ಬಗ್ಗೆ ಸವಿವರವಾಗಿ ವಿವರಿಸಲಾಯಿತು. ಬಹಿರಂಗ ಸಭೆಗಳಿಗೆ ಸಾವಿರಾರು ಜನ ಸೇರುತ್ತಿದ್ದರು. ನಿಶಬ್ದದಿಂದ ಆಲಿಸುತ್ತಿದ್ದರು.


ಇಡೀ ಕ್ಷೇತ್ರದ ಯಾವುದೇ ಹಳ್ಳಿಯಲ್ಲಾಗಲಿ ಸಿಪಿಐ(ಎಂ) ಅಭ್ಯರ್ಥಿ ಜಿ.ವಿ. ಶ್ರೀರಾಮರೆಡ್ಡಿ ವಿರುದ್ದ ಯಾರೂ ಮಾತನಾಡುತ್ತಿರಲಿಲ್ಲ ಬದಲಿಗೆ ಉತ್ಸಾಹದಿಂದ ಮಾತನಾಡುತ್ತಿದ್ದರು. ಈ ಕ್ಷೇತ್ರ ಅಭಿವೃದ್ಧಿಯಾಗಬೇಕಾದರೆ. ಜಿ.ವಿ.ಎಸ್ ಗೆಲ್ಲಲೇ ಬೇಕು ಎಂಬ ಪ್ರಚಾರ ದಿನೇ ದಿನೇ ಹೆಚ್ಚುತ್ತಿತ್ತು. ವಿವಿಧ ಜನ ಸಮುದಾಯದ ಜನ ಬಂದು ಸಿಪಿಐ(ಎಂ) ಅಭ್ಯರ್ಥಿಗೆ ಬೆಂಬಲ ಕೋರಿ ಹೋಗುತ್ತಿದ್ದರು.

ಸಮರೋಪಾದಿಯಲ್ಲಿ ಸಿ.ಪಿ.ಐ(ಎಂ) ಕಾರ್ಯಕರ್ತರ ಚುನಾವಣಾ ಕೆಲಸ :-

ಇಡೀ ಕ್ಷೇತ್ರದಲ್ಲಿ ಸಿ.ಪಿ.ಐ(ಎಂ) ಕಾರ್ಯಕರ್ತರು ರಾತ್ರಿ–ಹಗಲು ಎನ್ನದೆ ತಮ್ಮ ಎಲ್ಲಾ ವಯುಕ್ತಿಕ ಕೆಲಸಗಳನ್ನು ಪಕ್ಕಕ್ಕೆ ಇಟ್ಟು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿ ಜನರಲ್ಲಿ ಮತ ಯಾಚಿಸಿ ಜನರನ್ನು ಜಾಗೃತಗೊಳಿಸುವಲ್ಲಿ ಅತ್ಯಂತ ಹೆಚ್ಚು ಶ್ರಮವಹಿಸಿ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಾ ಎಲ್ಲಾ ವಿರೋಧಿ ಶಕ್ತಿಗಳ ವಿರುದ್ಧ ಸೆಣ ಸಾಟ ಮಾಡಿದರು.

ಐತಿಹಾಸಿಕ ರ್‍ಯಾಲಿ ಮತ್ತು ಬಹಿರಂಗ ಸಭೆ:-

ಬಾಗೇಪಲ್ಲಿ ಕ್ಷೇತ್ರದ ಇತಿಹಾಸದಲ್ಲಿಯೇ ಐತಿಹಾಸಿಕ ರ್‍ಯಾಲಿ ಹಾಗೂ ಬಹಿರಂಗ ಸಭೆ ಏಪ್ರಿಲ್ 29ರಂದು ಸಿ.ಪಿ.ಐ(ಎಂ) ನಡೆಸಿತು. ಅಂದು ಬೆಳಿಗ್ಗೆ 10 ಗಂಟೆಯಿಂದಲೇ ಜನ ತಂಡೋಪತಂಡವಾಗಿ ಬಾಗೇಪಲ್ಲಿಗೆ



ಹಂಪಸಂದ್ರ ಕೆರೆ ಸಿಪಿಐ(ಎಂ) ಶಾಸಕರ ಅವಧಿಯಲ್ಲಿ ನಿರ್ಮಾಣವಾಗಿದ್ದು.

ಆಗಮಿಸುತ್ತಿದ್ದರು. ಬಾಗೇಪಲ್ಲಿಯ ಟಿ.ಬಿ ಕ್ರಾಸ್, ಗೂಳೂರು ರಸ್ತೆಯ ರಾಮಸ್ವಾಮಿಪಲ್ಲಿ ಬಳಿ, ನ್ಯಾಷನಲ್ ಕಾಲೇಜು ಮೈದಾನ ಈ ಮೂರು ಕಡೆಗಳಲ್ಲಿ ಜನರನ್ನು ಅಣಿನೆರೆಸಲಾಗಿತ್ತು. ಅಂದು ಮಧ್ಯಾಹ್ನ 12.30 ಗಂಟೆಗೆ ರ್‍ಯಾಲಿ ಪ್ರಾರಂಭಿಸಲಾಯಿತು. ಇಡೀ ರಸ್ತೆಯು ತುಂಬಿದ್ದ ಜನ 4 ಕಿ.ಮೀ ಉದ್ದವಿತ್ತು. ಈ ರ್‍ಯಾಲಿ ಹಾಗೂ ಬಹಿರಂಗ ಸಭೆಗೆ ಸುಮಾರು 35 ಸಾವಿರ ಜನ ಭಾಗವಹಿಸಿದ್ದರು. ಈ ಬಹಿರಂಗ ಸಭೆಗೆ ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರಾದ ಕಾಂ॥ ಸೀತಾರಾಂ ಯೆಚೂರಿ, ಖ್ಯಾತ ದಲಿತ ಸಾಹಿತಿ ದೇವನೂರು ಮಹದೇವರವರು ಭಾಗವಹಿಸಿ ಮಾತನಾಡಿದರು. ಈ ರ್‍ಯಾಲಿ ಇಡೀ ಕ್ಷೇತ್ರದ ಸಿ.ಪಿ.ಐ(ಎಂ) ವಿರೋಧಿಗಳಿಗೆ ಭೀತಿ ಹುಟ್ಟಿಸಿತು.

ಕೋಟಿ ಕೋಟಿ ರೂಪಾಯಿಗಳ ಸುರಿಮಳೆ :

ಸಿ.ಪಿ.ಐ(ಎಂ) ರ್‍ಯಾಲಿ ನೋಡಿ ಭೀತಿಗೊಂಡ ಪಕ್ಷೇತರ ಅಭ್ಯರ್ಥಿ ಎಸ್.ಎನ್.ಸುಬ್ಬಾರೆಡ್ಡಿ ಮತದಾರರಿಗೆ ಆಮಿಷಗಳನ್ನು ನೀಡಿ ಮತ ಗಳಿಸುವ ಪ್ರಯತ್ನವನ್ನು ಅತ್ಯಂತ ಅಚ್ಚುಕಟ್ಟಾಗಿ ನಡೆಸಲು ಪ್ರಾರಂಭಿಸಿದರು. ಪ್ರತಿ ಮನೆಗೆ 1 ಲಕ್ಷ ರೂ ಆರೋಗ್ಯ ಬಾಂಡ್ ವಿತರಣೆ, 50 ಪೈಸೆಗೆ ಟೀ/ಕಾಫಿ, 1ರೂಗೆ ಇಡ್ಲಿ, 3 ರೂ. ಗೆ ಟಿಫಿನ್, '5 ರೂಗೆ ಊಟ ಯೋಜನೆ ಅನುಷ್ಟಾನ ಹಾಗೂ ಹಣ ನೀಡುವ ಮೂಲಕ ಮತದಾರರನ್ನು ಬುಟ್ಟಿಗೆ ಹಾಕಿಕೊಳ್ಳುವ ಯತ್ನವನ್ನು ತೀವ್ರಗೊಳಿಸಿದರು.

ಚರಿತ್ರಾರ್ಹ ಬೈಕ್ ರ್‍ಯಾಲಿ :-

ಮೇ 2ರಂದು ಸಿ.ಪಿ.ಐ(ಎಂ) ಪಕ್ಷ ಬೈಕ್ ರ್‍ಯಾಲಿ ನಡೆಸಿತು. ಈ ರ್‍ಯಾಲಿಗೆ ಸ್ವಯಂ ಪ್ರೇರಿತವಾಗಿ 3000 ದ್ವಿಚಕ್ರ ವಾಹನಗಳು, 30 ವಾಹನಗಳು ರೋಡ್ ಶೋ ನಲ್ಲಿ ಭಾಗವಹಿಸಿದ್ದರು. ಇಡೀ ಕ್ಷೇತ್ರದಲ್ಲಿ ರೋಡ್ ಶೋ ನೀಡಿ ಮತದಾರರಲ್ಲಿ ಸಿ.ಪಿ.ಐ(ಎಂ) ಪರ ಒಲವು ಹೆಚ್ಚಿಸಲು ಸಾಧ್ಯವಾಯಿತು.

ಪುಟ 6 ಕ್ಕೆ

ಬಾಗೇಪಲ್ಲಿ ......

ಪುಟ 5 ರಿಂದ

ಕೊನೆಯ ಆ ಎರಡು ರಾತ್ರಿಗಳು :-

ಸಿ.ಪಿ.ಐ(ಎಂ) ಗೆಲ್ಲುವುದು ಖಚಿತವಾದ ತಕ್ಷಣ ರಾಜಕೀಯ ಧೃವೀಕರಣ, ಹಣದ ಸುರಿಮಳೆ ಊಹೆಗೆ ನಿಲುಕದ ರೀತಿಯಲ್ಲಿ ನಡೆಯಲು ಪ್ರಾರಂಭವಾಯಿತು.

ಮೇ 3 ರಾತ್ರಿ ಹಾಗೂ 4 ರಂದು ಇಡೀ ಕ್ಷೇತ್ರದಲ್ಲಿ ಒಂದೇ ಸಮಯದಲ್ಲಿ ಜೆ.ಡಿ.ಎಸ್, ಕಾಂಗ್ರೆಸ್, ಬಿ.ಜೆ.ಪಿ ಇತ-ರೇ ಪಕ್ಷೇತರರರನ್ನು ಖರೀದಿಸುವಲ್ಲಿ ಪಕ್ಷೇತರ ಅಭ್ಯರ್ಥಿ ಯಶಸ್ವಿಯಾದರು. ಎಲ್ಲಾ ಪಕ್ಷಗಳು ಸೇರಿ ಸಿಪಿಐ(ಎಂ)ನ್ನು ಸೋಲಿಸುವ ಒಪ್ಪಂದವಾಗಿ ರಾತೋ ರಾತ್ರಿ ಕೋಟಿ ಕೋಟಿ ಹಣ ಹಳ್ಳಿಗಳ ಜನರ ಮನೆಗಳಿಗೆ ತಲುಪಿತು. ಈ ಎರಡು ದಿನಗಳಲ್ಲಿ ಸುಮಾರು 70 ಕೋಟಿ ರೂ. ಹಣ ಹಂಚಿಕೆಯಾಗಿದೆ ಎಂಬುದು ಈಗ ಸುದ್ದಿಯಲ್ಲಿದೆ. ಓಟಿಗೆ 1000, 5000, 10000 ರೂ. ವರೆಗೆ ಹಂಚಿಕೆ ಮಾಡಿ ಮತದಾರರನ್ನು ಖರೀದಿಸಿದರು. ಸಿಪಿಐ(ಎಂ) ಕಾರ್ಯಕರ್ತರು ಪ್ರತಿ-ರೋಧ ನಡೆಸಿದರೂ ಸಹ ಅದನ್ನು ತಡೆಯಲು ಸಾಧ್ಯವಾಗಲಿಲ್ಲ. ಎರಡು ರಾತ್ರಿಗಳಲ್ಲಿಯೇ ಇಡೀ ಕ್ಷೇತ್ರದ ಪರಿಸ್ಥಿತಿಯನ್ನು ತಿರುವು ಮುರುವು ಮಾಡುವಲ್ಲಿ ಯಶಸ್ವಿಯಾದರು.

ಮೇ 5 ರಂದು ಮತದಾನ ನಡೆಯುವಾಗಲೇ ಫಲಿತಾಂಶವು ಸಿಪಿಐ(ಎಂ) ವಿರುದ್ಧ ಎಂಬುದು ಸ್ಪಷ್ಟವಾಯಿತು.

ಸಿಪಿಐ(ಎಂ) ಭದ್ರ ನೆಲೆಗಳಲ್ಲಿ ಲಕ್ಷ ಲಕ್ಷ ರೂ.ಗಳನ್ನು ಹಂಚಲಾಗಿದೆ. ಹಳ್ಳಿಗೆ 5 ಲಕ್ಷ, 20 ಲಕ್ಷ, 40 ಲಕ್ಷಗಳು ಹೀಗೆ ಹಂಚಲಾಗಿದೆ. ಎಲ್ಲಾ ಪಕ್ಷಗಳು ಒಂದಾಗಿ ಸಿಪಿಐ(ಎಂ)ನ್ನು ಸೋಲಿಸಲು ಪಕ್ಷೇತರ ಅಭ್ಯರ್ಥಿ ಎಸ್. ಎನ್. ಸುಬ್ಬಾರೆಡ್ಡಿಗೆ ಮತ ಹಾಕಿಸಿ ಕ್ಷೇತ್ರವನ್ನು ಮಾರಾಟ ಮಾಡಿದ್ದು ಜನತೆಗೆ ಮಾಡಿದ ದ್ರೋಹವಾಗಿದೆ.

ಕ್ಷೇತ್ರದ ಚುನಾವಣಾ ಅಧಿಕಾರಿಗಳು, ಪೋಲೀಸರು ಪಕ್ಷೇತರ ಅಭ್ಯರ್ಥಿಯ ಏಜೆಂಟ್‌ರು!!!

ಚುನಾವಣೆ ಪ್ರಚಾರ ಪ್ರಾರಂಭವಾದಾಗಲಿಂದಲೇ ಕ್ಷೇತ್ರದಲ್ಲಿ 700ಕ್ಕೂ ಹೆಚ್ಚು ಬೇರೆ ರಾಜ್ಯದ ಜನ ಪಕ್ಷೇತರ ಅಭ್ಯರ್ಥಿಪರ ಪ್ರಚಾರ ನಡೆಸಿ ಮತಪಟ್ಟಿ ಹಿಡಿದು ಹಳ್ಳಿ ಹಳ್ಳಿಗೆ ಹೋಗಿ ಮತದಾರರ ಖರೀದಿಯಲ್ಲಿ ತೊಡಗಿದ್ದರು. ಇದನ್ನು ಚುನಾವಣಾ ಅಧಿಕಾರಿಗಳಿಗೆ ತಿಳಿಸಿದರೆ 'ಆಯ್ತು, ನಾವು ಸರಿಪಡಿಸುತ್ತೇವೆ' ಎಂದು ಹೇಳಿ ಅವರಿಗೆ ಪೋನ್ ಮಾಡಿ ನಿಮ್ಮ ಮೇಲೆ ಸಿಪಿಐ(ಎಂ) ಕಂಪ್ಲೇಟ್ ಮಾಡಿದೆ. ಈಗ ನಾವು ಬರುತ್ತಿದ್ದೇವೆ. ನೀವು ಬೇರೆ ಊರಿಗೆ ಹೋಗಿ ಎಂದು ಚುನಾವಣೆಯ ಅಧಿಕಾರಿಗಳು ಮಾಹಿತಿ ನೀಡಿ ಸ್ಥಳಕ್ಕೆ ಹೋಗಿ ಯಾರೂ ಇಲ್ಲ ಎಂದು ಹೇಳುತ್ತಿದ್ದರು.



ಗುಡಿಬಂಡೆ ಸರ್ಕಾರಿ ಪದವಿ ಕಾಲೇಜು ಜೆ.ವಿ. ಶ್ರೀರಾಮರೆಡ್ಡಿಯವರು ಶಾಸಕರಾಗಿದ್ದಾಗ ನಿರ್ಮಾಣಗೊಂಡಿದ್ದು. 5 ವರ್ಷದ ಕೊನೆಯಲ್ಲಿ ಕಟ್ಟಡಕ್ಕೆ ಸುಣ್ಣ ಬಣ್ಣ ಬಳಿಸಿದ್ದೆ ಕಾಂಗ್ರೆಸ್ ಶಾಸಕರ ಸಾಧನೆ. ಕಟ್ಟಡದ ಮೇಲಿನ ಮಹಡಿ ಕೆಲಸ ಮುಂದುವರಿಯಲೇಇಲ್ಲ.

ಕೋಟಿ ಕೋಟಿ ರೂ. ಹಣ ಬಚ್ಚಿಟ್ಟಿರುವ ಮನೆಗಳನ್ನು ಗುರುತಿಸಿ ಮಾಹಿತಿ ನೀಡಿದರೆ ತಕ್ಷಣ ಆರ್.ಓ ಅವರು ಪಕ್ಷೇತರ ಅಭ್ಯರ್ಥಿಗೆ ಪೋನ್ ಹಾಕಿ ಸಿಪಿಐ(ಎಂ) ನವರು ಹಣ ಬಚ್ಚಿಟ್ಟಿರುವ ಬಗ್ಗೆ ದೂರು ನೀಡಿದ್ದಾರೆ. ನಾವು ಈಗ ಹೊರಡುತ್ತಿದ್ದೇವೆ. ನೀವು ಹಣದ ಸ್ಥಳ ಬದಲಿಸಿ ಎಂದು ಮಾಹಿತಿ ನೀಡುತ್ತಿದ್ದರು. ಇಡೀ 15ದಿನ ಸಿಪಿಐ(ಎಂ) ಹಣ ಹಂಚಿಕೆ ಬಗ್ಗೆ ಎಷ್ಟೇ ದೂರು ನೀಡಿದರು ಪ್ರಯೋಜನವಾಗಲಿಲ್ಲ. ಚುನಾವಣಾ ಅಧಿಕಾರಿಗಳಿಗೆ ಸಿಪಿಐ(ಎಂ)ನವರು ಪೋನ್ ಮಾಡಿದರೆ ಲಿಫ್ಟ್ ಕೂಡ ಮಾಡುತ್ತಿರಲಿಲ್ಲ.

ಪೊಲೀಸರೇ ಹಣ ಹಂಚಿದರು, ಸಾರಾಯಿ ಹಂಚಿದರು!!

ಕ್ಷೇತದಲ್ಲಿ ಪೊಲೀಸ್ ಠಾಣೆಯಲ್ಲಿಯೇ ಹಣ ಹಂಚಿಕೆ, ಮದ್ಯ ಹಂಚಿಕೆ ನಡೆಯುತ್ತಿತ್ತು. ಪಾತಪಾಳ್ಯ ಪೊಲೀಸ್ ಠಾಣೆಯಲ್ಲಿ ಪೊಲೀಸರೇ ಹಣ ಹಂಚಿದ್ದಾರೆ, ಮದ್ಯ ಹಂಚಿದ್ದಾರೆ ಬಾಗೇಪಲ್ಲಿ ಎ.ಎಸ್.ಐ, ಕಾನ್ಸ್‌ಟೇಬಲ್‌ಗಳು ಸ್ವತಃ ಅವರ ವಾಹನದಲ್ಲಿ ಹಣವನ್ನು ಹಳ್ಳಿಗಳಿಗೆ ಸರಬರಾಜು ಮಾಡಿದರು. ಇದರ ಬಗ್ಗೆ ದೂರು ನೀಡಿದರೂ ಕೇಳುವವರು ಯಾರೂ ಇರಲಿಲ್ಲ. ಯಾಕೆಂದರೆ ಸಬ್‌ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್, ಡಿ.ವೈ.ಎಸ್.ಪಿ ಎಲ್ಲರೂ ಷಾಮೀಲಾಗಿದ್ದರು.

ಒಟ್ಟಾರೆಯಾಗಿ ಚುನಾವಣಾ ಆಯೋಗದ ನಿಮಯಗಳನ್ನೇ ಗಾಳಿಗೆ ತೂರಿ ಚುನಾವಣಾಧಿಕಾರಿಗಳು ಹಾಗೂ ಪೊಲೀಸರು ಪಕ್ಷೇತರ ಅಭ್ಯರ್ಥಿ ಎಸ್.ಎನ್. ಸುಬ್ಬಾರೆಡ್ಡಿ ಏಜೆಂಟ್‌ರಾಗಿ ಕೆಲಸ ನಿರ್ವಹಿಸಿದರು.

ಈ ಚುನಾಚಣೆಯಲ್ಲಿ 152ಕೋಟಿ ರೂ. ಖರ್ಚು ಮಾಡಿ ಪಕ್ಷೇತರ ಅಭ್ಯರ್ಥಿ ಗೆಲುವು ದಾಖಲಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲುಗೊಳಿಸಿ ಶಾಸಕರಾಗಿದ್ದಾರೆ.

ವರ್ಗ ವಿಂಗಡನೆ :-

ಇಡೀ ಕ್ಷೇತ್ರದಲ್ಲಿ ಜನರ ವರ್ಗ ವಿಂಗಡನೆ ಯಾಗಿದೆ. ದಲಿತ-ಹಿಂದುಳಿದ, ಅಲ್ಪಸಂಖ್ಯಾತ ಬಹುಜನರು ಸಿಪಿಐ(ಎಂ)ನ್ನು ಬೆಂಬಲಿಸಿದರೆ ಭೂಮಾಲಿಕ ಮನೋಭಾವದ ಜನ ಈ ಚುನಾವಣೆಯಲ್ಲಿ ಪಕ್ಷಬೇಧ ಮರೆತು ಒಂದಾಗಿ ಸಿಪಿಐ(ಎಂ)ನ್ನು ಸೋಲಿಸು ಯಶಸ್ವಿಯಾಗಿದ್ದಾರೆ. ಅವರಿಂದ ಸಿಪಿಐ(ಎಂ)ನ್ನು ನಿರ್ನಾಮ ಮಾಡುತ್ತೇವೆ ಎಂಬ ಮಾತುಗಳು ಹೊರಬರುತ್ತಿವೆ. ಸಿಪಿಐ(ಎಂ)ಪಕ್ಷ ಹಲವು ದಶಕಗಳಿಂದ ಸಾಮಾನ್ಯ ಜನರನ್ನು ಸಂಘಟಿಸಿ ಭೂ ಹೋರಾಟಗಳ ಮೂಲಕ ಜನರ ಜ್ವಲಂತ ಸಮಸ್ಯೆಗಳ ಹೋರಾಟಗಳ ಮೂಲಕ ಬೆಳೆದಿದ್ದ ಪರಿಣಾಮವಾಗಿ ವಿರೋಧಿಗಳು 152 ಕೋಟಿ ಖರ್ಚು ಮಾಡಿದರೂ 35,500 ಮತದಾರರು ಸಿಪಿಐ(ಎಂ)ನ್ನು ಬೆಂಬಲಿಸಿದ್ದಾರೆ. ಸಿಪಿಐ(ಎಂ) ಪಕ್ಷದಲ್ಲಿ ಶೇ 85 ಜನ ಯುವಜನರಿದ್ದಾರೆ. ಪಕ್ಷದ ಸಂಘಟನೆಯನ್ನು ವಿಸ್ತರಿಸಿ ಬಲಿಷ್ಟಗೊ ಬಂಡವಾಳಶಾಹಿ ನೀತಿಗಳ ವಿರುದ್ಧ ಬಲಿಷ್ಠ ಚಳುವಳಿಗಳ ಮೂಲಕ ದುಡಿಯುವ ಜನರ ಐಕ್ಯತೆಯೊಂದಿಗೆ ಮುಂದಿನ ದಿನಗಳಲ್ಲಿ ಕೆಲಸ ಮಾಡುವ ಮೂಲಕ ಸಿಪಿಐ(ಎಂ) ಬಲಿಷ್ಟ ಶಕ್ತಿಯಾಗಿ ಹೊರಹೊಮ್ಮುವ ಶಕ್ತಿ ಸಿಪಿಐ(ಎಂ) ಪಕ್ಷಕ್ಕೆ ಇದೆ. ಯಾವ ಶಕ್ತಿಯೂ ಸಿಪಿಐ(ಎಂ)ನ್ನು ನಾಶ ಮಾಡಲು ಸಾಧ್ಯವಿಲ್ಲ.

ಈಗ ಮತ್ತೆ ಭೂಮಾಲಿಕ ಬಂಡವಾಳಶಾಹಿ, ಪರ ಶಕ್ತಿಗಳ ಒಗ್ಗಟ್ಟಿನ ಈ ಯಶಸ್ಸು ತಾತ್ಕಾಲಿಕ. ದುಡಿಯುವ ವರ್ಗದ ನಾಯಕತ್ವಕ್ಕೆ ಕ್ಷೇತ್ರವನ್ನು ವಾಪಸ್ ತರುವ ಛಲ ಸಿ.ಪಿ.ಐ(ಎಂ)ದ್ದಾಗಿದೆ. ಆ ನಿಟ್ಟಿನಲ್ಲಿ ಚಳುವಳಿಗಳ ಮೂಲಕ ಯಶಸ್ಸಿಗಾಗಿ ಕೆಲಸ ಮಾಡಬೇಕಾಗಿದೆ.

ಅಗ್ಗದ ಅಕ್ಕಿಯಿಂದ.....

ಪುಟ 3 ರಿಂದ

ಮಾಂಸ, ಹಾಲು, ಹಣ್ಣು ಸೇರಿರಬೇಕು. ಇಂತಹ ಪೌಷ್ಠಿಕ ಆಹಾರವನ್ನು ಕೊಂಡುಕೊಳ್ಳಲು ಸಾಮರ್ಥ್ಯ ಇಲ್ಲದ ನೂರಕ್ಕೆ 70 ರಷ್ಟು ಜನ ದೇಶದಲ್ಲಿ ಇದ್ದಾ-ರೆ. ಅವರೆಲ್ಲರಿಗೆ ಸರ್ಕಾರ ತಿಂಗಳಿಗೆ 35 ಕೆ.ಜಿ. ಯಷ್ಟು ಪೌಷ್ಠಿಕ ಆಹಾರವನ್ನು ಅಗ್ಗದ ದರದಲ್ಲಿ ಪೂರೈಸಬೇಕು. ಅಲ್ಲಿಯವರೆಗೆ ಅಕ್ಕಿಯನಾದರೂ ತಿಂಗಳಿಗೆ 35 ಕೆ.ಜಿ. ಕೊಡಬೇಕು. ಕನಿಷ್ಠ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆ ಅಕ್ಕಿಯ ಜೊತೆಯಲ್ಲಿ ಬೇಳೆಕಾಳುಗಳನ್ನಾದರೂ ವಿತರಿಸಲು ಆರಂಭಿಸಬೇಕು.

30 ಕೆ.ಜಿ. ಅಕ್ಕಿ ಕೊಡುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಘೋಷಣೆ ಸರಿಯಾಗಿಯೇ ಇದೆ. ಎಷ್ಟೇ ವಿರೋ ಧ ಬಂದರೂ ಸಿದ್ದರಾಮಯ್ಯನವರು ಅದನ್ನು ಜಾರಿಗೆ ತರಬೇಕು. ಅವರು ಕೇಂದ್ರ ಸರ್ಕಾರದ ಅಸಹಕಾರ, ತನ್ನ ಸ್ವಂತ ಪಕ್ಷದೊಳಗಿನ ವಿರೋಧವನ್ನು ಎದುರಿಸಬೇಕಾಗಬಹುದು. ಸಿದ್ದರಾಮಯ್ಯ ಬಡವರ ಪರವಾಗಿ ನಿಂತರೆ ಬಡವರು ಅವರ ಪರವಾಗಿ ನಿಲ್ಲುತ್ತಾರೆ.

ಕೇಂದ್ರ ಸರ್ಕಾರ ತನ್ನ ಉದಾರೀಕರಣ ನೀತಿಯ ಭಾಗವಾಗಿ ಬಡವರ ಪರವಾದ ಜವಾಬ್ದಾರಿಗಳಿಂದ ಹೆಚ್ಚು ಹೆಚ್ಚಾಗಿ ಹಿಂದ-ಕ್ಕೆ ಸರಿಯುತ್ತಿದೆ. ಆರಂಭದಲ್ಲಿ, ವಿತರಿಸುವ ಅಕ್ಕಿಯ ಪ್ರಮಾಣವನ್ನು ಅದು ಹೆಚ್ಚಿಸಲು ಒಪ್ಪಬಹುದು. ಆದರೆ ಬಿಪಿಎಲ್ ಕಾರ್ಡುಗಳ ಸಂಖ್ಯೆಯನ್ನು ಗರಿಷ್ಠ ಪ್ರಮಾಣದಲ್ಲಿ ಕಡಿತ ಮಾಡುವುದು ಅದರ ಉದ್ದೇಶವಾಗಿದೆ. ಇದರಿಂದಾಗಿ ಪಡಿತರ ವ್ಯವಸ್ಥೆಯ ಮೂಲ ಉದ್ದೇಶಕ್ಕೆ ದಕ್ಕೆಯಾಗುತ್ತದೆ. ಟಾರ್ಗೆಟ್ ಪದ್ಧತಿಯನ್ನು ಮುಂದುವರಿಸಿದರೆ ಅರ್ಹ ಕುಟುಂಬಗಳಿಗೆ ಬಿಪಿಎಲ್ ಕಾರ್ಡುಗಳು ಸಿಗುವುದಿಲ್ಲ. ಸೀಮಿತ ಸಂಖ್ಯೆಯಲ್ಲಿ ಒದಗಿಸುವ ಬಿಪಿಎಲ್ ಕಾರ್ಡುಗಳು ಅನುಕೂಲಸ್ಥರ ಪಾಲಾಗುತ್ತವೆ. ಬಡವರು ಪಡಿತರ ವ್ಯವಸ್ಥೆಯಿಂದ ದೊಡ್ಡ ಸಂಖ್ಯೆಯಲ್ಲಿ ಹೊರಗೆ ಉಳಿಯುತ್ತಾರೆ. ಆದ್ದರಿಂದಲೇ ಎಪಿಎಲ್-ಬಿಪಿಎಲ್ ಭೇದವನ್ನು ತೆಗೆದು ಹಾಕಲು ಒತ್ತಾಯಿಸುವುದು ಬಹಳ ಮುಖ್ಯವಾಗಿದೆ. ಹಾಗೆಯೇ ಆಹಾರ ಸಬ್ಸಿಡಿಯನ್ನು ನೇರ ನಗದು ವರ್ಗಾವಣೆ ಮೂಲಕ ಒದಗಿಸುವ ಮೋಸದ ಯೋಜನೆಯನ್ನು ಕರ್ನಾಟಕದಲ್ಲಿ ಜಾರಿಗೊಳಿಸಲು ಒಪ್ಪಬಾರದು.

ಸಿದ್ದರಾಮಯ್ಯನವರು ಮುಂಬರುವ ಲೋಕಸಭಾ ಚುನಾವಣೆಯ ಮೇಲೆ ಕಣ್ಣಿಟ್ಟು ಈ ಘೋಷಣೆ ಮಾಡಿರಬಹುದು. ಆದ-ರೆ ಘೋಷಣೆ ಯೋಗ್ಯವಾಗಿಯೇ ಇದೆ. ತಕ್ಷಣ ಪಡಿತರ ಕಾರ್ಡುಗಳ ವಿತರಣೆಗೆ ಸರ್ಕಾರ ಕ್ರಮಕೈಗೊಳ್ಳಬೇಕಾಗಿದೆ. ಬಿಪಿಎಲ್ ಕಾರ್ಡ್ ವಂಚಿತ ಬಡವರಲ್ಲಿ ಈಗ ಬಿಪಿಎಲ್ ಕಾರ್ಡ್‌ಗಳಿಗಾಗಿ ಹಾಹಾಕಾರ ಎದ್ದಿದೆ. ಹೆಚ್ಚು ಬಯೋಮೆಟ್ರಿಕ್ ಕೇಂದ್ರಗಳನ್ನು ತೆ-ರೆದು ಕಾರ್ಡುಗಳ ತುರ್ತು ವಿತರಣೆಗೆ ಕ್ರಮ ಕೈಗೊಳ್ಳಬೇಕು. ಎಪಿಎಲ್ ಕಾರ್ಡುಗಳನು ಹೊಂದಿದ ಬಡವರು ಬಿಪಿಎಲ್ ಕಾರ್ಡುಗಳಿಗಾಗಿ ಅರ್ಜಿ ಹಾಕುತ್ತಿರುವಾ ಅವರಿಂದ ಅಧಿಕಾರಿಗಳು ಲಂಚ ಕೇಳುತ್ತಿದ್ದಾ ಎಂಬ ಆರೋಪವೂ ಕೇಳಿ ಬರುತ್ತಿದೆ. ಕಾರ್ಡು ವಿತರಣೆಯಲ್ಲಿ ಭ್ರಷ್ಟಾಚಾರ ನಡೆ-ಯದಂತೆ ಈ ಹಂತದಲ್ಲೇ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಸಾಮೂಹಿ ಸಂಘಟನೆಗಳು 30 ಕೆ.ಜಿ. ಅಕ್ಕಿಯ ಈ ಪ್ರಶ್ನೆಯನ್ನು ತಮ್ಮ ತುರ್ತಿನ ಹೋರಾಟದ ಪ್ರಶ್ನೆಯಾಗಿ ಎತ್ತಿಕೊಳ್ಳಬೇಕು.

ಬೆಳ್ತಂಗಡಿ: ಮೂರನೇ ರಾಜಕೀಯ ಶಕ್ತಿಯಾಗಿ ಸಿಪಿಐ(ಎಂ)

ಸಿಪಿಐ(ಎಂ) ಪಕ್ಷವು ಮೊತ್ತಮೊದಲ ಬಾರಿಗೆ ಸ್ಪರ್ಧಿಸಿ ಮೂರನೇ ಸ್ಥಾನ ಪಡೆದ ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಚುನಾವಣಾ ಹೋರಾಟದ ವರದಿ ಕುತೂಹಲಕಾರಿಯಾಗಿದೆ. ಈ ಕ್ಷೇತ್ರದಲ್ಲಿ ನಡೆದ ಪ್ರಜಾಸತ್ತಾತ್ಮಕ ಯೋಜಿತ ಕೆಲಸದ ವಿಧಾನ ಇತರ ಕ್ಷೇತ್ರಗಳಿಗೆ ಒಂದು ಮಾದರಿಯೂ ಆಗಿದೆ.

ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಚುನಾವಣೆಯಲ್ಲಿ ಸಿಪಿಐ(ಎಂ) ಪ್ರಥಮ ಬಾರಿ ಸ್ಪರ್ಧಿಸಿತು. ಪಕ್ಷ ವಿಭಜನೆ ಆಗುವ ಮೊದಲು ಅಂದರೆ 1962 ರಲ್ಲಿ ಕಾಂ. ಕೆ.ವಿ.ರಾವ್ (ಎಳ್ಚಿತ್ತಾಯರು) ಸ್ಪರ್ಧಿಸಿದ್ದರು. 2,500 ಮತ ದೊರಕಿದ್ದವು. ರಾಜ್ಯದ ನಾನಾ ಕಡೆ 'ಉಳುವವನೆ ಹೊಲದೊಡೆಯ' ಎಂಬ ಹೋರಾಟ ಜೋರಾಗಿ ನಡೆ-ಯುತ್ತಿತ್ತು. ಬೆಳ್ತಂಗಡಿಯಲ್ಲೂ ಎಳ್ಚಿತ್ತಾಯರ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದ್ದ ಕಾಲವದು. 1974ರ ನಂತರ ಬೆಳ್ತಂಗಡಿಯಲ್ಲಿ ಗಣನೀಯ ಸಂಖ್ಯೆಯಲ್ಲಿ 'ಉಳುವವರೇ ಹೊಲದೊಡೆ'ರಾದರು.

1991ರನಂತರ ಎಳ್ಚಿತ್ತಾಯರ ಮಾರ್ಗದರ್ಶನದಲ್ಲಿಕಾಂ.ಕೆ.ಆರ್.ಶ್ರೀಯಾನ್, ಕಾಂ.ರಾಮಚಂದ್ರ ರಾವ್ ಅವರ ಸಲಹೆಗಳೊಂದಿಗೆ ಪಕ್ಷ ಪುನರ್‌ಸಂಘಟನೆಗೊಂಡು ಬೆಳೆಯುತ್ತಾ ಬಂತು. ಈ ಬಾರಿ ವಿಧಾನ ಸಭಾ ಚುನಾವಣೆಯಲ್ಲಿ ರಾಜಕೀಯ ಹೋರಾಟವನ್ನೂ ನಡೆಸಿ ತಾಲೂಕಿನಲ್ಲಿ 3ನೇ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದೆ. 1991 ರಿಂದ ಬಿ.ಎಂ.ಭಟ್, ಶಿವಕುಮಾರ್, ಹರಿದಾಸ್ ಮೊದಲಾದವರು ಸಾಮೂಹಿಕ ನಾಯಕತ್ವದಡಿಯಲ್ಲಿ ಪಕ್ಷ ಕಟ್ಟ ತೊಡಗಿದರು. ಡಿವೈಎಫ್ಐ ಮೂಲಕ ಬಂದ ಯುವಕರ ಜೊತೆ ಮಂಜುನಾಥ, ಸೆಲಿಮೋನ್, ಹಮೀದ್, ಪಾಪಚ್ಚನ್, ನಂತರದಲ್ಲಿ ಪಾಂಗಳ ಲಕ್ಷಣಗೌಡರೂ ಸೇರಿಕೊಂಡರು. ರೈತ ಸಂಘಟನೆ, ಜೊತೆಗೆ ಕಾರ್ಮಿಕ ಸಂಘಟನೆ ಕಟ್ಟಿ ಬೆಳೆಸಲಾಯಿತು. ಬೀಡಿ ಕಾರ್ಮಿಕರ ಸಂಘಟನೆ, ಜೊತೆ-ಗೆ ಅಂಗನವಾಡಿ, ಬಿಸಿಯೂಟ, ಕಟ್ಟಡ ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ಅಟೋ ಚಾಲಕರು, ರಬ್ಬರ್ ಟ್ಯಾಪರ್ಸ್, ಮೆಸ್ಕಾಂ, ಆಸ್ಪತ್ರೆ, ಬಿಎಸ್‌ಎನ್‌ಎಲ್, ಶಾಲಾ ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಕರಾಗಿ ಗುತ್ತಿಗೆ ಆಧಾರದಲ್ಲಿ ದುಡಿಯುವವರು ಮೊದಲಾದವರು ಸಂಘಟನೆಗೊಂಡರು. ರೈತ ಸಂಘಟನೆಯಲ್ಲದೆ ಎನ್‌ರೇಗಾ ಸಂಘಟನೆ, ಕೂಡಾ ರಚಿಸಲಾಗಿ ಅಗತ್ಯ ಹೋರಾಟಗಳನ್ನು ರೂಪಿಸಿ ಹೋರಾಡುತ್ತಿದ್ದವು.

ಬೀಡಿ ಕಾರ್ಮಿಕರ ತುಟ್ಟಿ ಭತ್ತೆ ಹೋರಾಟ, ಕನಿಷ್ಟ ಕೂಲಿ ಜಾರಿಗಾಗಿ ನಡೆದ ಹೋರಾಟಗಳು ಬೆಳ್ತಂಗಡಿಯಲ್ಲಿ ಕಮ್ಯೂನಿಸ್ಟರ ಬಗ್ಗೆ ಗೌರವ ಹೆಚ್ಚಲು ಕಾರಣವಾಯಿತು. ಕಳೆದ 3 ವರ್ಷದಿಂದ ನಿವೇಶನ ಹೋರಾಟ ನಡೆಯತೊಡಗಿತು. ಸಾವಿರಾರು ನಿವೇಶನ ರಹಿತರು ಹೋರಾಟದಲ್ಲಿ ನಿರಂತರ ಭಾಗವಹಿಸುವಂತಹ ನಂಬಿಕೆ ವಿಶ್ವಾಸ ಬೆಳೆದು ಹೋರಾಟ ತೀವ್ರರೂಪಕ್ಕೆ ತಿರುಗಿತು. ಸರಕಾರಿ ಭೂಮಿಯಲ್ಲಿ ನೂರಾರು ಮಂದಿ ಮನೆ ಕಟ್ಟಿ ಕೂತರು. ಬಿ.ಎಂ.ಭಟ್ ಅವರ ಮೇಲೆ ರಾಜಕೀಯ ವಿರೋಧಿಗಳು ಗೂಂಡಾಗಳನ್ನು ಕಳಿಸಿ ಹಲ್ಲೆ ನಡೆಸಿದರು. ಇವರ ರಕ್ಷಣೆಗೆ ಬಂದ ಡಿವೈಎಫ್ಐನ ಲಾರೆನ್ಸ್ ಮತ್ತು ಸುಮಲತ ಕೂಡಾ ಹಲ್ಲೆಗೊಳಗಾದರು. ಪ್ರತಿಭಟನಾ ಚಳುವಳಿಯಿಂದ ಹಲ್ಲೆಕೋರರ ಮೇಲೆ 307 ಬಿತ್ತು. ಬಂಧನವು ಆಯಿತು. ಇದರಿಂದಾಗಿ ಅಕ್ರಮ-ಸಕ್ರಮ ಅರ್ಜಿದಾರರು ಕೂಡಾ



1991 ರಲ್ಲಿ ಅರ್ಜಿ ಕೊಟ್ಟಿದ್ದರೂ ಸಾಗುವಳಿ ಚೀಟಿ ಸಿಕ್ಕಿಲ್ಲ ಎಂದು ನಿವೇಶನ ರಹಿತರ ಹೋರಾಟದ ಜೊತೆ ಸೇರತೊಡಗಿದರು. ಅರಣ್ಯ ಭೂಮಿಯಲ್ಲಿ ಕೃಷಿ ಮಾಡಿದ ರೈತರ, ಆದಿವಾಸಿ ರೈತರ, ದಲಿತರ ಸಮಸ್ಯೆಗಳನ್ನು ಕೇಳೋರೆ ಇಲ್ಲದಾದಾಗ ಸಿಪಿಐ(ಎಂ) ಅವರ ಪರವಾಗಿಯೂ ದನಿ ಎತ್ತಿತು. ಅದೇ ರೀತಿ 'ಎಕೆಜಿ ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘ' ದಿಂದ ಈಗಾಗಲೇ 44 ಮನೆಗಳ ನಿರ್ಮಾಣ ಆಗಿರುವುದು ಕೂಡಾ ಚುನಾವಣೆಯಲ್ಲಿ ಪ್ರಚಾರಕ್ಕೆ ಬಂದು ಸಹಕಾರಿಯಾಗಿದೆ.

ವಿಠಲ ಮಲೆ ಕುಡಿಯ ಬಂಧನ-ಸೌಜನ್ಯ ಕೊಲೆ ಪ್ರಕರಣ

ವಿಠಲ ಮಲೆಕುಡಿಯನ ಮೇಲೆ ಸುಳ್ಳು ಕೇಸ್ ಹಾಕಿದ್ದರ ವಿರುದ್ದ ಹಾಗೂ ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ ಕೇಸನ್ನು ಸಿಬಿಐಗೆ ಒಪ್ಪಿಸಲು ಆಗ್ರಹಿಸಿ ನಡೆಸುತ್ತಿರುವ ಹೋರಾಟ, ಇವು ಕೂಡಾ ಸಿಪಿಐ(ಎಂ) ಬಗೆಗೆ ಅಭಿಮಾನ ಮೂಡಲು ಕಾರಣವಾಯಿತು. ಒಟ್ಟಾರೆ ಬೆಳ್ತಂಗಡಿ ತಾಲೂಕಲ್ಲಿ ಪ್ರತಿ ವಾರ ಒಂದಲ್ಲ ಒಂದು ಹೋರಾಟ ನಡೆಯುತ್ತಲೇ ಇರುತಿತ್ತು. ಇದರಿಂದಾಗಿ ಜನತೆಗೆ ಒಂದಷ್ಟು ನ್ಯಾಯ ಸಿಗಲು ಸಾಧ್ಯವಾಗುತ್ತಿತ್ತು. ಬಿಜೆಪಿಯವರು ಕಾಂಗ್ರೆಸ್‌ನವರಲ್ಲಿ ಹೇಳುತ್ತಿದ್ದರು- 'ಬಿಜೆಪಿ ಸರಕಾರ, ಕಾಂಗ್ರೆಸ್‌ನ ಶಾಸಕ ಇದ್ದರೂ ಜನರ ಕೆಲಸ ಕಮ್ಯೂನಿಸ್ಟ್‌ರಿಂದಲೇ ಆಗುತ್ತಿದೆ'.

ಚುನಾವಣಾ ಕಣದಲ್ಲಿ 7 ಅಭ್ಯರ್ಥಿಗಳಿದ್ದರು. ಸಿಪಿಐ(ಎಂ)ನಿಂದ ಬಿ.ಎಂ.ಭಟ್, ಕಾಂಗ್ರೆಸ್‌ನ ಹಾಲಿ ಶಾಸಕ ವಸಂತ ಬಂಗೇರ, ಬಿಜೆಪಿ-ರಂಜನ್ ಜಿ. ಗೌಡ, ಜೆಡಿಎಸ್- ರಾಜಶ್ರೀ ಹೆಗ್ಡೆ ಪ್ರಮುಖರು.

1983, 1985 ರಲ್ಲಿ ಬಿಜೆಪಿಯಿಂದ, ನಂತರ ನಾಲ್ಕು ಬಾರಿ ಜೆಡಿ ಹಾಗೂ ಜೆಡಿಎಸ್ ಗಳಿಂದ 2008 ರಲ್ಲಿ ಕಾಂಗ್ರೆಸಿನಿಂದ ಸ್ಪರ್ಧಿಸಿ ಸೋಲು ಗೆಲುವುಗಳನ್ನು ಕಂಡ ವಸಂತ ಬಂಗೇರ ಈ ಬಾರಿಯೂ ಕಾಂಗ್ರೇಸ್ ಅಭ್ಯರ್ಥಿ. 1978ರಿಂದ ನಿರಂತರ ಕಾಂಗ್ರೇಸ್‌ನಿಂದ ಸ್ಪರ್ಧಿಸಿ ಸೋಲು ಗೆಲುವುಗಳೊಂದಿಗೆ 2008ರಲ್ಲಿ ಜೆಡಿಎಸ್ ನಿಂದ ಸ್ಪರ್ಧಿಸಿದ್ದ ಗಂಗಾಧರ ಗೌಡರು 2009ರ ಲೋಕ ಸಭಾ ಚುನಾವಣೆ ಸಮಯ ಬಿಜೆಪಿ ಸೇರಿದ್ದರು. ಅವರ ಮಗ ರಂಜನ್ ಗೌಡ ಈ ಬಾರಿ ಬಿಜೆಪಿ ಅಭ್ಯರ್ಥಿ.

'ಧರ್ಮಸ್ಥಳ'ದಲ್ಲಿ ಭೂಮಾಲಕ 'ಧರ್ಮ' ಮತ್ತು ಚಳುವಳಿಗಾರರ ಮೇಲಿನ ಹಲ್ಲೆಗಳು

ಕಾಂ. ಎಳ್ಚಿತ್ತಾಯರು ಭೂ ಮಸೂದೆಗಾಗಿ ಹೋರಾಟಕ್ಕೆ ನೇತೃತ್ವ ನೀಡುತ್ತಾ ಒಕ್ಕಲು ರೈತರ ಸಂಘಟನೆ ಮಾಡುತ್ತಾ ಭೂಮಾಲಿಕರ ದೌರ್ಜನ್ಯ, ಹಲ್ಲೆಗೊಳಗಾಗುತ್ತಿದ್ದ ಕಾಲದಲ್ಲಿ ವಸಂತ ಬಂಗೇರ ಭೂಮಾಲಿಕ ಸಂಘದ ಅಧ್ಯಕ್ಷರು ಹಾಗೂ ಎಳ್ಚಿತ್ತಾಯರ ಮೇಲೆ ಹಲ್ಲೆ ನಡೆಸುವಲ್ಲಿ ಮುಖ್ಯ ಪಾತ್ರಧಾರಿಯಾಗಿದ್ದರು. ಧರ್ಮಸ್ಥಳದ ಹೆಗ್ಡೆ ಕುಟುಂಬ ಕೂಡಾ ಆವಾಗ ಎಳ್ಚಿತ್ತಾಯರ ಅಂಗಡಿಗೆ ಬೆಂಕಿ ಹಾಕಿ, ಹಲ್ಲೆ ನಡೆಸುತ್ತಿದ್ದ ಕಾಲವದು. ಈಗಲೂ ಹಳ್ಳಿಯಲ್ಲಿ ಸಿಪಿಐ(ಎಂ) ಪಕ್ಷವನ್ನೂ ಇನ್ನೂ ಕೂಡಾ 'ಎಳ್ಚಿತ್ತಾಯರ ಪಕ್ಷ' ಎಂದೇ ಹೇಳುತ್ತಾರೆ ಹಾಗೂ ಅಭಿಮಾನದಿಂದ ಮಾತಾಡುತ್ತಾರೆ. ಅಂದು ಭೂಮಾಲಕರ ಪರವಾಗಿದ್ದ ವಸಂತ ಬಂಗೇರರು, ಇಂದು ನಾವು ಭೂಮಿ ಕೊಟ್ಟವರು ಎಂದು ಹೇಳುತ್ತಾ ಮತ ಕೇಳುವುದನ್ನು ಜನರು ಹಾಸ್ಯ ಮಾಡಿ ಮಾತಾಡುತ್ತಾರೆ.

ಸಿಪಿಐ(ಎಂ) ಈ ಬಗ್ಗೆ ಸ್ಪಷ್ಟ ಉತ್ತರ ನೀಡುತ್ತಿತ್ತು. ಭೂಮಸೂದೆಗೆ ಹೋರಾಡಿದ ಚರಿತ್ರೆ ಇರುವುದು ಕಮ್ಯೂನಿಸ್ಟರಿಗೆ ಮಾತ್ರ. ಕಮ್ಯೂನಿಸ್ಟರು ಎಲ್ಲಿ ಇದ್ದಾರೋ ಅಲ್ಲಿ ಮಾತ್ರ ತಕ್ಕಮಟ್ಟಿಗೆ ಭೂ ಮಸೂದೆ ಜಾರಿ ಆಗಿದೆ. ಕಮ್ಯೂನಿಸ್ಟರೇ ಇಲ್ಲದ ಕಾರ್ಕಳದಲ್ಲಿ ತೋರಿಕೆಗೆ ಮಾತ್ರ ಜಾರಿಯಾಗಿದೆ. ಕಾರ್ಕಳ ಕಾಂಗ್ರೆಸಿನ ಭದ್ರ ಕೋಟೆ- ಆದರೆ ಭೂಮಸೂದೆ ಜಾರಿ ಮಾಡಲಿಲ್ಲ. 1985 ರಿಂದ ಅಕ್ರಮ-ಸಕ್ರಮ ಕಾನೂನು ಜಾರಿಗೆ ಹೋರಾಡಿದ್ದು ಸಿಪಿಐ(ಎಂ). 1991 ರಲ್ಲಿ ಮಂಗಳೂರು-ಬೆಂಗಳೂರು 16 ದಿನಗಳ ಕಾಲ್ನಡಿಗೆ ಜಾತಾ ನಡೆಸಿ ಅಕ್ರಮ-ಸಕ್ರಮ ಜಾರಿಗೆ ಕಾರಣಕರ್ತರಾದವರು ಕಮ್ಯೂನಿಸ್ಟರು. ಆ ರೀತಿ ಬಂದ ಕಾನೂನಿನಂತೆ 1991 ರಲ್ಲಿ ಅರ್ಜಿ ಸಲ್ಲಿಸಿದವರಲ್ಲಿ 26,000 ಅರ್ಜಿಗಳು ಬೆಳ್ತಂಗಡಿ ತಾಲೂಕು ಕಚೇರಿಯಲ್ಲಿ ಇತ್ಯರ್ಥ-ಕ್ಕೆ ಬಾಕಿ ಇವೆ. ಇದೇ ರೀತಿ ಜಿಲ್ಲಾದ್ಯಂತ ಪರಿಸ್ಥಿತಿ. ಹಕ್ಕುಪತ್ರಕ್ಕಾಗಿ ಸಿಪಿಐ(ಎಂ) ಹೋರಾಡುತ್ತಿದ್ದಾಗ ಮೌನವಾಗಿ ಕುಳಿತ ಶಾಸಕರು, ಈ ಬಾರಿ ಗೆದ್ದರೆ 6 ತಿಂಗಳಲ್ಲಿ ಕೊಡುತ್ತೇವೆ ಎನ್ನುತ್ತಾರೆ ನಂಬಬಹುದೇ! ಎಂದು ಹೋರಾಟಕ್ಕೆ ಬಂದಿದ್ದ ಜನ ಹಳ್ಳಿ ಹಳ್ಳಿಗಳಲ್ಲಿ ಮಾತಾಡುತ್ತಿದ್ದರು. 91 ರಿಂದ 5 ಎಂಎಲ್‌ಎಗಳು ಗೆದ್ದು ಬಂದಿದ್ದಾರೆ. ಇವರ್‍ಯಾರು ಈ ಅರ್ಜಿ ಇತ್ಯರ್ಥ ಮಾಡಿಲ್ಲ.

5 ಸೆಂಟ್ಸು ನಿವೇಶನಕ್ಕಾಗಿ ಕಳೆದ 3 ವರ್ಷಗಳಿಂದ ಹೋರಾಡುತ್ತಾ ಬಂದ ಸಿಪಿಐ(ಎಂ), ಬಿ.ಎಂ.ಭಟ್‌ರ ಮೇಲೆ ಗೂಂಡಾಗಳು ಹಲ್ಲೆ ನಡೆಸಿದಾಗ ಕೂಡಾ ವಸಂತ ಬಂಗೇರರು ಬಿ.ಎಂ.ಭಟ್‌ರನ್ನು ಆಸ್ಪತ್ರೆಯಲ್ಲಾದರೂ ಭೇಟಿ ಮಾಡಲಿಲ್ಲ. ಹಕ್ಕುಪತ್ರ ಕೊಡುತ್ತೇವೆಂದು ಹೇಳಲಿಲ್ಲ. ಒಕ್ಕಲೆಬ್ಬಿಸಿದ ಸರಕಾರದ ನೀತಿಯ ಪರವಾಗಿದ್ದವರು ಅವರು. ರಂಜನ್ ಜಿ. ಗೌಡ ಈ ಹಲ್ಲೆಯ ರುವಾರಿಯಾಗಿದ್ದವರು. ಆರೋಪಿಗಳನ್ನು ಬಿಡಿಸಲು ಬಿಜೆಪಿ ತಂಡ ನಿರಂತರ ಠಾಣೆಗಳಲ್ಲಿರುತ್ತಿತ್ತು.

ನೇತ್ರಾವತಿ ತಿರುವು ಯೋಜನೆಗೆ ನಾವು ವಿರೋಧ ಎಂದು ಕಾಂಗ್ರೆಸ್, ಬಿಜೆಪಿಗಳು ಚುನಾವಣೆ ಸಂದರ್ಭ ಹೇಳುತ್ತಿದ್ದರು. ಅದ-ಕ್ಕೆ ಸಿಪಿಐ(ಎಂ)ನ ಬಿ.ಎಂ.ಭಟ್ ಅವರು ಸ್ಪಷ್ಟ ಉತ್ತರ ನೀಡಿ ಜನ ತಲೆದೂಗುವಂತೆ ಮಾಡುತ್ತಿದ್ದರು. "ನೇತ್ರಾವತಿ ಪಾತ್ರದ ಮಳೆ ನೀರು ತಿರುವಿಗೆ ವಿರೋಧ ಎನ್ನುವ ಈ ಕಾಂಗ್ರೆಸ್, ಬಿಜೆಪಿಗಳು ನೇತ್ರಾವತಿ ನದಿಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಹೊರಟವರು. ಇದರ ವಿರುದ್ದ ಹೋರಾಡಿದವರು ಕಮ್ಯೂನಿಸ್ಟರು. ಮಂಗಳೂರಲ್ಲಿ ನಡೆದ ಈ ಹೋರಾಟದಲ್ಲೂ, ಕಮ್ಯೂನಿಸ್ಟರ ಮೇಲೆ ಲಾಠಿ ಚಾರ್ಜು ಮಾಡಿ 40 ಜನರನ್ನು ಬಂಧಿಸಿದ್ದು ಎಲ್ಲರಿಗೂ ತಿಳಿದಿದೆ."

'ಬಿ.ಎಂ.ಭಟ್ ಅವರು ಗೆಲ್ಲಬೇಕು' ಎಂಬ ಭಾವನೆ ಮತದಾರರಲ್ಲಿದ್ದರೂ, 'ಬಿ.ಎಂ.ಭಟ್ ಗೆಲ್ಲಲಾರರು' ಎಂಬ ಅಭಿಪ್ರಾಯ ಹರಡಿಸಿದ್ದು ಕೂಡಾ ಸಾಕಷ್ಟು ಜನ ಮತ ಹಾಕದಿರಲು ಕಾರಣವಾಯಿತು.

'ನೀವು ಗೆದ್ದಿದ್ದರೆ ನಮ್ಮ ಸ್ಥಿತಿ ಹೀಗಿರುತ್ತಿರಲಿಲ್ಲ. ಕಾಸರಗೋಡಲ್ಲಿ ಇಂತಹ ಮನೆಗಳೇ ಇಲ್ಲ' ಎಂದವರು ಉಂಟು.

ಬಾಲಕೃಷ್ಣ ಗೌಡ, ಜಕಾರಿ ನಾಯಕತ್ವ ನಿಷ್ಠಾವಂತ ಕಾರ್ಯಕರ್ತರು, ಮುಖಂಡರ

ಪುಟ 12 ಕ್ಕೆ

ಚೀನಾದ ಹೊಸ ಪ್ರಧಾನ ಮಂತ್ರಿಗಳ ಭಾರತ ಭೇಟಿ ಸಂಕ್ಷಿಪ್ತ ಅವಧಿಯದಾಗಿದ್ದರೂ, ದ್ವಿಪಕ್ಷೀಯ ಸಂಬಂಧಗಳು, ಹಾಗೂ ಪರಸ್ಪರ ಹಿತದೃಷ್ಟಿಯ ಪ್ರಾದೇಶಿಕ ಮತ್ತು ಅಂತರ‍್ರಾಷ್ಟ್ರೀಯ ಪ್ರಶ್ನೆಗಳ ಮೇಲೆ ಆಳವಾದ ಅಭಿಪ್ರಾಯಗಳ ವಿನಿಮಯವನ್ನು ಒಂದು ಪ್ರಾಮಾಣಿಕ ಮತ್ತು ಸೌಹಾರ್ದದ ವಾತಾವರಣದಲ್ಲಿ ನಡೆಸಿರುವುದು ದಕ್ಷಿಣ ಏಶ್ಯಾದ ಈ ಎರಡು ಬೃಹತ್ ನೆರೆ ದೇಶಗಳ ನಡುವಿನ ಸಂಬಂಧಗಳನ್ನು ಉತ್ತಮ ಪಡಿಸುವಲ್ಲಿ ಬಹಳಷ್ಟು ಸಹಕಾರಿಯಾಗಲಿದೆ, ಮತ್ತು ಇದು ಜಾಗತಿಕ ಸನ್ನಿವೇಶದ ಮೇಲೆ ಬಹಳಷ್ಟು ಸಕಾರಾತ್ಮಕ ಪ್ರಭಾವ ಬೀರಲಿದೆ.

ಚೀನಾದ ಪ್ರಧಾನ ಮಂತ್ರಿಗಳ ಮಹತ್ವಪೂರ್ಣ ಭೇಟಿ

ಸೀತಾರಾಮ್ ಯೆಚೂರಿ

ಚೀನಾ ಜನತಾ ಗಣತಂತ್ರದ ಪ್ರಧಾನ ಮಂತ್ರಿ ಲಿ ಕೆಕ್ಯಾಂಗ್ ಭಾರತದ ಅಧಿಕೃತ ಭೇಟಿಗೆ ಬಂದು ಹೋಗಿದ್ದಾರೆ. ಬಹುಶಃ ಹೊಸದಾಗಿ ಚುನಾಯಿತರಾದ ಚೀನೀ ಪ್ರಧಾನಿಯೊಬ್ಬರು ಮೊದಲ ವಿದೇಶ ಭೇಟಿಗೆ ಭಾರತವನ್ನು ಆರಿಸಿಕೊಂಡಿರುವುದು ಇದೇ ಮೊದಲಿರಬೇಕು. ನಿಜಕ್ಕೂ ಇದು ಮಹತ್ವಪೂರ್ಣ.

ಭಾರತದ ಪ್ರಧಾನ ಮಂತ್ರಿಗಳು ಈ ಸಂದರ್ಭದಲ್ಲಿ ಒಂದು ಮಾಧ್ಯಮ ಹೇಳಿಕೆಯಲ್ಲಿ "ಅವರು ಅಧಿಕಾರ ವಹಿಸಿಕೊಂಡ ಮೊದಲ ದಿನವೇ ನನ್ನನ್ನು ಸಂಪರ್ಕಿಸಿರುವುದಕ್ಕೆ ಮತ್ತು ಪ್ರಧಾನಿಯಾಗಿ ಭಾರತವನ್ನು ತನ್ನ ವಿದೇಶ ಭೇಟಿಯ ಮೊದಲ ಗುರಿಯಾಗಿ ಆರಿಸಿಕೊಂಡದ್ದಕ್ಕೆ ನಾನು ಕೃತಜ್ಞ" ಎಂದಿದ್ದಾರೆ.

ಮುಂದುವರೆದು, ಅವರ ಹೇಳಿಕೆ ಹೀಗಿದೆ:

"ನಿನ್ನೆಯಿಂದ ಆರಂಭಿಸಿ ಪ್ರಧಾನಿ ಲಿ ಮತ್ತು ನಾನು ಪರಸ್ಪರ ಹಿತಾಸಕ್ತಿಗಳ ಮತ್ತು ಕಾಳಜಿಗಳ ಮೇಲೆ ವ್ಯಾಪಕವಾದ ಮತ್ತು ಬಿಚ್ಚು ಮನಸ್ಸಿನ ಚರ್ಚೆಗಳನ್ನು ನಡೆಸಿದ್ದೇವೆ. ಹಲವಾರು ರಂಗಗಳಲ್ಲಿ ನಮ್ಮ ಅಭಿಪ್ರಾಯಗಳು ಏಕೀಭವಿಸುತ್ತವೆ, ಬಹಳಷ್ಟು ಮನಸ್ಸುಗಳ ಮಿಲನ ಇದೆ ಎಂದು ನನಗೆ ಹರ್ಷವಾಗಿದೆ. ಬಹಳ ಮುಖ್ಯವಾಗಿ, ನಮ್ಮೆರಡು ದೇಶಗಳ ನಡುವಿನ ಸಂಬಂಧ ಹೆಚ್ಚಚ್ಚು ಗಮನಾರ್ಹ ಹಾಗೂ ನಮ್ಮ ಶಾಂತಿಯುತ ಅಭಿವೃದ್ಧಿ ಮತ್ತು ಬಹುಕಾಲ ಉಳಿಯುವ ಆರ್ಥಿಕ ಬೆಳವಣಿಗೆಗೆ, ಅದೇ ರೀತಿ ನಮ್ಮ ಪ್ರದೇಶದ ಮತ್ತು ಜಗತ್ತಿನ ಸ್ಥಿರತೆಗೆ ಅಗತ್ಯವಾಗಿದೆ ಎಂಬ ಬಗ್ಗೆ ನಮಗಿಬ್ಬರಿಗೂ ಒಪ್ಪಿಗೆಯಿದೆ.

"ಭಾರತ ಮತ್ತು ಚೀನಾ ಎರಡು ನೆರೆ ನಾಗರಿಕತೆಗಳು, ನಾವು ಯುಗ-ಯುಗಗಳಿಂದ ಶಾಂತಿಯಿಂದ ಬದುಕಿದ್ದೇವೆ. ಬಹಳ ಇತ್ತೀಚಿನ ಕಾಲದಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ ಕಳೆದ 25 ವರ್ಷಗಳಲ್ಲಿ ನಾವು ದೃಢಚಿತ್ತದಿಂದ ಒಂದು ಪರಸ್ಪರ ಪ್ರಯೋಜನಕಾರಿ ಸಂಬಂಧವನ್ನು ಕಟ್ಟಿದ್ದೇವೆ. ನಮ್ಮ ಸಂಬಂಧಗಳ ಬೆಳವಣಿಗೆ ಮತ್ತು ವಿಸ್ತರಣೆ ಮುಂದುವರೆಯುವ ಆಧಾರ ನಮ್ಮ ಗಡಿಗಳಲ್ಲಿ ಶಾಂತಿ ಮತ್ತು ನೆಮ್ಮದಿ. ಗಡಿ ಪ್ರಶ್ನೆಗೆ ಬೇಗನೇ ಒಂದು ಪರಿಹಾರಕ್ಕೆ ಪ್ರಯತ್ನಿಸುವಾಗಲೇ, ಇದನ್ನು ಮುಂದೆಯೂ ಕಾಪಾಡಿಕೊಳ್ಳಬೇಕು ಎಂದು ಪ್ರಧಾನಿ ಲಿ ಮತ್ತು ನಾನು ಒಪ್ಪಿದ್ದೇವೆ.

"ನಾವು ಪಶ್ಚಿಮ ವಲಯದಲ್ಲಿ ಇತ್ತೀಚಿನ ಪ್ರಸಂಗದಲ್ಲಿ ಈಗಿರುವ ವ್ಯವಸ್ಥೆಗಳು ತಮ್ಮ ಯೋಗ್ಯತೆಯನ್ನು ಸಾಬೀತು ಮಾಡಿರುವುದರಿಂದ ಕಲಿತಿರುವ ಪಾಟಗಳನ್ನೂ ಪರಿಶೀಲಿಸಿದ್ದೇವೆ. ಗಡಿಯಲ್ಲಿ ಶಾಂತಿ ಮತ್ತು ನೆಮ್ಮದಿ ಕಾಯ್ದುಕೊಳ್ಳಲು ಬೇಕಾಗಬಹುದಾದ ಇನ್ನಷ್ಟು ಕ್ರಮಗಳನ್ನು ಪರಿಶೀಲಿಸಬೇಕು ಎಂದು ನಮ್ಮ ವಿಶೇಷ ಪ್ರತಿನಿಧಿಗಳಿಗೆ ಹೇಳಿದ್ದೇವೆ. ನಮ್ಮ ವಿಶೇಷ ಪ್ರತಿನಿಧಿಗಳು ಬೇಗನೇ ಸಭೆ ಸೇರಿ ಚರ್ಚೆಗಳನ್ನು ಮುಂದುವರೆಸುವ, ಮತ್ತು ಒಂದು ನ್ಯಾಯಯುತ, ತರ್ಕಬದ್ಧ ಮತ್ತು ಪರಸ್ಪರ ಒಪ್ಪಿಗೆಯಾಗುವ ಗಡಿ ಇತ್ಯರ್ಥಕ್ಕೆ



ಒಂದು ಚೌಕಟ್ಟಿನ ಬಗ್ಗೆ ಬೇಗನೇ ಒಪ್ಪಂದಕ್ಕೆ ಬರುವ ಪ್ರಯತ್ನ ನಡೆಸುವ ಬಗ್ಗೆ ನಾವು ಒಪ್ಪಿದ್ದೇವೆ.

"ನಮ್ಮಿಬ್ಬರ ಪಾಲಿಗೂ ಬಂದಿರುವ ನದಿಗಳ ಮೇಲಣ ಪಾತ್ರಗಳಲ್ಲಿನ ಚಟುವಟಿಕೆಗಳು ಕೆಳ ನದಿಪಾತ್ರದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ನಮ್ಮ ಆತಂಕಗಳನ್ನು ಪ್ರಧಾನ ಮಂತ್ರಿಗಳಿಗೆ ಪುನರುಚ್ಚರಿಸಿದ್ದೇನೆ. ನಮ್ಮ ಪರಿಣಿತರ ಮಟ್ಟದ ವ್ಯವಸ್ಥೆಯ ನಿಯೋಜನೆಯನ್ನು ವಿಸ್ತರಿಸಿ ಈ ನದಿಗಳ ಮೇಲೆ ಮೇಲಿನ ಪಾತ್ರಗಳ ಅಭಿವೃದ್ಧಿ ಯೋಜನೆಗಳ ಮಾಹಿತಿಯನ್ನು ಹಂಚಿಕೊಳ್ಳುವುದನ್ನೂ ಸೇರಿಸುವುದು ಪ್ರಯೋಜನಕಾರಿಯಾಗುತ್ತದೆ. ಗಡಿಗಳಾಚೆಗಿನ ನದಿಗಳ ಬಗ್ಗೆ ಸಹಕಾರವನ್ನು ವಿಸ್ತರಿಸಲು ನಾವು ಒಪ್ಪಿಕೊಂಡಿದ್ದೇವೆ ಎಂಬ ಬಗ್ಗೆ ನನಗೆ ಸಂತಸವಾಗಿದೆ. ನಮ್ಮಿಬ್ಬರ ಪಾಲಿಗೂ ಬಂದಿರುವ ಹಿಮಾಲಯದ ಪರಿಸರ ವ್ಯವಸ್ಥೆಯ ಮೇಲಿನ ಒತ್ತಡಗಳ ಬಗ್ಗೆ ಇನ್ನೂ ಉತ್ತಮ ಗ್ರಹಿಕೆಗೆ ಭಾರತ ಮತ್ತು ಚೀನಾ ಪರಸ್ಪರ ಕೈಜೋಡಿಸುವುದು ಕೂಡ ಪ್ರಯೋಜನಕಾರಿಯಾಗುತ್ತದೆ.

"ಚೀನಾ ಮತ್ತು ಭಾರತದ ಏಳಿಗೆಯಿಂದ ಜಗತ್ತಿಗೆ ಒಳಿತಾಗುತ್ತದೆ, ನಮ್ಮ ಎರಡೂ ಜನತೆಗಳ ಬೆಳವಣಿಗೆಯ ಆಕಾಂಕ್ಷೆಗಳಿಗೆ ಜಗತ್ತಿನಲ್ಲಿ ಸಾಕಷ್ಟು ಅವಕಾಶಗಳಿವೆ. ಇದನ್ನು ವಾಸ್ತವಗೊಳಿಸಲು ನಮ್ಮೆರಡು ಜನತೆಗಳ ನಡುವೆ ತಿಳುವಳಿಕೆಗಳನ್ನು ಕಟ್ಟಿ ಬೆಳೆಸುವುದು ಮುಖ್ಯವಾಗುತ್ತದೆ. ಎರಡೂ ಕಡೆ ಇನ್ನಷ್ಟು ವಿಶ್ವಾಸ ಮತ್ತು ಭರವಸೆಗಳನ್ನು ಬಲಗೊಳಿಸಲು ಕೆಲಸ ಮಾಡಬೇಕು ಎಂದು ನಾವು ಒಪ್ಪಿದ್ದೇವೆ. ಇದರಿಂದ ಇನ್ನಷ್ಟು ಹೆಚ್ಚಿನ ಸಹಕಾರಕ್ಕೆ ಅವಕಾಶವಾಗುತ್ತದೆ."

ಜೊತೆಗಾರರು, ಪ್ರತಿಸ್ಪರ್ಧಿಗಳಲ್ಲ

ಚೀನಾ ಮತ್ತು ಭಾರತದ ಪರವಾಗಿ ನೀಡಿರುವ 35 ಅಂಶಗಳ ಜಂಟಿ ಹೇಳಿಕೆ ಒಂದು ಸಮಗ್ರವಾದ, ಎಲ್ಲ ರಂಗಗಳನ್ನು, ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಪ್ರಶ್ನೆಗಳೆಲ್ಲವನ್ನು ಒಳಗೊಂಡಿರುವ ದಸ್ತಾವೇಜು. ಒಂದರ್ಥದಲ್ಲಿ, ಈ ಭೇಟಿಯ ಪ್ರತಿಫಲ ಕೇವಲ ಪರಸ್ಪರ ಮಹತ್ವದ ಪ್ರಶ್ನೆಗಳಿಗೆ, ಮತ್ತು ವಿವಾದಾಸ್ಪದ ವಿಷಯಗಳ ಪರಿಹಾರದ ಆಶಯಗಳನ್ನು ವ್ಯಕ್ತಪಡಿಸುವುದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ, ಬದಲಿಗೆ, ನಮ್ಮ ಪ್ರದೇಶದ, ದಕ್ಷಿಣ ಏಶ್ಯಾಕ್ಕೆ ಸಂಬಂಧಪಟ್ಟ ಕಾಳಜಿಗಳನ್ನು ಮತ್ತು ವಿವಾದಾಸ್ಪದವಾದ ಜಾಗತಿಕ ವಿಷಯಗಳನ್ನೂ ಒಳಗೊಂಡಿದೆ.

ಜಂಟಿ ಹೇಳಿಕೆ "21ನೇ ಶತಮಾನದಲ್ಲಿ ಭಾರತ-ಚೀನಾ ಸಂಬಂಧಗಳ ಸಮಗ್ರ ಮತ್ತು ತ್ವರಿತ ಪ್ರಗತಿಯ ಪರಾಮರ್ಶೆಯನ್ನು ತೃಪ್ತಿಕರವಾಗಿ" ಮಾಡಿದೆ. ಇಂತಹ ಸಂಬಂಧಗಳನ್ನು ಭವಿಷ್ಯದಲ್ಲಿ ಶಾಂತಿಯುತ ಸಹ-ಅಸ್ತಿತ್ವದ ಐದು ಸೂತ್ರಗಳು ಅಥವ 'ಪಂಚಶೀಲ'ದ ಆಧಾರದಲ್ಲಿ ಕ್ರೋಡೀಕರಿಸಲಾಗುವುದು ಎಂದು ಪುನರುಚ್ಚರಿಸಿರುವ ಹೇಳಿಕೆ "ಎರಡೂ ದೇಶಗಳು ಪರಸ್ಪರ ಪ್ರಯೋಜನಕ್ಕಾಗಿ ಜೊತೆಗೂಡಿರುವ ಪಾಲುದಾರರಾಗಿ ಪರಸ್ಪರರನ್ನು ಕಾಣುತ್ತವೆಯೇ ಹೊರತು ಪ್ರತಿಸ್ಪರ್ಧಿಗಳು ಮತ್ತು ಸ್ಪರ್ಧಾಳುಗಳು ಎಂದಲ್ಲ" ಎಂದು ಹೇಳಿದೆ. ಮುಂದುವರೆದು ಅದು "ಎರಡೂ ಕಡೆಗಳವರು ತಮ್ಮ ಪ್ರದೇಶಗಳನ್ನು ಪರಸ್ಪರರ ವಿರುದ್ಧ ಚಟುವಟಿಕೆಗಳಿಗೆ ಬಳಸಲು ಅವಕಾಶ ನೀಡುವುದಿಲ್ಲ" ಎಂದು ಹೇಳುತ್ತದೆ. ಭೇಟಿ ಹುಟ್ಟಿಸಿದ ಜಾಗತಿಕ ಮಾಧ್ಯಮ ಟಿಪ್ಪಣಿಗಳನ್ನು ಗಮನದಲ್ಲಿಟ್ಟುಕೊಂಡೇ ಇರಬಹುದು, ಈ ಹೇಳಿಕೆ "ಎರಡೂ ಕಡೆಗಳವರು ಬೇರೆ ದೇಶಗಳೊಂದಿಗೆ ಪರಸ್ಪರರ ಗೆಳೆತನವನ್ನು ಸರಕಾರಾತ್ಮಕವಾಗಿ ನೋಡಲು ಮತ್ತು ಬೆಂಬಲಿಸಲು ಬದ್ಧರಾಗಿದ್ದಾರೆ" ಎನ್ನುತ್ತದೆ. ಎರಡೂ ದೇಶಗಳು ಪ್ರಭುತ್ವದ/ಸರಕಾರದ ಮುಖ್ಯಸ್ಥರ ಭೇಟಿಗಳ ನಿಯಮಿತ ವಿನಿಮಯವನ್ನು ಹೆಚ್ಚಿಸಲು ಹಾಗೂ ಮಹತ್ವದ ಬಹಪಕ್ಷೀಯ ವೇದಿಕೆಗಳ ಸಂದರ್ಭಗಳಲ್ಲಿ ಪರಸ್ಪರ ಸಂಧಿಸುವುದನ್ನು ಮುಂದುವರೆಸಲು ನಿರ್ಧರಿಸಿದವು.

ನಿಜ, ಈ ಹೇಳಿಕೆಯ ಆಧಾರಸ್ತಂಭ ಆರ್ಥಿಕ ಸಹಕಾರವನ್ನು ಬಹಳಷ್ಟು ಉತ್ತಮಪಡಿಸುವುದು ಮತ್ತು ದ್ವಿಪಕ್ಷೀಯ ವ್ಯಾಪಾರವನ್ನು ಕನಿಷ್ಟ 100 ಬಿಲಿಯ ಡಾಲರುಗಳಿಗೆ ತುರ್ತಾಗಿ ಏರಿಸುವುದು. ಸದ್ಯಕ್ಕೆ ಇದು ಸುಮಾರು 70 ಬಿಲಿಯ ಡಾಲರುಗಳಷ್ಟಿದೆ. ಆದರೆ ಇದು ಚೀನಾದ ಕಡೆಗೇ ಹೆಚ್ಚುವಾಲಿಕೊಂಡಿದೆ. ಅದರ ರಫ್ತುಗಳ ಮೊತ್ತ 53 ಬಿಲಿಯ ಡಾಲರುಗಳಾದರೆ, ಚೀನಾಕ್ಕೆ ನಮ್ಮ ರಫ್ತುಗಳು ಕೇವಲ 17 ಬಿಲಿಯ ಡಾಲರುಗಳು. ಮುಂಬೈಯಲ್ಲಿ ಸಿಐಐ, ಫಿಕಿ ಮತ್ತು ಅಸ್ಸೋಚಾಮ್ ಜಂಟಿಯಾಗಿ ಸಂಘಟಿಸಿದ್ದ 'ವ್ಯವಹಾರ ಶೃಂಗ'ವನ್ನು ಉದ್ದೇಶಿಸಿ ಮಾತಾಡುತ್ತ ಚೀನೀ ಪ್ರಧಾನಿಗಳು ಈ ಅಸಮತೋಲವನ್ನು ಸರಿಪಡಿಸಲಾಗುವುದು, ಚೀನಾ ಇದಕ್ಕೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಎಂದು ಭರವಸೆ ನೀಡಿದರು.

ಪ್ರಾದೇಶಿಕ ಸಹಕಾರ

ಪ್ರಾದೇಶಿಕ ಸಹಕಾರವನ್ನು ಬಲಪಡಿಸಲು ಜಂಟಿ ಹೇಳಿಕೆಯಲ್ಲಿ ಸಾಕಷ್ಟು ಗಮನ ನೀಡಲಾಗಿದೆ. ಎರಡು ದೇಶಗಳ ನಡುವಿನ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಚರಕ ಎಂಬ ವೈದ್ಯರ ವಿಚಾರಗಳಿಗೂ ವಚನ ಚಳುವಳಿಗೂ ಎತ್ತಣಿಂದೆತ್ತ ಸಂಬಂಧವಯ್ಯಾ ?

ಜಿ.ಎಸ್. ನಾಗರಾಜ್

ವಚನಕಾರರು ಆ ಕಾಲದಲ್ಲಿ ವೇದಾಂತದ ಹೆಸರಿನಲ್ಲಿ ಪ್ರಚುರವಾಗಿದ್ದ ಹಾಗೂ ಸಮಾಜದ ಮೇಲೆ ಹಿಡಿತ ಸಾಧಿಸಿದ್ದ , ಜಾತಿವ್ಯವಸ್ಥೆಯನಗನು ಸಮರ್ಥಿಸುತ್ತಿದ್ದ " ಆಧ್ಯಾತ್ಮ ವಿಚಾರಗಳನ್ನು ಧಿಕ್ಕರಿಸುವ ವಿಚಾರಗಳು ವಚನಕಾರರಿಗೆ ಮೂಡಿದ್ದು ಹೇಗೆ ? ಈ ಸಮಾನತೆಯ ತತ್ವದ ಹಿಂದೆ ಭಾರತದ ವೈದ್ಯ ವಿಜ್ಞಾನದ ಅಧ್ವರ್ಯುಗಳಾದ ಚರಕರ ವೈದ್ಯಕೀಯ ಅನುಭವದ ಮೂಸೆಯಲ್ಲಿ ಪಡೆದ ಅರಿವಿನ ಬೆಳಗಿದೆ. ಎಲ್ಲ ದೇಹಗಳೂ ಒಂದೇ ಎಂಬ ಸತ್ಯ ವೈದ್ಯರ್ರಿಗೆ ತಿಳಿವಂತೆ ಬೇರೇ ಯಾರಿಗಾದರೂ ತಿಳಿಯಲು ಸಾಧ್ಯವೇ ? ಹಿಗಾಗಿ ಚರಕ ಸಂಹಿತೆಯಲ್ಲಿ ಅಂಗ ತತ್ವಗಳ ನಿರೂಪಣೆ ಅವರ ವೈದ್ಯಕೀಯ ಅನುಭವದ ಹಿಂದಿನ ತಾತ್ವಿಕತೆಯಾಗಿ ವಿವರಿಸಲ್ಪಟ್ಟಿದೆ. 25 ಅಥವಾ ಪಂಚವಿಂಶತಿ ತತ್ವಗಳೆಂದು ಅದನ್ನು ಕರೆಯಲಾಗಿದೆ. ವಚನಗಳಲ್ಲಿಯೂ ಪಂಚ ವಿಂಶತಿ ತತ್ವಗಳನ್ನು ಹಲವು ಬಾರಿ ಪ್ರಸ್ತಾಪ ಮಾಡಿದ್ದಾರೆ, ವಿವರಿಸಿದ್ದಾರೆ. ವಚನಗಳ ಪ್ರಧಾನ ತತ್ವ ಷಟ್ತ್ರಿಂಶತಿ ತತ್ವಗಳು ಅಥವಾ 36 ತತ್ವಗಳೇ. ಈ ತತ್ವಗಳ ಮೂಲವಾದ ಪಂಚವಿಂಶತಿ ತತ್ವಗಳಿಗೂ ಅದೇ ರೀತಿಯ ಮಾನ್ಯತೆ ನೀಡಲಾಗಿದೆ. ಈ ಅಂಗ ತತ್ವಗಳು ಚರಕ ಸಂಹಿತೆಗಿಂತಲೂ ಹಿಂದಿನ ಕ್ರಿಸ್ತ ಪೂರ್ವ ಕಾಲದ ಸಾಂಖ್ಯ ದರ್ಶನದಿಂದ ಪಡೆದುಕೊಂಡವು. ಜಗತ್ತನ ಸೃಷ್ಟಿ ಹಾಗೂ ವಿಕಾಸದ ತತ್ವವಾಗಿ ಅದರಲ್ಲಿ ಪ್ರಕೃತಿಯ ಪ್ರಾಧಾನ್ಯತೆಯನ್ನು ಪ್ರತಿಪಾದಿಸುವ ತತ್ವಶಾಸ್ತ್ರವಾಗಿ ಭಾರತೀಯ ಪರಂಪರೆಯಲ್ಲಿ ತನ್ನ ಗಟ್ಟಿ ಛಾಪು ಮೂಡಿಸಿದೆ.

ಈ ತತ್ವಶಾಸ್ತ್ರ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವ್ಯಾಪಕ ಪ್ರಭಾವವನ್ನು ಬೀರಿತು. ಕಾಶ್ಮೀರದ ಪ್ರತ್ಯಭಿಜ್ಞಾ ಸಿದ್ಧಾಂತ, ತಮಿಳುನಾಡಿನ ಶೈವಧರ್ಮ, ಭಾರತದಾದ್ಯಂತ ಸ್ವತಂತ್ರವಾಗಿ ಹಾಗೂ ವಿವಿಧ ಧಾರ್ಮಿಕ ಪಂಥಗಳ ಮೇಲೆ ಪ್ರಭಾವ ಬೀರಿದ್ದ ತಾಂತ್ರಿಕ ಪಂಥ ಪ್ರಕೃತಿಯ ಪ್ರಾಧಾನ್ಯತೆಯನ್ನು ಎತ್ತಿ ಹಿಡಿಯುವ ಸಾಂಖ್ಯ ದರ್ಶನವನ್ನು ಅಪ್ಪಿಕೊಂಡಿತು. ಈ ತಾಂತ್ರಿಕ ಪಂಥಗಳ ಮೂಲಕ ಬೌದ್ಧ ವಜ್ರಯಾನ, ಚೌರಾಸೀ (84) ಸಿದ್ಧರ ಪರಂಪರೆ, ನವನಾಥರ ಪರಂಪರೆ ಇವುಗಳು ಸಾಂಖ್ಯದರ್ಶನದ ತತ್ವಗಳನ್ನು ಸ್ವೀಕರಿಸಿದವು. ಈ ಮೂಲಕ ಭಕ್ತಿ ಪರಂಪರೆಯ ಮೇಲೇ ವಿವಿಧ ಪ್ರಮಾಣದ ಪ್ರಭಾವ ಬೀರಿತು. ಉದಾಹರಣೆಗೆ ಮಹಾರಾಷ್ಟ್ರದ ಜ್ಞಾನದೇವ, ಮೊದಲಾದವರ ವಾರ್ಕರಿ ಭಕ್ತಿ ಪಂಥ ನವನಾಥರು ಹಾಗೂ ಕಾಶ್ಮೀರದ ಪ್ರತ್ಯಭಿಜ್ಞಾ ಶೈವ ಸಿದ್ಧಾಂತದ ಮೂಲಕ ಸಾಂಖ್ಯ ಸಿದ್ಧಾಂತದ ಪ್ರಭಾವದಲ್ಲಿ ವಿವಿಧ ರೀತಿ ಹಾಗೂ ಪ್ರಮಾಣದಲ್ಲಿ ಜಾತಿ ವ್ಯವಸ್ಥೆಯನ್ನು ಲಿಂಗ ಬೇಧವನ್ನು ವಿರೋಧಿಸಿದವು.



ಪಂಜಾಬಿನಲ್ಲಿ ಪ್ರತ್ಯೇಕ ಧರ್ಮವೇ ಆಗಿ ಮಾರ್ಪಟ್ಟ ಸಿಖ್ ಧರ್ಮವೂ ಈ ಭಕ್ತಿ ಪಂಥಗಳ ಪ್ರಭಾವಕ್ಕೆ ಒಳಗಾಗಿ ಜಾತಿ ಪದ್ಧತಿಯನ್ನು , ಕಂದಾಚಾರ ಗಳನ್ನು ವಿರೋಧಿಸಿತು.

ಯೋಗ ದರ್ಶನ ಮತ್ತು ಕಾಯಕ

ಕಾಯಕಕ್ಕೆ ದೃಢವಾದ ಕಾಯವೂ ಬೇಕು ಎಂಬುದು ಸ್ವಾಭಾವಿಕವಾಗಿಯೇ ವಚನಕಾರರನ್ನು ಷಡ್ದರ್ಶನಗಳಲ್ಲೊಂದಾದ ಯೋಗ ದರ್ಶನದ ಕಡೆಗೆ ಆಕರ್ಷಿಸಿತು . ಅಷ್ಟೇ ಅಲ್ಲದೆ ಆ ವೇಳೆಗಾಗಲೇ ಯೋಗ ದರ್ಶನ ಸಾಂಖ್ಯ ದರ್ಶನಗಳು ಒಂದರಲ್ಲೊಂದು ಬೆರೆತು ಸಾಂಖ್ಯ-ಯೋಗವೆಂದು ಹೆಸರಾಗಿತ್ತು.ಆದ್ದರಿಂದ ಸಾಂಖ್ಯದ ಜೊತೆಗೇ ಯೋಗವನ್ನೂ ವಚನಕಾರರು ಸ್ವೀಕರಿಸಿದರು. ಅವರ ವಚನಗಳಲ್ಲಿ ಯೋಗದ ಹಲವಾರು ಪರಿಕಲ್ಪನೆಗಳನ್ನು ತಮ್ಮವೇ ಆಗಿಸಿಕೊಂಡಿದ್ದಾರೆ. ಅದರಲ್ಲಿಯೂ ವಚನ ಧರ್ಮದ ತಾತ್ವಿಕ ಅರಿವನ್ನು ಪಡೆಯಲು ಅವರು ರೂಪಿಸಿಕೊಂಡ ಮಾರ್ಗ ಷಟ್ಸ್ಥಲ ಸಿದ್ಧಾಂತ ಯೋಗದ ಷಟ್ಚಕ್ರದ ಅಚ್ಚಿನಿಂದ ಮೂಡಿ ಬಂದದ್ದು. ಇದಕ್ಕೂ ಜಾತಿ ವ್ಯವಸ್ಥೆಯ ವಿರೋಧಕ್ಕೂ ಏನು ಸಂಬಂಧ ? ಅದು ಕೇವಲ ಆಧ್ಯಾತ್ಮ ಎಂಬ ವಾದವನ್ನು ಮಂಡಿಸಲಾಗಿದೆ. ಆದರೆ ಈ ಸ್ಥಲಗಳ ಪ್ರತಿಯೊಂದು ಹಂತದಲ್ಲಿಯೂ ಜಾತಿ ವಿರೋಧ ಅಡಕವಾಗಿದೆ. ಒಂದೊಂದು ಸ್ಥಲವನ್ನೂ ಈ ಆಯಾಮದ ಬಗ್ಗೆ ಪ್ರತ್ಯೇಕವಾಗಿ ಪರಿಶೀಲಿಸಬಹುದು. ಆದರೆ ಸ್ಥಳಾಭಾವದಿಂದಾಗಿ ಒಂದೆರಡು ಸ್ಥಲಗಳಿಗೆ ಸೀಮಿತಗೊಳ್ಳಬೇಕಾಗಿದೆ.

ಭಕ್ತ ಸ್ಥಲ : ಭವಿಯಾಗಿದ್ದವನು ಗುರುವಿನಿಂದ ದೀಕ್ಷೆಯನ್ನು ಪಡೆದು ಪುನರ್ಜಾತನಾಗುತ್ತಾನೆ ಎಲ್ಲ ಧಾರ್ಮಿಕ ಪಂಥಗಳ ದೀಕ್ಷೆಯಲ್ಲಿಯೂ ಇದು ಸಾಮಾನ್ಯ. ದೀಕ್ಷೆಯನ್ನು ಹೊಸ ಹುಟ್ಟು ಎಂದು ಪರಿಗಣಿಸುತ್ತಾರೆ. ಹಿಂದಿನೆಲ್ಲ ಸಂಬಂಧಗಳನ್ನು ಕಳೆದುಕೊಳ್ಳತ್ತಾರೆ. ಆದರೆ ಈ ಹೊಸ ಹುಟ್ಟು ಸನ್ಯಾಸ ದೀಕ್ಷೆ ಪಡೆದ ಕೆಲವರಿಗೆ ಮಾತ್ರ ಅನ್ವಯವಗುವಂತಹದು. ಆದ-ರೆ ವಚನಕಾರರ ಧರ್ಮದಲ್ಲಿ ಜನ ಸಾಮಾನ್ಯರು ಲಕ್ಷೋಪ ಲಕ್ಷ ಸಂಖ್ಯೆಯಲ್ಲಿ ಸಂಸಾರದಲ್ಲಿದ್ದುಕೊಂಡೇ ದೀಕ್ಷೆತೆಗೆದುಕೊಳ್ಳುವುದು ಮತ್ತು ಅದನ್ನು ಹೊಸ ಹುಟ್ಟೆಂದು ಪರಿಗಣಿಸುವುದು ಅಪರೂಪದ ಸಂಗತಿ. ಬಹಳಷ್ಟು ಸನ್ಯಾಸ ದೀಕ್ಷೆಗಳಲ್ಲಿಯೂ ಅವರು ತಮ್ಮ ತಂದೆ ತಾಯಿ, ಬಂಧುಗಳೊಡನೆಯ ಸಂಬಂಧವನ್ನು ಕಳೆದುಕೊಳ್ಳುತ್ತಾರೆಯೇ ಹೊರತು ತಮ್ಮ ಜಾತಿಯನ್ನಲ್ಲ . ಹಾಗೆ ಜಾತಿಯನ್ನು ತ್ಯಜಿಸಿ ಸನ್ಯಾಸ ಅಥವಾ ಇತರ ದೀಕ್ಷೆ ಪಡೆಯುವವರು ಸಾಮಾನ್ಯವಾಗಿ ವೈದಿಕ ಪಂಥಗಳಲ್ಲ.



ವಚನಕಾರರ ಪ್ರಕಾರ ಭಕ್ತನಾಗುವುದೆಂದರೆ ಶಿವಾಚಾರವನ್ನು ತಪ್ಪದೆ ಆಚರಿಸಬೇಕು. ಈ ಮೊದಲೇ ವಿವರಿಸಿದಂತೆ ಅವರ ಹಿಂದಿನ ಜಾತಿಯನ್ನು ಪರಿಗಣಿಸದೇ ಎಲ್ಲ ಭಕ್ತರನ್ನೂ ತನ್ನ ಬಂಧುಗಳೆಂದೇ ಪರಿಗಣಿಸಬೇಕು. ಅವರೊಡನೇ ಮಾತ್ರ ವೈವಾಹಿಕ ಸಂಬಂಧವನ್ನು ಬೆಳೆಸಬೇಕು. ಗುರು ಹಾಗೂ ಜಂಗಮರನ್ನೂ ಅವರ ಜಾತಿಯನ್ನು ಪರಿಗಣಿಸದೇ ಅವರಿಗೆ ಎಲ್ಲ ಗೌರವ, ಸತ್ಕಾರ ಮಾಡಬೇಕು. ಗುರು, ಜಂಗಮರೂ ಕೂಡ ಭಕ್ತರಾಗಿ ದೀಕ್ಷೆ ನೀಡಿದ ಬಳಿಕ ಜಾತಿಯನ್ನು ಪರಿಗಣಿಸದೇ ಅವರ ಮನೆಯಲ್ಲಿ ಊಟೋಪಚಾರಗಳನ್ನು ಸ್ವೀಕರಿಸಬೇಕು. ಇದೆಲ್ಲವೂ ಇಲ್ಲಿಯವರೆಗೆ ವಿವರಿಸಿದ ವಚನಕಾರರ ಆಧ್ಯಾತ್ಮಿಕ ಸಿದ್ಧಾಂತದ ಆಚರಣೆಯೇ ಹೊರತು ಮತ್ತೇನಲ್ಲ.

ಭಕ್ತರ ವಿಷಯದಲ್ಲಿ ಮಾತ್ರವೇ ಅಲ್ಲದೇ ಭವಿಗಳ ವಿಷಯದಲ್ಲಿಯೂ ಜಾತಿ ವ್ಯವಸ್ಥೆಯ ವಿರೋಧವನ್ನು ಕಾಣಬಹುದು. ಭವಿಗಳು ಯಾವ ಜಾತಿಯೇ ಆಗಿರಬಹುದು ನೀವು ಅವರನ್ನೆಲ್ಲಾ ಒಂದೇ ಎಂದು ಭಾವಿಸಬೇಕು. ಯಾರ ಮನೆಯಲ್ಲಿಯೂ ಊಟ , ಮೊದಲಾದ ಯಾವ ಸಾಮಾಜಿಕ ಸಂಬಂಧವನ್ನೂ ಇಟ್ಟುಕೊಳ್ಳಬಾರದು ಎಂದು ನಿಷೇಧಿಸಲಾಗಿದೆ. ಶಿವಾಚಾರ ದೀಕ್ಷೆ ತೆಗೆದುಕೊಳ್ಳುವ ಮೊದಲು ನೀವು ಕೆಳ ಜಾತಿಯವರೇ ಆಗಿದ್ದಿರಬಹುದು ಆದ-ರೆ ನೀವು ಬ್ರಾಹ್ಮಣರನ್ನು ಮೇಲ್ಜಾತಿ ಎಂದು ಪರಿಗಣಿಸಿ ಅವರು ಮಾಡಿದ ಅಡುಗೆಯನ್ನು ಊಟಮಾಡುವಂತಿಲ್ಲ. ಇದು ಕೂಡ ಸಮಾಜದಲ್ಲಿ ಆಚರಣೆಯಲ್ಲಿರುವ ಜಾತಿಯ ಆಚರಣೆಗಳನ್ನು ಧಿಕ್ಕರಿಸಿದಂತೆಯೇ. ಹೀಗೆ ಕೇವಲ ಭಕ್ತ ಮಾತ್ರವಲ್ಲ ಭವಿಯ ಪರಿಕಲ್ಪನೆಯೂ ಕೂಡ ಜಾತಿ ಪದ್ಧತಿಯ ವಿರುದ್ಧ ಸೆಟೆದು ನಿಲ್ಲುವ ವಿಚಾರವನ್ನು ತನ್ನೊಳಗೆ ಬಚ್ಚಿರಿಸಿಕೊಂಡಿದೆ.

ಪುರುಷ ಸೂಕ್ತಕ್ಕೆ ಪ್ರತಿ ಸೂಕ್ತ

ಚಾತುರ್ವರ್ಣ್ಯದ ಉಗಮಕ್ಕೆ ಅತ್ಯಂತ ಪ್ರಾಚೀನ ಉಲ್ಲೇಖವಾದ ಋಗ್ವೇದದ ಪುರುಷ ಸೂಕ್ತ ಪ್ರಸಿದ್ಧವಾದುದು. ತಲೆಯಿಂದ ಬ್ರಾಹ್ಮಣ, ಭುಜಗಳಿಂದ ಕ್ಷತ್ರಿಯ ಇತ್ಯಾದಿ ಈ ಶರೀರದ ಮೇಲು (ಉತ್ತಮಾಂಗ) ಕೀಳಿನ ಕಲ್ಪನೆಗೆ ಅನುಗುಣವಾಗಿ ವರ್ಣ ವಿಭಜನೆಯಲ್ಲಿ ಮೇಲು ಕೀಳಿನ ಕಂದರವನ್ನು ಸೃಷ್ಟಿಸುವ ಈ ಸೂಕ್ತ ಅಂದಿನಿಂದ ಇಂದಿನವರೆಗೆ ಶಾಸ್ತ್ರ, ಪುರಾಣಗಳಲ್ಲಿ ಅನೇಕ ಬಾರಿ ಉದಾಹರಿಸಲ್ಪಟ್ಟಿದೆ. ಈ ಸೂಕ್ತಕ್ಕೆ ಸೆಡ್ಡು ಹೊಡೆವಂತೆ ವಚನಕಾರರು ಪ್ರತಿ ಸೂಕ್ತವೊಂದನ್ನು ಕಲ್ಪಿಸಿದ್ದಾರೆ. ಸಿದ್ಧರಾಮನ ಒಂದು ವಚನದಲ್ಲಿ ಶಿವನ ಪಂಚ ಮುಖಗಳಿಂದ ವರ್ಣಗಳ ಉತ್ಪತ್ತಿಯಾಯಿತೆಂದು ವಿವರಿಸಲಾಗಿದೆ. ಶಿವನಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಐದು ಮುಖಗಳು. ಅದರಲ್ಲಿ ಅದ್ಯೋಜಾತ ಮುಖದಿಂದ ಬ್ರಾಹ್ಮಣನೂ, ವಾಮದೇವ ಮುಖದಿಂದ ಕ್ಷತ್ರಿಯನೂ, ಅಘೋರ ಮುಖದಿಂದ ವೈಶ್ಯನೂ, ತತ್ಪುರುಷ ಮುಖದಿಂದ ಶೂದ್ರನೂ ಜನಿಸಿದನೆಂದು ಹೇಳುತ್ತಾನೆ . ಹೀಗೆ ಋಗ್ವೇದದ ಪುರುಷ ಸೂಕ್ತಕ್ಕೆ ಪ್ರತಿ ಸೂಕ್ತವೊಂದನ್ನು ಸೃಷ್ಟಿಸಿ ಜಾತಿ ಬೇಧವನ್ನು ಒಡೆಯಲು ಪ್ರಯತ್ನಿಸಿದ ವಚನಕಾರರ ಪ್ರತಿಭೆ ಅಚ್ಚರಿಯನ್ನು

ಪುಟ 10 ಕ್ಕೆ

ಚರಕ ಎಂಬ.....

ಪುಟ 9 ರಿಂದ

ಮೂಡಿಸುತ್ತದೆ. ಈ ವಚನದ ಸಾರವೂ ಸ್ಪಷ್ಟ. ಶಿವನ ಮುಖಗಳೆಲ್ಲವೂ ಸಮಾನ. ಅವುಗಳಿಂದ ಜನಿಸಿದ ಈ ವರ್ಣಗಳೂ ಸಮಾನ ಎಂಬುದನ್ನು ಈ ಪ್ರತಿ ಸೃಷ್ಟಿಯ ಮೂಲಕ ಸಾರುತ್ತಾರೆ. ವರ್ಣ ವ್ಯವಸ್ಥೆ ಹೋಗಬೇಕು ಎಂದು ಈ ವಚನದಲ್ಲಿ ಎಲ್ಲಿ ಹೇಳಿದೆ? ವರ್ಣಗಳೆಲ್ಲವೂ ಶಿವನಿಂದಲೇ ಹುಟ್ಟಿತೆಂದು ಹೇಳುವ ಮೂಲಕ ವಚನಗಳು ಭಗವದ್ಗೀತೆಯ ಶ್ಲೋಕವನ್ನು ಸಮರ್ಥಿಸಿದೆ ಎಂದು ವಾದ ಮಾಡಿದರೆ ಅವರು ಜಾಣ ಕುರುಡರೆನ್ನದೆ ಮತ್ತೇನೆಂದು ಕರೆಯಲು ಸಾಧ್ಯ.

ಶಂಕರರೂ ಜಾತಿ ವ್ಯವಸ್ಥೆಯೂ

"ಆಧ್ಯಾತ್ಮ ಸಾಧನೆಯ ಕುರಿತು ಮಾತನಾಡಿರುವ ಚಿಂತಕರೆಲ್ಲರೂ ಜಾತಿಯ ಕುರಿತು ಈ ರೀತಿಯ ವಿಚಾರಗಳನ್ನೇ ಹೇಳಿದ್ದು. ಬೇಕಾದರೆ ಆದಿಶಂಕರರ ಕೃತಿಗಳನ್ನು ನೋಡಿ." ಎಂದು ತಮ್ಮ ವಾದದ ಸಮರ್ಥನೆಗೆ ಶಂಕರರನ್ನು ಎಳೆದು ತರುವ ಝಳಕಿಯವರು ಜಾತಿ ಬೇಧವನ್ನು ಮತ್ತು ವೇದಗಳನ್ನು ಅಲ್ಲಗಳೆಯುವ ಅವರ ಆತ್ಮ ಷಟ್ಕಂನ ಕೆಲವು ಸಾಲುಗಳನ್ನು ಉದಾಹರಿಸುತ್ತಾರೆ. ಆದರೆ ಪ್ರಶ್ನೆ ಇರುವುದು ಅವರು ಶಂಕರರ ಅದ್ವೈತ ಸಿದ್ಧಾಂತವನ್ನು ಅದರೆ ಸಮಗ್ರತೆಯಲ್ಲಿ ಅಧ್ಯಯನ ಮಾಡಿದ್ದಾರೆಯೇ ? ಅವರ ಒಟ್ಟಾರೆ ತಾತ್ವಿಕ ರಚನೆ ಸಮಾಜದ ಬಗ್ಗೆ, ಜಾತಿ ವ್ಯವಸ್ಥೆಯ ಬಗ್ಗೆ ತಳೆಯುವ ನಿಲುವೇನು ? ಬಾದರಾಯಣರ ಬ್ರಹ್ಮ ಸೂತಕ್ಕೆ ಶಂಕರರು ಬರೆದ ಭಾಷ್ಯದಲ್ಲಿ ಅಪ ಶೂದ್ರಾಧಿಕರಣ ಎಂಬ ಪ್ರಕರಣದ ಬಗ್ಗೆ ಕಣ್ಣು ಹಾಯಿಸಿದ್ದಾರೆಯೇ ?

ಝಳಕಿಯವರು ಆತ್ಮ ಷಟ್ಕಂನ ಉದಾಹರಣೆ ಯನ್ನು ಕೊಡುವಾಗ ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಯಾವ ಮಟ್ಟಕ್ಕೆ ಈ ತಂಡ ಇಳಿಯುತ್ತದೆ ಎಂಬುದಕ್ಕೆ ತಾವೇ ಸ್ಪಷ್ಟ ಉದಾಹರಣೆಯಾಗಿದ್ದಾರೆ. ಆತ್ಮ ಷಟ್ಕಂ ಅದರ ಹೆಸರೇ ಸೂಚಿಸುವಂತೆ ಆತ್ಮಕ್ಕೆ ಸಂಬಂಧಿಸಿದ್ದು. ಕೇವಲ ಆರು ಚೌಪದಿಗಳ ಈ ರಚನೆ ಇಡೀ ಷಟ್ಕದಲ್ಲಿ ಆತ್ಮದ ಲಕ್ಷಣ ಬಗ್ಗೆ ವಿವರಿಸಿದ್ದಾರೆಯೇ ಹೊರತು ಮನುಷ್ಯರ ಬಗ್ಗೆ ಅಲ್ಲ.

ನಿರ್ವಿಕಲ್ಪವೂ ನಿರಾಕಾರವೂ ಆದ ಆತ್ಮನಿಗೆ ಲೋಕದ ಜೊತೆ ಯಾವ ಸಂಬಂಧವೂ ಇಲ್ಲ, ಆದ್ದರಿಂದ ಮುಕ್ತಿಯ ಪ್ರಶ್ನೆ ಉದ್ಭವಿಸುವುದೂ ಇಲ್ಲ. ಅದಕ್ಕೆ ಸುಖವೂ ಇಲ್ಲ ದುಃಖವೂ ಇಲ್ಲ. ಅದಕ್ಕೆ ಧರ್ಮವೂ ಇಲ್ಲ ಅರ್ಥ ಕಾಮ, ಮೋಕ್ಷವೂ ಇಲ್ಲ. ಮೃತ್ಯುಭಯವೂ ಇಲ್ಲ, ಹುಟ್ಟಿನ ಬೇಧವೂ ಇಲ್ಲ ಅದಕ್ಕೆ ವೇದವೂ ಇಲ್ಲ, ಯಜ್ಞವೂ ಇಲ್ಲ "

ಈ ಮಾತುಗಳಲ್ಲಿ ಮನುಷ್ಯರ ಜಾತಿಗಳ ಬಗ್ಗೆ ಅಥವಾ ಜಾತಿ ಬೇಧದ ಬಗ್ಗೆ ಒಂದಾದರೂ ಮಾತಿದೆಯೇ ? ಅಥವಾ ವೇದಗಳ ನಿರಾಕರಣೆ ಎಂದು ಇದನ್ನು ಅರ್ಥೈಸ ಬಹುದೇ ? ಧರ್ಮವೂ ಇಲ್ಲದ ಮೋಕ್ಷವೂ ಇಲ್ಲದ ಮೃತ್ಯುವೂ ಇಲ್ಲದ ಈ ವಸ್ತುವಿಗೆ ಜಾತಿ ಇರುವುದು ಸಾಧ್ಯವೇ ?ಆತ್ಮಕ್ಕೆ ಜಾತಿ ಬೇಧ ಇಲ್ಲವೆಂದರೆ ಮನುಷ್ಯರಲ್ಲಿ ಇರುವ ಜಾತಿ ಬೇಧವನ್ನು ವಿರೋಧಿಸುವ ಹೇಳಿಕೆ ಎನ್ನಬಹುದೇ ? ಈ ಯಾರನ್ನು ಮೂರ್ಖರನ್ನಾಗಿ ಮಾಡಲು ಬಯಸುತ್ತಾರೆ ಈ ಜನ ? ಈ ಆತ್ಮ ಷಟ್ಕಂ ನ ಕಡೆಗೆ ಯಾರೂ ನೋಡುವುದಿಲ್ಲ ಆದ್ದರಿಂದ ಏನು ಬೇಕಾದರೂ ಹೇಳಿ ಪಾರಾಗಬಹುದು ಎಂದು ಭಾವಿಸಿದ್ದಾರೆಯೇ ?

ಇನ್ನು ಮನುಷ್ಯಸಮಾಜದಜಾತಿವ್ಯವಸ್ಥೆಯ ಬಗ್ಗೆ, ಜಾತಿ ಬೇಧಗಳ ಬಗ್ಗೆ ಶಂಕರರು ಏನು ಹೇಳತ್ತಾರೆ ನೋಡೋಣ

ಬ್ರಹ್ಮ ಸೂತ್ರದಲ್ಲಿ ಅಪ ಶೂದ್ರಾಧಿಕರಣವೆಂದು ಕರೆಯಲ್ಪಡುವ ಭಾಗದಲ್ಲಿ 1-3- 34 ರಿಂದ 1-3-38 ರವರೆಗಿನ ಸೂತ್ರಗಳ ಬಗ್ಗೆ ಶಂಕರರು ನೀಡಿದ ವಿವರಣೆಗಳಲ್ಲಿ

" ಶೂದ್ರರಿಗೆ ಜ್ಞಾನದ ಹಕ್ಕಿಲ್ಲ. ಏಕೆಂದರೆ ಅವರು ವೇದವನ್ನು ಆಧ್ಯಯನ ಮಾಡುವಂತಿಲ್ಲ. ವೇದಾಧ್ಯಯನ ಮಾಡುವುದಕ್ಕೆ ಉಪನಯನವಾಗಿರಲೇ ಬೇಕು. ಉಪನಯನ ಮೂರು ದ್ವಿಜ ಜಾತಿಯವರಿಗೆ ಮಾತ್ರ ಸೀಮಿತಗೊಳಿಸಲ್ಪಟ್ಟಿದೆ. ಆದ್ದರಿಂದ ಶೂದ್ರರು ವೇದಗಳನ್ನು ಅಧ್ಯಯನ ಮಾಡುವಂತಿಲ್ಲ. ಅವರಿಗೆ ಜ್ಞಾನವನ್ನು ಪಡೆಯುವ ಅಭಿಲಾಷೆಯಿರಬಹುದು. ಸಾಮರ್ಥ್ಯವೂ ಇರಬಹುದು ಆದರೆ ಇವು ಯಾವುದೂ ಅವರನ್ನು ಜ್ಞಾನ ಪಡೆಯುವುದಕ್ಕೆ ಅರ್ಹರನ್ನಾಗಿ ಮಾಡುವುದಿಲ್ಲ. ಏಕೆಂದರೆ ಕೇವಲ ಸಾಮಾನ್ಯ ಸಾಮರ್ಥ್ಯ ಅದಕ್ಕೆ ಅರ್ಹರನ್ನಾಗಿ ಮಾಡುವುದಿಲ್ಲ. ಅದಕ್ಕೆ ಬೇಕಾದದ್ದು ವೇದ ಜ್ಞಾನದ ಸಾಮರ್ಥ್ಯ ಅದು ಅವರಿಗೆ ನಿಷೇಧಿಸಲ್ಪಟ್ಟಿಧೆ. " ಎಂದು ಸಾರಿದ್ದಾರೆ.

ಶೂದ್ರರಿಗೆ ಅಭಿಲಾಷೆಯಿರಬಹುದು. ಸಾಮರ್ಥ್ಯವೂ ಇರಬಹುದು. ಆದರೆ ನಿಷೇಧದಿಂದಾಗಿ, ಅದಕ್ಕೆ ಅವರು ದ್ವಿಜರಲ್ಲದುದೇ ಕಾರಣವಾಗಿ ಅವರಿಗೆ ಜ್ಞಾನದ ಹಕ್ಕು ಇಲ್ಲ. ಇದು ಜಾತಿ ವ್ಯವಸ್ಥೆಯೋ ಅಲ್ಲವೋ ?

ಶಂಕರರು ಮುಂದಿನ ಸೂತ್ರಗಳ ವಿವರಣೆಯಲ್ಲಿ ಇನ್ನೂ ಭಯಂಕರ ಸಂಗತಿಗಳಿಗೆ ತಮ್ಮ ಅಂಗೀಕಾರ ಮುದ್ರೆಯನ್ನು ಒತ್ತುತ್ತಾರೆ. ಸ್ಮೃತಿಗಳು ಹೇಳಿವೆ

" ಶೂದ್ರನಿಗೆ ವೇದಗಳನ್ನು ಕೇಳುವ ಹಕ್ಕಿಲ್ಲ. ಅಧ್ಯಯನ ಮಾಡುವ ಹಕ್ಕಿಲ್ಲ. ವೇದಗಳ ಅರ್ಥವನ್ನು ತಿಳಿಯುವ ಹಕ್ಕಿಲ್ಲ ಎಂದು. ಅವನೇನಾದರೂ ವೇದಗಳನ್ನು ಕೇಳಿಸಿಕೊಂಡು ಬಿಟ್ಟರೆ ಅವನ ಕಿವಿಗೆ ಕಾದ ಸೀಸ ಮತ್ತು ಅರಗಿನಿಂದ ತುಂಬಿಬಿಡಬೇಕೆಂದು ಗ್ರಂಥಗಳು ಹೇಳಿವೆ. ಶೂದ್ರನು ಚಲಿಸುವ ಸ್ಮಶಾನ ವಾದ್ದರಿಂದ ಅವನು ಇರುವ ಆಸು ಪಾಸಿನಲ್ಲಿ ವೇದಗಳನ್ನು ಓದಬಾರದು. "

ಅಷ್ಟೇ ಅಲ್ಲ " ವೇದೋಚ್ಚಾರಣೋ ಜಿಹ್ವಾಚ್ಛೇದೋ ವೇದಧಾರಣೋ ದೇಹಚ್ಛೇದೋ"

ಅಂದರೆ ಶೂದ್ರನು ವೇದವನ್ನು ಉಚ್ಚರಿಸಿದರೆ ಅವನ ನಾಲಿಗೆಯನ್ನೇ ಕತ್ತರಿಸಬೇಕು. ವೇದವನ್ನು ಹೃದ್ಗತ ಮಾಡಿಕೊಂಡರೆ (ನೆನಪಿನಲ್ಲಿಟ್ಟುಕೊಂಡರೆ) ಅವನ ದೇಹವನ್ನು ಛಿದ್ರ ಛಿದ್ರ ಮಾಡಬೇಕು.

"ಆದರೆ ವಿದುರ, ಧರ್ಮವ್ಯಾಧರಂತೆ ಹಿಂದಿನ ಜನ್ಮಗಳಲ್ಲಿ ಮಾಡಿದ ಪುಣ್ಯದ ಫಲವಾಗಿ ಅವರಿಗೆ ತಾನೇ ತಾನಾಗಿ ಜ್ಞಾನ ಲಭಿಸಿದರೆ ಅದನ್ನು ತಪ್ಪಿಸಲಾಗದು. ಶೂದ್ರರಿಗೆ ಪುರಾಣಗಳನ್ನು ಬೇಕಾದರೆ ಓದಿ ಹೇಳಬಹುದು. ಆದರೆ ಶೂದ್ರರಿಗೆ ವೇದಗಳ ಮೂಲಕ ಜ್ಞಾನ ಪಡೆಯುವ ಹಕ್ಕಿಲ್ಲ."

ಇದು ಶಂಕರರ ಅಮೃತ ವಾಕ್ಯಗಳು. ಇಂತಹ ಶಂಕರರು ಜಾತಿ ಬೇಧವನ್ನು ವಿರೋಧಿಸುವ ಮಾತುಗಳನ್ನು ಆಡಿದ್ದಾರೆ ಎನ್ನುತ್ತಾರೆ ಝಳಕಿಯವರು.

ಬಾಲಗಂಗಾಧರ್ ತಂಡದವರು ವಚನಗಳ ಮಾರ್ಗವಾಗಲೀ ಶಂಕರರ ಮಾರ್ಗವಾಗಲೀ ಎಲ್ಲ ಆಧ್ಯಾತ್ಮದ ವಿವಿಧ ಮಾರ್ಗಗಳು. ಸತ್ಯವನ್ನು ಕಂಡು ಹಿಡಿಯಲು ಮಾಡುವ ಪ್ರಯತ್ನಗಳು . ಅವುಗಳ ನಡುವೆ ಭಿನ್ನತೆಯಿರಬಹುದು ಆದರೆ ವಿರೋಧವೇನಿಲ್ಲ ಎಂಬ ಮಾತುಗಳನ್ನಾಡುತ್ತಾರೆ. ಹಾಗಾದರೆ ಇಸ್ಲಾಂ ಹಾಗೂ ಕ್ರಿಶ್ಚಿಯನ್ ಧರ್ಮಗಳು ಅವರ ಮಾತಿನಲ್ಲಿಯೇ ಹೇಳುವುದಾದರೆ ರಿಲಿಜನ್ನುಗಳು ಕೂಡ ಸತ್ಯವನ್ನು ಅನ್ವೇಷಿಸುವ ವಿವಿಧ ಮಾರ್ಗಗಳೆಂದೇ ಆ ಧರ್ಮಗಳ ಸಂತರೂ ಅವರ ಅನುಯಾಯಿಗಳೂ ಸಾರಿಕೊಂಡು ಬಂದಿದ್ದಾರೆ. ಅದನ್ನು ವಿವೇಕಾನಂದರೂ ಸೇರಿದಂತೆ ನಮ್ಮ ದೇಶದ ಹಲವು ಧಾರ್ಮಿಕ ಸಂತರೂ, ಸಾಮಾನ್ಯ ಜನತೆಯೂ ಹಲವು ರೂಪದಲ್ಲಿ, ಆಚರಣೆಗಳಲ್ಲಿ ಮಾನ್ಯ ಮಾಡುತ್ತಾ ಬಂದಿದ್ದಾರೆ ಎಂದ ಮೇಲೆ ಕ್ರಿಶ್ಚಿಯನ್ ಧರ್ಮದ ದೃಷ್ಟಿಕೋನ ನಮ್ಮ ಸಾಮಾಜಿಕ ಅಧ್ಯಯನವನ್ನು ಕೆಡಿಸಿಟ್ಟಿದೆ ಎಂದು ಹಳಹಳಿಸುವುದೇಕೆ ? ಸತ್ಯವನ್ನು ಕಂಡು ಹಿಡಿಯುವ ಆ ಮಾರ್ಗಗಳ ಬಗ್ಗೆ ಹಗೆ ಸಾಧಿಸುವುದೇಕೆ ?

ಈಗಾಗಲೇ ಚಂದ್ರಶೇಖರ ಕಂಬಾರರು ತಮ್ಮ ಪ್ರತಿಕ್ರಿಯೆಯಲ್ಲಿ ಆಧ್ಯಾತ್ಮವೆಂದ ಕೂಡಲೇ ಎಲ್ಲಾ ಒಂದೇ ಆಗಿಬಿಡುವುದಿಲ್ಲ. ವಚನಗಳ , ವಿವಿಧ ಭಕ್ತಿ ಮಾರ್ಗಗಳ ಪರಂಪರೆ ವೈದಿಕ ಪರಂಪರೆಗೆ ವಿರೋಧವಾಗಿದೆ ಎಂಬುದನ್ನು ಹೇಳಿದ್ದಾರೆ.

ವಚನಗಳು ಹಾಗೂ ಶಂಕರರು ಪ್ರತಿಪಾದಿಸಿದ ಆಧ್ಯಾತ್ಮ ವಿಚಾರಗಳನ್ನೇ ತೆಗೆದುಕೊಂಡು ಪರಿಶೀಲಿಸಿದರೂ ಅವುಗಳ ನಡುವೆ ಇರುವುದು ಕೇವಲ ಭಿನ್ನತೆಯಲ್ಲ ಕಟ್ಟಾ ವಿರೋಧ ಎಂಬುದು ಕಣ್ಣಿಗೆ ಹೊಡೆಯುವಂತೆ ಗೋಚರಿಸುತ್ತದೆ.

ಶಂಕರರೂ, ಸಾಂಖ್ಯ ದರ್ಶನವೂ

ಶಂಕರರ ಕಾಲಕ್ಕಾಗಲೇ ಬಹಳ ಪ್ರಭಾವಶಾಲಿಯಾಗಿದ್ದ ಸಾಂಖ್ಯ- ಯೋಗ ದರ್ಶನಗಳು ಅವರು ವೇದಾಂತವೆಂದು ಕರೆದ ವಿಚಾರಗಳಿಗೆ, ಆ ಮೂಲಕ ಅವರು ಬ್ರಾಹ್ಮಣ ಶ್ರೇಷ್ಠತೆಯ, ದ್ವಿಜ ಜಾತಿಗಳ ಆಳ್ವಿಕೆ ಸಮಾಜಕ್ಕೆ ದೊಡ್ಡ ಸವಾಲಾಗಿ ಎದುರಾದವು. ಆದ್ದರಿಂದ ಶಂಕರರು ಸಾಂಖ್ಯ- ಯೋಗ ದರ್ಶನಗಳನ್ನು ತಮ್ಮ ಪ್ರಮುಖ ಎದುರಾಳಿ ಎಂದು ಪರಿಗಣಿಸಿದರು ಮತ್ತು ಖಂಡಿಸಲು ಹಾಗೂ ಅವುಗಳ ಪ್ರಭಾವವನ್ನು ಕುಗ್ಗಿಸಲು ಪ್ರಯತ್ನಿಸಿದರು. ಅವರೇ ತಮ್ಮ ಗ್ರಂಥಗಳಲ್ಲಿ ಹೇಳಿದಂತೆ ' 'ಸಾಂಖ್ಯ ತತ್ವಗಳಿಗೆ ಮೊದಲು ಪ್ರತಿವಾದವನ್ನು ಹೂಡುತ್ತೇನೆ. ಏಕೆಂದರೆ ಅತಿ ಬಲಶಾಲಿಯಾದ ಜಟ್ಟಿಯನ್ನು ಮೊದಲು ಸೋಲಿಸಿದರೆ ಇನ್ನುಳಿದವರನ್ನು ಸೋಲಿಸುವುದು ಬಹಳ ಸುಲಭವಾಗುತ್ತದೆ ' ಎಂದು ಭಾವಿಸಿದರು. ಅವರ ಬ್ರಹ್ಮ ಸತ್ಯ ಜಗನ್ಮಿಥ್ಯ ಅಥವಾ ಬ್ರಹ್ಮವೊಂದೇ ಸತ್ಯ ಇಡೀ ಸೃಷ್ಟಿಯೆಲ್ಲಾ ಮಾಯೆ ಎಂಬ ತತ್ವ ಈ ಜಗತ್ತನ್ನು ಕಡೆಗಣಿಸಿ, ಕರ್ಮ ಮಾಡುವುದಷ್ಟೇ ನಮ್ಮ ಕರ್ತವ್ಯ, ಫಲಾಫಲಗಳು ಬ್ರಹ್ಮೇಚ್ಛೆ. ಈ ಜಗತ್ತಿನ ಸಂಕಟಗಳಿಂದ ಪಾರಾಗಲು ದೇಹವನ್ನು ದಂಡಿಸಿ ಮೋಕ್ಷದತ್ತ ಗಮನ ನೀಡುವುದೇ ದಾರಿ ಎಂಬ ಅವರ ವಿಚಾರಗಳಿಗೆ ತದ್ವಿರುದ್ಧವಾಗಿದ್ದವು ಸಾಂಖ್ಯದ ಈ ವಿಚಾರಗಳು : ' ಪ್ರಕೃತಿಯೇ ಪ್ರಧಾನ. ಅದು ತನ್ನಿಂದ ತಾನೇ ವಿಕಾಸವಾಗುತ್ತಾ ತತ್ವಗಳು ಉದ್ಭವಿಸಿವೆ. ಪುರುಷ ಕೇವಲ ಸಾಕ್ಷಿಯಾಗಿರುತ್ತಾನೆ ಎಂಬ ಈ ತತ್ವಗಳು ದೇಹದ ನಶ್ವರತೆಗೆ ಬದಲಾಗಿ ದೇಹ ಕ್ರಿಯೆಗಳೆಲ್ಲ ದೇವನ ಪೂಜೆಯೇ. ದೇಹವನ್ನು ದೃಢಗೊಳಿಸಬೇಕು.' ಎಂದು ಹೇಳಿದವು. ಈ ಜಗತ್ತಿನ ವಿಕಾಸದಲ್ಲಿ ಪುರುಷನ (ನಾವು ದಿನನಿತ್ಯ ಬಳಸುವ ಪುರುಷ- ಮಹಿಳೆ ಎಂಬ ಅರ್ಥದಲ್ಲಲ್ಲ. ಪ್ರಕೃತಿ- ಪುರುಷ ಎಂಬ ಅರ್ಥದಲ್ಲಿ) ಗೌಣ. ಎಂದರು. ಬ್ರಹ್ಮನೇ ಎಲ್ಲವೂ. ಈವಾಸ್ತವ ಪ್ರಪಂಚವೆಂಬುದು ಭ್ರಮೆ, ಮಾಯೆ ಎಂಬ ವೇದಾಂತದ ಮೂಲ ವಿಚಾರಗಳೂ ಒಂದಕ್ಕೊಂದು ವಿರೋಧ ಎಂಬುದನ್ನು ಇಲ್ಲಿಯೇ ನೋಡಬಹುದು.

ಸಾಂಖ್ಯ ತತ್ವಗಳ ಮೇಲೆ ಶಂಕರರ ಅವರ ಅನುಯಾಯಿಗಳ ಬಿರುಸಿನ ಧಾಳಿಯ ನಂತರವೂ ಸಾಂಖ್ಯದ ಪ್ರಭಾವ ಉಳಿದೇ ಉಳಿಯಿತು ಎಂಬುದಕ್ಕೆ ಶಂಕರರ ತರುವಾಯವೂ ಮೇಲೆ ಹೆಸರಿಸಿದ ವಿವಿಧ ಧಾರ್ಮಿಕ ಪಂಥಗಳು ಹೇಗೆ ಆ ವಿಚಾರಗಳನ್ನು ವಿವಿಧ ರೂಪದಲ್ಲಿ ಅಳವಡಿಸಿಕೊಂಡವು ಎಂಬುದೇ ಸಾಕ್ಷಿ. ಹಾಗೆಯೇ ಈ ಎಲ್ಲ ಪಂಥಗಳೂ ವಿವಿಧ ಪ್ರಮಾಣದಲ್ಲಿ ಜಾತಿ ವಿರೋಧವನ್ನು ಹಾಗೆಯೇ ಲಿಂಗ ಬೇಧದ ವಿರೋಧವನ್ನು ಅಳವಡಿಸಿಕೊಂದವು. ಆದ್ದರಿಂದ ಜನ ಸಾಮಾನ್ಯರು ಈ ಪಂಥಗಳನ್ನು ಲಕ್ಷಗಟ್ಟಳೇ, ಕೋಟಿಗಟ್ಟಳೇ ಸಂಖ್ಯೆಯಲ್ಲಿ ಅನುಸರಿಸಿದರು. ಈ ಮಾತನ್ನು ಶಂಕರರು ಪ್ರತಿಪಾದಿಸಿದ ಅದ್ವೈತ ಆಥವಾ ಇತರ ವೇದಾಂತದ ವಿವಿಧ ಪಂಥಗಳ ಬಗ್ಗೆ ಹೇಳ ಬಹುದೇ ? ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಈ ಅನೇಕ ಪಂಥಗಳು ರಾಜ- ಮಹಾರಾಜರ, ಪಾಳೆಯಗಾರರು ಧಿಕ್ಕರಿಸಿದುವು ಅಥವಾ ದೂರ ಇಟ್ಟವು ಎಂಬುದು ಕೂಡ ಒಂದು ವಿಶೇಷ.

ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆ ಮತ್ತು ಮಮತ ಸರ್ಕಾರದ ತಳ್ಳಾಟಗಳು

ಇತ್ತೀಚಿನ ದಿನಗಳಲ್ಲಿ ಪಶ್ಚಿಮ ಬಂಗಾಳ ಪದೇ ಪದೇ ಸುದ್ದಿಯಲ್ಲಿದೆ. ಪತ್ರಿಕೆಯ ಸಂಚಿಕೆ 20ರಲ್ಲಿ ತೃಣಮೂಲ ಕೃಪಾಪೋಷಿತ ಶಾರದಾ ಚಿಟ್‌ಫಂಡ್ ಹಗರಣದ ಕುರಿತ ಲೇಖನಗಳನ್ನು ಓದಿದ್ದೀರಿ.

ಪ್ರಜಾಪ್ರಭುತ್ವದ ಸಂಸ್ಥೆಗಳು, ಪ್ರಜಾಪ್ರಭುತ್ವದ ಪ್ರಕ್ರಿಯೆ ಬಗೆಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತ ಬ್ಯಾನರ್ಜಿ ಮತ್ತು ಅವರ ಸರ್ಕಾರಕ್ಕೆ ಇರುವ ಆಳವಾದ ತಿರಸ್ಕಾರ, ಅಸಹನೆ ಮತ್ತು ಅದರ ಸರ್ವಾಧಿಕಾರಿ ಪ್ರವೃತ್ತಿಗಳನ್ನು ಎತ್ತಿ ತೋರಿಸುವ ವಿಷಯವನ್ನು ನೋಡಿ.

ಮಮತ ಇತ್ತೀಚೆಗೆ ರಾಜ್ಯ ಚುನಾವಣಾ ಆಯೋಗದ ಮೇಲೂ ತಿರುಗಿ ಬಿದ್ದು ಕೆಂಡ ಕಾರುತ್ತಿದ್ದಾರೆ. ರಾಜ್ಯದಲ್ಲಿ ನಡೆಯ ಬೇಕಿರುವ ಪಂಚಾಯತ್ ಚುನಾವಣೆಗಳ ಸಂಬಂಧ ಚುನಾವಣಾ ಆಯೋಗದೊಂದಿಗೆ ತಿಕ್ಕಾಟ ನಡೆಸಿದ್ದಾರೆ.

ಜುಲೈ 15 ಕ್ಕೆ ಹಾಲಿ ಇರುವ ಚುನಾಯಿತ ಪಂಚಾಯತ್‌ಗಳ ಅವಧಿ ಮುಗಿಯುತ್ತದೆ. ರಾಜ್ಯ ಚುನಾವಣಾ ಆಯೋಗ ರಾಜ್ಯದ ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ-ಸೂಕ್ಷ್ಮತೆ ಅರಿತು ಚುನಾವಣೆಗೆ ವೀಕ್ಷಕರಾಗಿ ನಿಗದಿಪಡಿಸುವ 400 ಅಧಿಕಾರಿಗಳ ಪಟ್ಟಿಯನ್ನು ಚುನಾವಣಾ ಆಯೋಗಕ್ಕೆ ಮುಂಚಿತವಾಗಿಯೇ ನೀಡಬೇಕೆಂದು ಸರ್ಕಾರವನ್ನು ಕೇಳಿತ್ತು. ಚುನಾವಣೆಯನ್ನು ನ್ಯಾಯಸಮ್ಮತ ಮತ್ತು ಶಾಂತಿಯುತವಾಗಿ ನಡೆಸಲು ಕೇಂದ್ರ ಪಡೆಯ 800 ತುಕಡಿಗಳನ್ನು ನಿಯೋಜನೆಗೊಳಿಸುವಂತೆ ಕೋರಿತ್ತು. ಅಲ್ಲದೇ ಚುನಾವಣೆಗಳನ್ನು ಮೂರು ಹಂತಗಳಲ್ಲಿ ನಡೆಸಬೇಕೆಂದು ಸೂಚಿಸಿತ್ತು.

ಆದರೆ ರಾಜ್ಯ ಸರ್ಕಾರ ಎರಡು ಹಂತಗಳ ಚುನಾವಣೆ ಸಾಕು. ಕೇಂದ್ರದ ಪಡೆಯ ಅವಶ್ಯಕತೆಯೇ ಇಲ್ಲ. ರಾಜ್ಯ ಸರ್ಕಾರವೇ ಕಾನೂನು ವ್ಯವಸ್ಥೆ ನಿಭಾಯಿಸುತ್ತದೆ. ಚುನಾವಣೆಗೆ ನಿಯೋಜಿಸಲಾಗುವ ಅಧಿಕಾರಿಗಳ ಪಟ್ಟಿಯನ್ನು ಮುಂಚೆಯೇ ನೀಡಲು ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಅದು ಪ್ರಾಯೋಗಿಕ ಅಲ್ಲ ಎಂದು ಹೇಳಿತು. ಏಪ್ರಿಲ್ 26 ಮತ್ತು 30 ರಂದು ಎರಡು ಹಂತಗಳ ಚುನಾವಣೆ ಎಂಬ ಏಕಪಕ್ಷೀಯ ತೀರ್ಮಾನವನ್ನೇ ಘೋಷಿಸಿತು. ತನ್ನ ಮೂಗಿನ ನೇರಕ್ಕೆ ಚುನಾವಣೆ ನಡೆಯಬೇಕು. ಇದಾಗುವ ಹೊತ್ತಿಗಾಗಲೇ ರಾಜ್ಯದಲ್ಲಿ ಕುದಿಯುತ್ತಿದ್ದ ಹಗರಣಗಳ ಬಿಸಿ ಸರ್ಕಾರವನ್ನು ತಟ್ಟಿತ್ತು. ಹಗರಣಗಳ 'ಸ್ಫೋಟ' ಆಗುವ ಮೊದಲೇ ಚುನಾವಣೆ ನಡೆದು ಹೋಗಲಿ. ಇಲ್ಲವಾದರೆ ನಡೆಯುವುದೇ ಬೇಡ. ಅನಿಶ್ಚಿತವಾಗಿ



ಮುಂದಕ್ಕೆ ಹೋಗಲಿ. ಮುಂದಿನ ಲೋಕಸಭಾ ಚುನಾವಣೆಯವರೆಗಾದರೂ ಅದು ನಡೆಯದೇ ಇರಲಿ. ಬಹುಶ: ಇದು ಸರ್ಕಾರದ ಲೆಕ್ಕಾಚಾರವಾಗಿತ್ತು!!

ರಾಜ್ಯ ಸರ್ಕಾರದ ಏಕಪಕ್ಷೀಯ ತೀರ್ಮಾನದ ವಿರುದ್ಧ ಚುನಾವಣಾ ಆಯೋಗ ರಾಜ್ಯ ಉಚ್ಛ ನ್ಯಾಯಾಲಯಕ್ಕೆ ಮೊರೆಹೋಯಿತು. ಅಲ್ಲಿಯ ಏಕ ಸದಸ್ಯ ಪೀಠ ಆಯೋಗದ ವಾದವನ್ನು ಎತ್ತಿ ಹಿಡಿಯಿತು. ಈ ತೀರ್ಪಿನಿಂದ ತೃಪ್ತಿಗೊಳ್ಳದ ಸರ್ಕಾರ ಮತ್ತೆ ದ್ವಿಸದಸ್ಯ ಪೀಠಕ್ಕೆ ಮನವಿ ಮಾಡಿತು. ಈ ಪ್ರಕರಣವನ್ನು ಕೈಗೆತ್ತಿಕೊಂಡು ತೀರ್ಪು ನೀಡಿದ ದ್ವಿಸದಸ್ಯ ಪೀಠವು ಏಕ ಸದಸ್ಯ ಪೀಠದ ತೀರ್ಪಿನ ಬಹುತೇಕ ಎಲ್ಲ ಅಂಶಗಳನ್ನು ಎತ್ತಿಹಿಡಿಯಿತು. ನೆರೆ ಹೊರೆಯ ರಾಜ್ಯಗಳಿಂದ ಪೋಲಿಸ್ ಪಡೆಯನ್ನು ಹಾಗೂ ಕೇಂದ್ರದ ಪಡೆಯನ್ನು ಅಗತ್ಯಕ್ಕೆ ತಕ್ಕಂತೆ ಪಡೆದುಕೊಳ್ಳಬಹುದೆಂದು ಅದು ಸೂಚಿಸಿತು.

ಸರ್ಕಾರ ಪಂಚಾಯತ್ ಚುನಾವಣೆ ವಿಷಯದಲ್ಲಿ ಸುಪ್ರಿಂ ಕೋರ್ಟಿನ ಮೆಟ್ಟಿಲು ಹತ್ತುವ ಮಾತನ್ನೂ ಆಡಿತ್ತು. ಪಂಚಾಯತ್ ಮಂತ್ರಿ ಸುಬ್ರತೋ ಮುಖರ್ಜಿಯವರಂತೂ ಈ ವಿಷಯದಲ್ಲಿ ಮಾತನಾಡುತ್ತಾ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಈ ಸ್ಥಳೀಯ ಸಂಸ್ಥೆಗಳ ಅವಧಿ ಮುಗಿದ ಮೇಲೆ ಅಲ್ಲಿನ ಸರ್ಕಾರಗಳು ಆ ಸಂಸ್ಥೆಗಳಿಗೆ ಆಡಳಿತಾಧಿಕಾರಿಯನ್ನು ನೇಮಿಸಿವೆ. ಮತ್ತು ಆ ಸಂಸ್ಥೆಗಳು ಚೆನ್ನಾಗಿಯೇ ನಡೆಯುತ್ತಿವೆ. ಹೀಗಾಗಿ ರಾಜ್ಯದಲ್ಲಿಯೂ ಹಾಗೆಯೇ ಸರ್ಕಾರದಿಂದ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗುವುದು ಎಂದು ಹೇಳಿದ್ದರು.

ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆಯನ್ನೇ ಬುಡಮೇಲು ಮಾಡುವ, ಅಪಹಾಸ್ಯ ಮಾಡುವ ತೃಣಮೂಲ ಕಾಂಗ್ರೆಸ್‌ನ ಸಚಿವರ ಹೇಳಿಕೆ ಅವರ ಪಕ್ಷದ ರಾಜಕೀಯ-ಸೈದ್ಧಾಂತಿಕ ದಿವಾಳಿತನವನ್ನು ತೋರಿಸಿಕೊಟ್ಟಿತು.

ಶಾರದಾ ಚಿಟ್ ಫಂಡ್ ಹಗರಣದ ಕಳಂಕ ತೃಣಮೂಲ ಕಾಂಗ್ರೆಸ್‌ನ ಮುಖಕ್ಕೆ ಮೆತ್ತಿಕೊಂಡಿದೆ. ಈ ಪ್ರಕರಣದಲ್ಲಿ ಇಲ್ಲಿಯವರೆಗೆ ಏಜೆಂಟರು ಹಾಗೂ ಹಣ ಕಳೆದುಕೊಂಡ ಹೂಡಿಕೆದಾರರು ಸು. 13 ಜನರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಶಾರದಾ ಕಂಪನಿಯ ಪ್ರಮುಖರೊಬ್ಬರ ಕೊಲೆಯಾಗಿದೆ. ಇಷ್ಟು ಪ್ರಕ್ಷುಬ್ದತೆ ಇರುವ ಹೊತ್ತಿನಲ್ಲಿ ಪಂಚಾಯತ್ ಚುನಾವಣೆ ನಡೆದರೆ ಹಿನ್ನಡೆಯಾಗಬಹುದು ಎಂಬ ಆತಂಕದಿಂದ ತೃಣಮೂಲ ಮುಖಂಡರು ಮೊದಲಿಗೆ ಚುನಾವಣೆಗಳನ್ನು ಮುಂದೂಡಲು ಪ್ರಯತ್ನಿಸಿದರಂತೆ. ಆಮೇಲೆ ಶಾರದಾ ಚಿಟ್ ಫಂಡ್ ಪ್ರಕರಣ ಈಗಲೇ ಮುಗಿಯುವ ಹಗರಣವಲ್ಲ, ಅದು ದಿನದಿಂದ ದಿನಕ್ಕೆ ಕಾವು ಪಡೆದುಕೊಳ್ಳುತ್ತ ಜಿಕ್ಕಟ್ಟು ತೀವ್ರಗೊಳ್ಳುತ್ತಾ ಹೋಗುತ್ತಿರುವ ಒಂದು ಭೀಕರ ಹಗರಣ ಅಂತ ಮನದಟ್ಟಾದ ಮೇಲೆ ಈಗ ಪಂಚಾಯತ್ ಚುನಾವಣೆ ಸಾಧ್ಯವಾದಷ್ಟು ಬೇಗ ಮುಗಿಯಲಿ ಎಂಬ ನಿಲುವಿಗೆ ಬಂದರಂತೆ.

ಏನಾದರೂ ಇರಲಿ ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಗಳು ನಿಗದಿಯಾಗಿವೆ. ಅವು ಬಹುತೇಕ ಜುಲೈ 2. 6, ಹಾಗೂ 9 ರಂದು ಮೂರು ಹಂತಗಳಲ್ಲಿ ನಡೆಯಲಿವೆ. ದೇಶದಲ್ಲಿ ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣದ ಕನಸಿಗೆ-ಸದೃಢ ಪಂಚಾಯತ್ ವ್ಯವಸ್ಥೆಗೆ ಪ್ರಯೋಗಿಕವಾದ ಒಂದು ಒಳ್ಳೆಯ ಮಾದರಿಯನ್ನು ಕೊಟ್ಟ ಕೀರ್ತಿ ಪಶ್ಚಿಮ ಬಂಗಾಳದ್ದು ಮತ್ತು ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ್ದು. ಈ ಅಂಶವನ್ನು ಎಷ್ಟೋ ಕಮ್ಯೂನಿಸ್ಟ್ ವಿರೋಧಿಗಳೂ ಗುರುತಿಸುತ್ತಾರೆ. ಒಪ್ಪುತ್ತಾರೆ. ಇಂತಹ ಹಿರಿಮೆಯ ಪಶ್ಚಿಮ ಬಂಗಾಳ ರಾಜ್ಯದಲ್ಲೇ ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆಯ ಕುತ್ತಿಗೆ ಹಿಸುಕುವ ಪ್ರಯತ್ನ ನಡೆದಿದ್ದು ಮಾತ್ರ ದುರಂತವೇ ಸರಿ. ಪಶ್ಚಿಮ ಬಂಗಾಳದ ಪ್ರಜ್ಞಾವಂತ ಜನತೆ ಇದನ್ನು ಒಪ್ಪುತ್ತಾರೆಯೇ ? ಕಾದು ನೋಡೋಣ. ●

'ಗಂಭೀರ ಆಪಾದನೆ'

ಕ್ಯಾತೆ

ಮಮತಾ ದೀದಿ ಟಿವಿ ವಾಹಿನಿಯೊಂದರ ಜತೆಗಿನ ಒಂದು ದೀರ್ಘ ಸಂದರ್ಶನವನ್ನು ಅವರ ಮಾಧ್ಯಮ ಸಲಹೆಗಾರ ತಡೆಹಿಡಿದಿದ್ದಾರಂತೆ. ಈಗಾಗಲೇ ಇದ್ದ 'ನೆ(ನ)ಗೆಟಿವ್ ಪಬ್ಲಿಸಿಟಿ' ಸಾಕು ಅಂತ. ನಮ್ಮ ವರದಿಗಾರನಿಗೆ ಅದರ 'ಲೀಕ್' ಸಿಕ್ಕಿದೆ. ಸಂದರ್ಶನದ ಅತ್ಯಂತ ಗಂಭೀರ ಭಾಗ ಓದಿ:

ಸಂದರ್ಶಕ : ದೀದಿ, ಐಪಿಎಲ್ ಮ್ಯಾಚ್ ಫಿಕ್ಸಿಂಗಿನ ಬಗ್ಗೆ ಏನು ಹೇಳುತ್ತೀರಿ ?

ಮಮತಾ : ಈ ಬಾರಿ ಐಪಿಎಲ್ ಬಹಳ ಮೋಸ. ನಮ್ಮ ಕೊಲ್ಕತ್ತಾದ ಕೆಕೆಆರ್ ಟೀಮಿನ ಅವಸ್ಥೆ ನೋಡಿ.

ಸಂ : ಅಂದರೆ ಕೆಕೆಆರ್ ಟೀಮು ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು ಸೋತಿದ್ದಾರೆ ಅಂತೀರಾ ?

ಮ : ಛೆ! ಛೆ! ಖಂಡಿತಾ ಅಲ್ಲ.

ಸಂ : ಕಳೆದ ಬಾರಿ ಚಾಂಪಿಯನ್ ಆಗಿದ್ದವರು. ಈ ಬಾರಿಯ ಕಳಪೆ ಪ್ರದರ್ಶನಕ್ಕೆ ಏನಾದರೂ ಕಾರಣ ಇರಲೇಬೇಕಲ್ಲ.

ಮ : ಕಳೆದ ವರ್ಷ ತೃಣಮೂಲದ 'ಪೋರಿಬೋರ್ತನ್'ದ ಅಲೆಯಲ್ಲಿ ಗೆದ್ದಿದ್ದರು.

ಸಂ : ಈ ವರ್ಷ ಇನ್ನೊಂದು 'ಪೋರಿಬೋರ್ತನ' ಇರಲಿ ಅಂತ ಸೋತಿದ್ದಾರಾ?

ಮ : ಅಲ್ಲ. ಅದರ ಬಗ್ಗೆ ತನಿಖೆ ನಡೆಸಿದ್ದೇವೆ. ನಮಗೆ ಸೋಲಿನ ಬಗ್ಗೆ ಗಂಭೀರವಾದ ಕ್ಲೂ ಸಿಕ್ಕಿದೆ.

ಸಂ : ಏನದು ?

ಮ : ಕೆಕೆಆರ್ ಕ್ಯಾಪ್ಟನ್ ಗಂಭೀರ್ ಇದ್ದಾನಲ್ಲ. ಅವನು ಸಿಪಿಎಂ ಏಜೆಂಟಾಗಿ ಬಿಟ್ಟಿದ್ದಾನೆ. ಇದೆಲ್ಲಾ ತೃಣಮೂಲದ 'ಪೋರಿಬೋರ್ತನ್'ಗೆ ಕೆಟ್ಟ ಹೆಸರು ತರಲು ಸಿಪಿಎಂ ಪಿತೂರಿ.

ಸಂ : ಆಂ...

– ನಕ್ಷತ್ರಿಕ

ಬೆಳ್ತಂಗಡಿ ....

ಪುಟ 7 ರಿಂದ

ಪಲಶ್ರಮ, ಅಂಗನವಾಡಿ, ಬಿಸಿಯೂಟ, ಸ್ತ್ರೀ ಶಕ್ತಿ ಸಮಾವೇಶ ನಡೆಸಿ ಸೂಕ್ತ ಮಾರ್ಗದರ್ಶನ ನೀಡಿ ಮತ ನೀಡಲು ಮನವಿ ಮಾಡಿದ ವರಲಕ್ಷ್ಮಿ, ಸುನಂದರ ಕೆಲಸಗಳು, ಕಟ್ಟಡ ಕಾರ್ಮಿಕರ ಸಮಾವೇಶದಲ್ಲಿ ಮಹಾಂತೇಶರ ಮಾರ್ಗದರ್ಶನ. ಪ್ರತಿ ಗ್ರಾಮದಲ್ಲೂ ಸಭೆ, 81 ಗ್ರಾಮದಲ್ಲೂ ಸಂಪರ್ಕ ಇವು ಸಾಕಷ್ಟು ಸಹಕಾರಿಯಾದವು. ಕಾಂಗ್ರೆಸ್ ಬಿಜೆಪಿಗಳು ಮಾಡಿದ ಖರ್ಚು ತಲಾ 10 ಕೋಟಿಯಷ್ಟು. ಸಿಪಿಐ(ಎಂ) ಖರ್ಚು 6 ಲಕ್ಷ.

'ಸಂಗಾತಿ ಗುಂಪು'ಗಳೇ ಸಿಪಿಐ(ಎಂ) ಅಸ್ತಿತ್ವ. ಸಿಪಿಐ(ಎಂ) ಶಾಖೆಗಳು ಇಲ್ಲದಲ್ಲಿ ಈ ಸಂಗಾತಿ ಗುಂಪುಗಳು ಆಧಾರವಾಗಿ ಸಂಪರ್ಕದ ಕೊಂಡಿಯಾದವು. ಸಭೆ ನಡೆಸಲು ಇವರೇ ಆಧಾರ. ಇವರೆಲ್ಲರ ಮತ ಪಡೆಯಲು ಇವರ ಮೂಲಕ ಇತರರ ಮತ ಪಡೆಯಲು ಹಲವೆಡೆ ಸ್ವಲ್ಪ ಕಷ್ಟವಾಯಿತು. ಯಾಕೆಂದರೆ ಇವರೆಲ್ಲಾ ಮಹಿಳೆಯರೇ ಆಗಿದ್ದು, ಮನೆಯ ಒಟ್ಟು ತೀರ್ಮಾನದ ಪ್ರಶ್ನೆಯಲ್ಲಿ ಇವರ ಪಾತ್ರ ನಿರ್ಣಾಯಕ ಇರಲಿಲ್ಲ. ಪ್ರತಿ ಗ್ರಾಮದಲ್ಲೂ ಸಭೆ ನಡೆಸುವಾಗ 10 ಜನರಾದರೂ ಸೇರುತ್ತಿದ್ದರು. ಕೆಲವು ಗ್ರಾಮಗಳಲ್ಲಿ 25, 30 ಜನ, ಇನ್ನು ಕೆಲವು ಗ್ರಾಮಗಳಲ್ಲಿ 50, 100 ಜನ, ಪಟ್ರಮೆಯಂತಹ ಗ್ರಾಮಗಳಲ್ಲಿ 150, ಜನ ಸೇರುತ್ತಿದ್ದರು.

ಮಾರ್ಚ್ 20 ರಿಂದ ಎಪ್ರಿಲ್ 15 ರ ತನಕದ ಒಂದು ಸುತ್ತಿನ ತಿರುಗಾಟದಲ್ಲಿ ಸಿಕ್ಕಿದ ಜನ ಬೆಂಬಲ ಕೊನೆ ಕ್ಷಣದಲ್ಲಿ ಇಲ್ಲವಾಯಿತಾದರೂ ಜನರ ಭಾವನೆಗಳು, ನಾವು ಗೆಲ್ಲಬೇಕೆಂಬ ಆಶಯಗಳು ಹಾಗೂ 3 ನೇ ಸ್ಥಾನ ದೊರೆತದ್ದು ಸ್ಫೂರ್ತಿ ಸಿಕ್ಕಿದೆ. ಸಿಪಿಐ(ಎಂ) ಈ ಬಾರಿ ಗೆಲ್ಲುತ್ತದೆ ಎಂದೇ ಜನ ಹೇಳಿಕೊಳ್ಳುವ ವಾತಾವರಣ ತಯಾರಾಗಿತ್ತು.

ಸೌಜನ್ಯಳ ಕೊಲೆ ವಿಚಾರದಲ್ಲಿ ಕೆಲವು ಜನ ಪ್ರತಿನಿಧಿಗಳು ಸೇರಿ 'ಧರ್ಮಸ್ಥಳ'ದ ಬಗ್ಗೆ ವಿನಾ ಕಾರಣ ಆರೋಪ ಬರುತ್ತಿದೆ ಎಂದು 'ತಾಲೂಕು ಹಿತ ರಕ್ಷಣಾ ವೇದಿಕೆ' ರಚಿಸಿದರು. ಈ ವೇದಿಕೆಯ ಸಮಿತಿಯಲ್ಲಿ ವಸಂತ ಬಂಗೇರ, ರಂಜನ್ ಗೌಡ ಮೊದಲಾದವರ ಹೆಸರಿನ ಜೊತೆ ಬಿ.ಎಂ.ಭಟ್ ಅವರ ಹೆಸರೂ ಸೇರಿಸಲಾಗಿತ್ತು. 'ಆ ವೇದಿಕೆಯಲ್ಲಿ ತಾನಿಲ್ಲವೆಂದೂ ತನ್ನಲ್ಲಿ ಕೇಳದೆ ಹೆಸರು ಸೇರಿಸಲಾಗಿದೆ' ಎಂದೂ ಬಿ.ಎಂ.ಭಟ್ ಪತ್ರಿಕೆಗೆ ತಿಳಿಸಿದರು. ಮಾತ್ರವಲ್ಲ ಸಿಪಿಐ(ಎಂ) ಸೌಜನ್ಯಳ ಕೊಲೆ ತನಿಖೆಯನ್ನು ಸಿಬಿಐಗೆ ಒಪ್ಪಿಸಲು ಹೋರಾಡುತ್ತದೆ ಎಂದರು.

ಇನ್ನೊಂದು ಕಡೆ ಪ್ರಚಾರಕ್ಕೆ ಹೋದಾಗ ಜನರು ಕೆಟ್ಟ ಭಾಷೆಯಲ್ಲಿ ಬೈದರು. ನಂತರ ನಾವು ಕಮ್ಯುನಿಸ್ಟರು ಎಂದು ತಿಳಿದು ಕ್ಷಮೆ ಕೇಳಿದರು. ನಾವು ಕಾಂಗ್ರೆಸ್, ಬಿಜೆಪಿಗಳೆಂದು ಬೈದೆವು. ಈ ಬಾರಿ ನೀವು ಗೆಲ್ಲಬೇಕು. ನಾವೆಲ್ಲ ನಿಮಗೆ ಮತ ನೀಡಲು ಸಿದ್ದರಿದ್ದೇವೆ ಎಂದು.

ಜನಸ್ಪಂದನೆ

ಕೆಲವು ಪ್ರದೇಶದಲ್ಲಿ 'ಸಿಪಿಐ(ಎಂ) ಈ ತನಕ ನಿಲ್ಲದಿರುವುದೇ ತಪ್ಪು. ನಮಗೆ ಸಿಪಿಐ(ಎಂ) ಪಕ್ಷವೇ ಬೆಳ್ತಂಗಡಿಯಲ್ಲಿ ಗೆಲ್ಲಬೇಕು' ಎಂದು ಹೇಳುತ್ತಿದ್ದರು. ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್‌ಗೆ ಅಭ್ಯರ್ಥಿಗಳ ಆಯ್ಕೆ ಬೇಗ ಆಗದಿದ್ದುದು ಹಾಗೂ ಕಾಂಗ್ರೆಸ್, ಬಿಜೆಪಿ ಮೇಲೆ ಜನರಿಗಾದ ಭ್ರಮನಿರಸನ, ಸಿಪಿಐ(ಎಂ) ಅಭ್ಯರ್ಥಿ ಜನಪರ ಹೋರಾಟಗಾರರಾಗಿದ್ದುದ್ದು ಎಲ್ಲ ಸೇರಿ ಒಳ್ಳೆಯ ಗಾಳಿ ಬೀಸತೊಡಗಿತ್ತು. ಆದರೆ ಈ ಎಲ್ಲಾ ಜನಾಭಿಪ್ರಾಯ ಪ್ರಚಾರದ ಕೊನೆ ಹಂತಕ್ಕೆ ಬರುವಾಗ ಪರಿಸ್ಥಿತಿ ಬದಲಾಯ್ತು. ಕಾಂಗ್ರೆಸ್ ಮತ್ತು ಬಿಜೆಪಿಗಳ ಜಾತಿ ರಾಜಕೀಯ ಹಾಗೂ ಅದೇ ರೀತಿ ಹಣ, ಮದ್ಯದ ಹಂಚಿಕೆ ಕೂಡಾ ಕೊನೇ ಗಳಿಗೆಯಲ್ಲಿ ಸಿಪಿಐ(ಎಂ)ನ ಮತ ಇಳಿಕೆಯಾಗಲು ಕಾರಣವಾಗಿತ್ತು. ಜನರಿಗೆ ಸಿಪಿಐ(ಎಂ) ಮೇಲೆ ಅಭಿಮಾನ ಇದೆ. ಅಭಿಮಾನ ಮತವಾಗಿ ಪರಿವರ್ತನೆಯಾಗುವಂತಹ ರಾಜಕೀಯ ಸಂಘಟನಾತ್ಮಕ ಬಲವನ್ನು ಪಕ್ಷ ಮುಂದೆ ಪಡೆದುಕೊಳ್ಳಬೇಕಿದೆ.



ಪ್ರಜಾಸತ್ತಾತ್ಮಕ –ಸಂಘಟಿತ ವಿಧಾನ

ಮಾರ್ಚ್ 15, 2013ರ ಒಳಗೆ 81 ಗ್ರಾಮಗಳ ಪೈಕಿ 60 ಗ್ರಾಮಗಳಲ್ಲಿ ಸಮಿತಿಗಳು, 81 ಗ್ರಾಮಕ್ಕೂ ಸಂಪರ್ಕ ಮಾಡಿ ಚುನಾವಣಾ ಪ್ರಚಾರ ಪ್ರಾರಂಭಿಸಲಾಗಿತ್ತು. ಈ ಬಾರಿ ಸಿಪಿಐ(ಎಂ)ಗೆ ನಮ್ಮ ಮತ ಎಂಬ ಮಾತುಗಳು 81 ಗ್ರಾಮಗಳಲ್ಲೂ ಬರತೊಡಗಿದವು. ಜನರ ಸಮಸ್ಯೆಗಳು ಹಾಗೂ ನೀತಿಗಳ ಆಧಾರದಲ್ಲಿ ಸಿಪಿಐ(ಎಂ) ಮಾಡಿದಷ್ಟು ಪ್ರಚಾರ ಉಳಿದ ಯಾವ ಪಕ್ಷವೂ ಕೂಡಾ ಮಾಡಿಲ್ಲ. ಕೆಲವರಂತೂ ಸಿಪಿಐ(ಎಂ) ಈ ಬಾರಿ ಕನಿಷ್ಠ 25,000 ಕ್ಕಿಂತ ಹೆಚ್ಚು ಮತ ಪಡೆಯುತ್ತದೆ ಬೆಟ್ ಕಟ್ಟಿದ್ದರಂತೆ. ದೊರಕಿದ್ದು 4,532 ಮತಗಳು. ಆದರೂ 3ನೇ ಸ್ಥಾನ ಸಿಕ್ಕಿತು. ಹಣ, ಹೆಂಡದ ಆಮಿಷಗಳು ಸಿಪಿಐ(ಎಂ) ವಿರುದ್ಧ ಕೆಲಸ ಮಾಡಿವೆ.

ಕಳೆಂಜ ಗ್ರಾಮದಲ್ಲಿ 1, ಪಟ್ರಮೆ ಗ್ರಾಮದಲ್ಲಿ 2 ಪಂಚಾಯ್ತು ಸದಸ್ಯರುಗಳಿರುತ್ತಾರೆ. ಪಟ್ರಮೆ ಗ್ರಾಮವು ಅಭ್ಯರ್ಥಿಯ ಊರು ಆಗಿದ್ದು, ಸ್ಥಳೀಯ ಶ್ಯಾಮರಾಜರ ಕೆಲಸಗಳಿಂದ ಊರಿಗೆ ಊರೇ ಒಂದಾಗಿ ಸಿಪಿಐ(ಎಂ) ಬೆಂಬಲಕ್ಕೆ ನಿಂತಿತು. ಕಾಂಗ್ರೆಸ್, ಬಿಜೆಪಿಗಳಿಗೆ ಮತವಿದ್ದರೂ ಕೆಲಸ ಮಾಡುವವರಾಗಲಿ ಸಭೆ ನಡೆಸುವವರಾಗಲಿ ಇಲ್ಲದಂತಾಗಿತ್ತು. ಹೆಚ್ಚಿನ ಎಲ್ಲ ಮನೆಯವರೂ ಜಾತಿ, ಮತ, ಕೂಲಿ, ರೈತ, ಕೃಷಿಕ, ಎಂಬ ಬೇಧವಿಲ್ಲದೆ ಎಲ್ಲರೂ ಒಂದಾಗಿ ಸಿಪಿಐ(ಎಂ) ಪರ ಕೆಲಸ ಮಾಡಲು ಸಿದ್ದರಿರುವವರೇ ಆಗಿದ್ದರು. ಕೂಲಿ ಕೆಲಸವನ್ನೇ ಮಾಡಿ ಬದುಕಬೇಕಾದ ದಲಿತರೂ ಕೂಡಾ ನಿಸ್ವಾರ್ಥದಿಂದ ದುಡಿದರು. ಸುಮಾರು 50ಕ್ಕೂ ಮಿಕ್ಕಿ ಕಾರ್ಯಕರ್ತರು ಒಂದು ತಿಂಗಳ ಕಾಲ ಗ್ರಾಮದ ಹೊರಗೂ ತಮಗೆ ಪರಿಚಯವಿದ್ದ ಕಡೆ ಹೋಗಿ ಪ್ರಚಾರ ಕೆಲಸ ಮಾಡಿದರು. ಒಂದು ತಿಂಗಳು ಈ ಎಲ್ಲ ಜನರು ಮನೆ ಕೆಲಸ ಮಾಡದೆ ಪಕ್ಷದ ಕೆಲಸದಲ್ಲೇ ಮುಳುಗಿದ್ದರೂ, ಮನೆಗೆ ಬರುವಾಗ ಇವರಿಗೆ ಮನೆಯಲ್ಲಿ ಪ್ರೀತಿಯ ಸ್ವಾಗತವೇ ಸಿಗುತ್ತಿತ್ತಂತೆ. ಅಂದರೆ ಕುಟುಂಬಗಳೇ ಪಕ್ಷದ ಕೆಲಸಕ್ಕೆ ತಯಾರಾಗಿದ್ದವು.

2 ಬೂತ್ ಸಮಿತಿಗಳನ್ನು 4 ಆತಂ-ರಿಕ ಸಮಾವೇಶಗಳನ್ನು ಸುಮಾರು 100 ಕ್ಕೂ ಮಿಕ್ಕಿ ಜನ ಸೇರಿಸಿ ನಡೆಸಲು ಹಾಗೂ ಒಂದು ಸಾರ್ವಜನಿಕ ಸಭೆಯನ್ನು ನಡೆಸಲು ಸಾಧ್ಯವಾಗಿದೆ. 46% ಮತ ಪಡೆಯುವಲ್ಲಿ ಯಶಸ್ವಿಯಾದ ಗ್ರಾಮ ಇದಾಗಿದೆ. ಇದೇ ರೀತಿಯ ಕೆಲಸಗಳು ಇನ್ನೂ ಕೆಲವು ಗ್ರಾಮಗಳಲ್ಲಿ ನಡೆದಿತ್ತು. ಕಾಂಗ್ರೆಸ್ ಬಿಜೆಪಿ ಪಕ್ಷಗಳಿಗೆ ಮತ ಹಾಕುವವರು ಇದ್ದರೂ ದುಡಿಯಲು ಜನವಿರಲಿಲ್ಲ. ಬೇರೆ ಊರಿಂದ ಬಂದ ಜನಗಳಿಗೆ ಇಲ್ಲಿಯ ಜನ ನಾವೆಲ್ಲ ಬಿ.ಎಂ.ಭಟ್ ಅವರ ಜೊತೆ ಇರುವವರು ಎಂದು ಹೇಳುತ್ತಿದ್ದರು. ಕಾಂಗ್ರೆಸ್ ನವರು ಹೊರಗಿನಿಂದ ಜನ ತಂದು ಪ್ರಚಾರ ಮಾಡುತ್ತಾ ಹಣ ಹಂಚುತ್ತಿದ್ದಾಗ ಆ ಹಣ ಕೂಡಾ ನಮಗೆ ಬೇಡ ನಾವು ಹೇಗಿದ್ದರೂ ಬಿ.ಎಂ.ಭಟ್ ಅವರಿಗೆ ಮತ ನೀಡುವವರು ಎಂದು ಬಹಿರಂಗವಾಗಿ ಹೇಳುತ್ತಿದ್ದರು.

ಚುನಾವಣಾ ಸಮಿತಿ

ಏಪ್ರಿಲ್ 25 ರಂದು ರಾಜಕೀಯ ಸಮಾವೇಶ ನಡೆಸಿ ತಾಲೂಕು ಚುನಾವಣಾ ಸಮಿತಿ ರಚಿಸಲಾಯಿತು. ಗೌರವ ಅಧ್ಯಕ್ಷರಾಗಿ ವೇಣೂರಿನ ದೇಜಪ್ಪ ಪೂಜಾರಿ, ಅಧ್ಯಕ್ಷರಾಗಿ ಲಕ್ಷ್ಮಣ ಗೌಡ ಪಾಂಗಳ, ಕಾರ್ಯದರ್ಶಿಯಾಗಿ ಶಿವಕುಮಾರ್, ಕೋಶಾಧಿಕಾರಿಯಾಗಿ ಹರಿದಾಸ್, ಆಯ್ಕೆ ಆಗಿ 100 ಜನರ ಸಮಿತಿ ರಚಿಸಲಾಯಿತು. ಈ ಸಮಿತಿ ನೇತೃತ್ವದಲ್ಲಿ ಚುನಾವಣಾ ಪ್ರಚಾರವನ್ನು ಮುನ್ನಡೆಸಲಾಯಿತು. ಏಪ್ರಿಲ್ 15 ರಂದು ಸು. 1500 ಜನರ ರ್‍ಯಾಲಿ ನಡೆಸಿ ಬಹಿರಂಗ ಸಭೆ ನಡೆಸಲಾಗಿತ್ತು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ, ಎಸ್ ವರಲಕ್ಷ್ಮೀ, ಮುನೀರ್ ಕಾಟಿಪಳ್ಳ, ಅಭ್ಯರ್ಥಿ ಬಿ.ಎಂ.ಭಟ್ ಭಾಷಣ ಮಾಡಿದರೆ, ಲಕ್ಷ್ಮಣ ಗೌಡ ಅಧ್ಯಕ್ಷತೆ ವಹಿಸಿದ್ದರು. ಶಿವಕುಮಾರ್ ಸ್ವಾಗತಿಸಿ ವಸಂತ ವಂದಿಸಿದರು. 81 ಗ್ರಾಮಗಳಿಗೂ ಎರಡೆರಡು ಬಾರಿ ಸಭೆಗಳಿಗೆ ಹಾಗೂ 3ನೇ ಬಾರಿ ಸಾರ್ವಜನಿಕ ಸಭೆಗೆ ಅಭ್ಯರ್ಥಿ ಭೇಟಿ ನೀಡಿದ್ದರು.

ಭಾಷಣಕಾರರಾಗಿ ಮಂಜೇಶ್ವರದ ಜಯಾನಂದ, ಹಾಸನದ ನವೀನ್, ಬೆಂಗಳೂರಿನ ಸುನಂದ, ಮತ್ತು ಮಹಂತೇಶ್, ಮಂಗಳೂರಿನ ಮುನೀರ್ ಕಾಟಿಪಳ್ಳ, ಶಿವಕುಮಾರ್, ಹರಿದಾಸ್, ಮೂಡಬಿದ್ರೆಯ ರಮಣಿ, ಬೇರೆ ಬೇರೆ ಸಭೆಗಳಿಗೆ ಭಾಗವಹಿಸುತ್ತಿದ್ದರು. ಕೆಲವು ಸಭೆಗಳಲ್ಲಿ ಕಾಸರಗೋಡು ಎಂ.ಪಿ. ಕರುಣಾಕರ್, ಪಾಲಗ್ಹಾಟ್ ಎಂ.ಪಿ ಎಂ.ಬಿ ರಾಜೇಶ್, ರಾಜ್ಯ ಮುಖಂಡರಾದ ವಿಜೆಕೆನಾಯರ್, ಕಾಸರಗೋಡು ಎಸ್‌ಎಫ್ಐ ಕಾರ್ಯದರ್ಶಿ ಸಾಲು ಮ್ಯಾಥ್ಯು ಸಹಕರಿಸಿದ್ದರು. ಮಂಜೇಶ್ವರದ ಶ್ಯಾಂಭಟ್ ಆಗಮಿಸಿ ಕೆಲವಾರು ಮನೆಗಳಿಗೆ ಭೇಟಿ ನೀಡಿದ್ದರು.

ನಾಗರಿಕಾ ಸೇವಾ ಟ್ರಸ್ಟ್‌ನ ಮುಖಾಮುಖಿ ಕಾರ್ಯಕ್ರಮದಲ್ಲಿ ಸಿಪಿಐ(ಎಂ),ಕಾಂಗ್ರೆಸ್ ಅಭ್ಯರ್ಥಿಗಳು ಹಾಗೂ ಬಿಜೆಪಿ ಅಭ್ಯರ್ಥಿ ಪರವಾಗಿ ಪ್ರಭಾಕರ ಉಪ್ಪಡ್ಕ ಭಾಗವಹಿಸಿ ಮಾತಾಡಿದರು. ಸಿಪಿಐ(ಎಂ) ಅಭ್ಯರ್ಥಿ ಮಾತ್ರ ಸರಿಯಾಗಿ ಮಾತಾಡಿದ್ದು, ಎಂದೂ ಉಳಿದವರು ಜನರ ಪ್ರಶ್ನೆಗೆ ಉತ್ತರ ಕೊಡಲು ತಡವರಿಸಿದರೆಂದೂ ಪತ್ರಿಕೆಗಳಲ್ಲಿಯೇ ವರದಿ ಆಗಿತ್ತು.

ಪ್ರಚಾರದ ವಿಚಾರ– ರಾಜ್ಯ–ರಾಷ್ಟ್ರ ರಾಜ–ಕಾರಣದ ವಿಷಯಗಳು ಹಾಗೂ ಮೇಲೆ ಪ್ರಸ್ತಾಪಿತವಾದ ವಿಷಯಗಳಲ್ಲದೇ ಸಾಗುವಳಿ ಮಾಡಲಾದ ಅರಣ್ಯ ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸುವಿಕೆ, ತಾಲ್ಲೂಕು ಕಚೇರಿ ಮುಂತಾದೆಡೆ ಲಂಚಾವತಾರ, ಆದಿವಾಸಿಗಳನ್ನು ಒಕ್ಕಲೆಬಿಸುವ ಹವಣಿಕೆ ಮತ್ತು ಅವರು ವಾಸಿಸುವ ಪ್ರದೇಶಗಳು ಮೂಲಭೂತ ಸೌಲಭ್ಯಗಳಿಂದ ವಂಚನೆಗೊಳಗಾಗಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯ ಕೊರತೆ, ಕುಡಿಯುವ ನೀರು ಮತ್ತು ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ರೇಶನ್ ಹಾಗೂ ಕಾರ್ಡಿನ ಸಮಸ್ಯೆ ವಿಚಾರ ಮೊದಲಾದವುಗಳಾಗಿದ್ದವು.


ಬೆಳವಣಿಗೆಯ ಹಾದಿಯಲ್ಲಿ

ಗ್ರಾಮ ಪಂಚಾಯತು,ನಗರ ಪಂಚಾಯತು ಚುನಾವಣೆಗಳಲ್ಲಿ, ತಾಲೂಕು/ಜಿಲ್ಲಾ ಪಂಚಾಯತು ಚುನಾವಣೆಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸಿತ್ತು. ಗ್ರಾಮ ಪಂಚಾಯತ್, ಸೇವಾ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ ಕೆಲವು ಕಡೆ ಗೆಲುವು ಸಾಧ್ಯವಾಗಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ತಾಲೂಕಿನಲ್ಲಿ ದೊರೆತ ಮತಗಳು 2,300 ಆಗಿದ್ದರೆ, ತಾಲೂಕು ಪಂಚಾಯತು, ಜಿಲ್ಲಾ ಪಂಚಾಯತು ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷ ಬೆಳ್ತಂಗಡಿ ಕ್ಷೇತ್ರದಲ್ಲಿ ಪಡೆದ ಒಟ್ಟು ಮತಗಳು 3,500. ಈ ಬಾರಿ ಪಕ್ಷ ಪಡೆದ ಮತಗಳು 4,532 ಆಗಿವೆ. ಹೀಗೆ ಪಕ್ಷವು ಬೆಳವಣಿಗೆಯ ದಾರಿಯಲ್ಲಿದೆ.

ಮುಂದಿನ ಬಾರಿ 3 ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿ ವಿಶೇಷ ಗಮನ ಹರಿಸಬೇಕೆಂಬ ಭಾವನೆ ಕಾರ್ಯಕರ್ತರಲ್ಲಿ ಮೂಡಿದೆ. ಅದಕ್ಕಾಗಿ ಬೂತು ಮಟ್ಟದ ಕಮಿಟಿ ರಚಿಸಿ ಸಕ್ರಿಯವಾಗಿ ದುಡಿಯಲು ನಿರ್ಧರಿಸಲಾಗಿದೆ. ಜನರ, ರೈತರ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಡಲು ತೀರ್ಮಾನಿಸಲಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾರ್ಮಿಕ ಸಂಘಗಳು ಎತ್ತಿರುವ ಪ್ರಶ್ನೆಗಳ ಪರಿಶೀಲನೆ: ಯುಪಿಎ-2 ಸರಕಾರ ಎಷ್ಟು ಪ್ರಾಮಾಣಿಕವಾಗಿದೆ?



ವೇದರಾಜ ಎನ್.ಕೆ.

ಕಾರ್ಮಿಕ ಸಂಘಗಳು ಇತ್ತೀಚೆಗೆ ಸಂಘಟಿಸಿದ ಎರಡು ದಿನಗಳ ಮುಷ್ಕರ ಕಾರ್ಮಿಕ ವರ್ಗದ ಕಲ್ಯಾಣಕ್ಕೆ ಸಂಬಂಧಪಟ್ಟ ಹಲವು ಪ್ರಶ್ನೆಗಳ ಬಗ್ಗೆ ಮಾತ್ರವಲ್ಲ, ಒಟ್ಟಾರೆಯಾಗಿ ಜನಸಾಮಾನ್ಯರ ಕಲ್ಯಾಣದ ಪ್ರಶ್ನೆಗಳತ್ತವೂ ಗಮನ ಕೇಂದ್ರೀಕರಿಸಿದೆ-ಇದು ನಮ್ಮ ಪ್ರಧಾನ ಮಂತ್ರಿಗಳ ಉದ್ಗಾರ ಎಂದರೆ ಆಶ್ಚರ್ಯವೆನಿಸುತ್ತದಲ್ಲವೇ? ಇದು ಅವರು 45ನೇ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ವನ್ನು ಉದ್ಘಾಟಿಸುತ್ತ ಹೇಳಿದ ಮಾತು ಎಂದರೆ ಆಶ್ಚರ್ಯ ತುಸು ಕಡಿಮೆಯಾಗಬಹದು. ಏಕೆಂದರೆ ಸಭಿಕರು ಯಾರೆಂದು ನೋಡಿ, ಅವರನ್ನು ಖುಶಿಪಡಿಸುವಂತೆ ಮಾತಾಡುವಲ್ಲಿ ರಾಜಕಾರಣಿಯಾಗಿರುವ ಈ ಆರ್ಥಿಕ ತಜ್ಞರೂ ಹಿಂದೆ ಬಿದ್ದಿಲ್ಲ. ಆದರೂ ಕಳೆದ ವರ್ಷ 44ನೇ ಐಎಲ್‌ಸಿ ಸಮ್ಮೇಳನದ ಮುಗಿದ ಎರಡೇ ವಾರಗಳಲ್ಲಿ (ಫೆಬ್ರುವರಿ 28ರಂದು) ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಆದರೆ ಅಂದಿನ ಉದ್ಘಾಟನಾ ಭಾಷಣದಲ್ಲಿ ಅದರ ಬಗ್ಗೆ ಇದೇ ಪ್ರಧಾನಿಗಳು ಚಕಾರ ಎತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು.

ಕಾರ್ಮಿಕ ಸಂಘಗಳ ಬೇಡಿಕೆಯನ್ನು ಪ್ರಧಾನಿಗಳು ಮೂರು ವಿಧಗಳಾಗಿ ವರ್ಗೀಕರಿಸಿದ್ದಾರೆ. ಹಣದುಬ್ಬರ ತಡೆಯಲು ನಿರ್ದಿಷ್ಟ ಕ್ರಮಗಳು, ಉದ್ಯೋಗಾವಕಾಶ ನಿರ್ಮಾಣ ಮತ್ತು ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಾದ ಪಾಲನೆ ಈ ಬೇಡಿಕೆಗಳ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲ, ಅಂದರೆ ಯುಪಿಎ ಪ್ರಧಾನ ಮಂತ್ರಿಗಳಿಗೂ ಭಿನ್ನಾಭಿಪ್ರಾಯವಿಲ್ಲ.

ಇನ್ನು ಕೆಲವು ಬೇಡಿಕೆಗಳು, ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆ, ರಾಷ್ಟ್ರೀಯ ಸಾಮಾಜಿಕ ಭದ್ರತಾ ನಿಧಿಯ ರಚನೆ, ರಾಷ್ಟ್ರೀಯ ತಳಮಟ್ಟದ ಕನಿಷ್ಟ ಕೂಲಿ ನಿಗದಿ ಮತ್ತು ನೌಕರರ ಪೆನ್ಶನ್ ಯೋಜನೆಯಲ್ಲಿ ಕನಿಷ್ಟ 1000ರೂ. ಪೆನ್ಶನ್ ಮುಂತಾದವು ಸರಕಾರದ ಸಕ್ರಿಯ ಪರಿಗಣನೆಯಲ್ಲಿ ಇವೆಯಂತೆ. ಇನ್ನು ಮೂರನೇ ವಿಧದ ಬೇಡಿಕೆಗಳ ಬಗ್ಗೆ ಕಾರ್ಮಿಕ ಮುಖಂಡರೊಡನೆ ಇನ್ನಷ್ಟು ಸಂವಾದಗಳು ಅಗತ್ಯವಾಗಿದ್ದು, ಇದಕ್ಕಾಗಿ ಹಣಕಾಸು ಮಂತ್ರಿಗಳ ಅಡಿಯಲ್ಲಿ ಒಂದು 'ಮಂತ್ರಿಗಳ ಗುಂಪ'ನ್ನು ರಚಿಸಲಾಗಿದೆ ಎಂದರು.

ಕಾರ್ಮಿಕ ಸಂಘಗಳು ಕೇಳುತ್ತಿರುವುದು 'ರಾಷ್ಟ್ರೀಯ ನೆಲಮಟ್ಟದ ಕನಿಷ್ಟ ಕೂಲಿ'ಯಲ್ಲ, ಒಂದು 'ರಾಷ್ಟ್ರೀಯ ಕನಿಷ್ಟ ಕೂಲಿ'. ಅದೇನೇ ಇರಲಿ, ದೇಶದ ಪ್ರಧಾನ ಮಂತ್ರಿಗಳಿಗೆ ಕಾರ್ಮಿಕರು ಎತ್ತುತ್ತ ಬಂದಿರುವ ಬೇಡಿಕೆಗಳು "ನಮ್ಮ ಬೆಳವಣಿಗೆ ಮತ್ತು ಪ್ರಗತಿ ಎಲ್ಲರನ್ನೂ ಒಳಗೊಳ್ಳುವಂತದ್ದಿರಬೇಕು, ವಿಶೇಷವಾಗಿ ನಮ್ಮ ಸಮಾಜದ ಕಡಿಮೆ ಅನುಕೂಲದ ವಿಭಾಗಗಳಿಗೆ ಪ್ರಯೋಜನಕಾರಿಯಾಗಬೇಕು ಎಂಬ ಕಾಳಜಿಯನ್ನು ಬಿಂಬಿಸುತ್ತವೆ" ಎಂದು ಮನವರಿಕೆಯಾಗಲು ನಾಲ್ಕು ವರ್ಷಗಳ ಸತತ ಹೋರಾಟಗಳು, ಜೈಲ್‌ಭರೋ, ಸಂಸತ್ ಚಲೋಗಳು ಮತ್ತು ದೇಶವ್ಯಾಪಿ ಮುಷ್ಕರಗಳೇ ಬೇಕಾದವು. ಕಾರ್ಮಿಕ ಸಂಘಗಳು 'ಅಭಿವೃದ್ಧಿ-ವಿರೋಧಿಗಳು' ಎಂಬ ನವ-ಉದಾರವಾದಿ ಮೂಢ ನಂಬಿಕೆ ಇದಕ್ಕೆ ಕಾರಣವಿರಬಹದು ಎನ್ನುತ್ತಾರೆ ಕಾರ್ಮಿಕ ಮುಖಂಡರು.

ಯುಪಿಎ ಪ್ರಧಾನ ಮಂತ್ರಿಗಳು ತಾನು ಕೇವಲ ಒಂದನ್ನು ಬಿಟ್ಟು ಮತ್ತೆಲ್ಲ ಐಎಲ್‌ಸಿ ಸಮ್ಮೇಳನಗಳಲ್ಲಿ ಭಾಗವಹಿಸಿದ್ದೇನೆ ಎಂದು ಈ ಬಾರಿಯೂ ಹೆಮ್ಮೆಯಿಂದ ಒತ್ತಿ ಹೇಳಿ, ಕಾರ್ಮಿಕರ [illegible] ತಮ್ಮ ಕಾಳಜಿಯ ಆಳವನ್ನು ಪ್ರದರ್ಶಿಸಿದರು. ಆದರೆ ಎಂದಿನಂತೆ ಈ ಬಾರಿಯೂ ಸ್ವಲ್ಪ ಹೊತ್ತು ಸಮ್ಮೇಳನದಲ್ಲಿ ಕುಳಿತು ಕಾರ್ಮಿಕರ ಪ್ರತಿನಿಧಿಗಳು ಏನು ಹೇಳುತ್ತಾರೆ ಎಂದು ಕೇಳಬೇಕು ಎಂದು ಅವರಿಗೆ ಅನಿಸಲಿಲ್ಲ. 44ನೇ ಐಎಲ್‌ಸಿ ಸಮ್ಮೇಳನ 15ನೇ ಐಎಲ್‌ಸಿ ಸಮ್ಮೇಳನದ ಶಿಫಾರಸು ಮತ್ತು ಸುಪ್ರಿಂ ಕೋರ್ಟ್ ರಪ್ತಕೊಸ್ ಮೊಕದ್ದಮೆಯಲ್ಲಿ ನೀಡಿದ ನಿರ್ದೇಶನಗಳ ಪ್ರಕಾರ ಕನಿಷ್ಟ ಕೂಲಿಯನ್ನು ನಿಗದಿ ಮಾಡಬೇಕೆಂದು ಶಿಫಾರಸು ಮಾಡಿತ್ತು. ಆದರೆ ಯುಪಿಎ-2 ಸಂಪುಟ "ರಾಷ್ಟ್ರೀಯ ನೆಲಮಟ್ಟದ ಕನಿಷ್ಟ ಕೂಲಿ' ನೀಡಲು 1948ರ ಕನಿಷ್ಟ ಕೂಲಿ ಕಾಯ್ದೆಯನ್ನು ತಿದ್ದುಪಡಿ ಮಾಡಲು ಮಾತ್ರ ಮಂಜೂರಾತಿ ನೀಡಿದೆ. ಈ ತ್ರಿಪಕ್ಷೀಯ ವ್ಯವಸ್ಥೆಯಲ್ಲಿ ತನ್ನ ಭಾಗವಹಿಸುವಿಕೆಯ ಬಗ್ಗೆ ಹೆಮ್ಮೆ ಪಡುವ ಪ್ರಧಾನಿಗಳ ಸರಕಾರ ಅದರ ಶಿಫಾರಸುಗಳಿಗೆ ಎಷ್ಟು ಬೆಲೆ ಕೊಡುತ್ತದೆ



ಎಂಬುದನ್ನೂ ಇದು ಪ್ರದರ್ಶಿಸಿದೆ.

ಪ್ರಧಾನ ಮಂತ್ರಿಗಳು ಇನ್ನೊಂದು 'ಚತುರತೆ' ತೋರುತ್ತ ಕಾರ್ಮಿಕ ವರ್ಗದ ಬಗ್ಗೆ ಯುಪಿಎ-2 ಸರಕಾರದ ಅಪ್ರಾಮಾಣಿಕತೆಯ ಇನ್ನೊಂದು ಉದಾಹರಣೆ ಪ್ರಸ್ತುತಪಡಿಸಿದರು. 2005ರಿಂದ 2011ರ ನಡುವೆ, ಅಂದರೆ ತಮ್ಮ ಆಳ್ವಿಕೆಯ ಅವಧಿಯಲ್ಲಿ ಸಂಘಟಿತ ವಲಯದಲ್ಲಿ ಮಹಿಳೆಯರ ಉದ್ಯೋಗಾವಕಾಶ 19ಶೇ.ದಷ್ಟು ಹೆಚ್ಚಿತು ಎಂದು ಅವರು ಸಂತಸ ವ್ಯಕ್ತಪಡಿಸಿದರು. ಆದರೆ ಅವರದ್ದೇ ಸರಕಾರದ ಎನ್‌ಎಸ್‌ಎಸ್‌ಓ ಸರ್ವೆ ಹೇಳುವ ಕತೆಯೇ ಬೇರೆ. ಅದರ ಪ್ರಕಾರ 2004-05 ರಿಂದ 2009-10ರ ನಡುವೆ 2 ಕೋಟಿಗಿಂತಲೂ ಹೆಚ್ಚು ಮಹಿಳೆಯರು ದೇಶದ ಶ್ರಮಶಕ್ತಿಯಲ್ಲಿ ಕಾಣೆಯಾಗಿ ಬಿಟ್ಟಿದ್ದಾರೆ. ಬಹುಶಃ ಅವರು ತಮ್ಮ ಸರಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ "ಸ್ಕೀಮ್ ಕಾರ್ಯಕರ್ತ"ರನ್ನು, ಅಂಗನವಾಡಿ ನೌಕರರು, ಆಶಾ, ಮಧ್ಯಾಹ್ನದ ಊಟ ನೌಕರರು ಮುಂತಾದವರನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಈ ಮಾತು ಹೇಳಿರಬೇಕು ಎನ್ನುತ್ತಾರೆ ಈ ವಿಭಾಗದ ಲಕ್ಷಾಂತರ ಮಹಿಳೆಯರನ್ನು ಸಂಘಟಿಸುತ್ತಿರುವ ಸಿಐಟಿಯುನ ಹಿರಿಯ ಮುಖಂಡರಾದ ಡಾ. ಹೇಮಲತಾ. ಆದರೆ ಇವರನ್ನು ಯುಪಿಎ ಸರಕಾರ "ನೌಕರ"ರು ಎಂದೇ ಗುರುತಿಸುವುದಿಲ್ಲವಲ್ಲ! ಅವರು ಕೇವಲ "ಗೌರವ ಧನ" ಪಡೆಯುವ "ಸ್ವಯಂಸೇವಕರು" ಮಾತ್ರ!

ಪ್ರಧಾನ ಮಂತ್ರಿಗಳು ಈ ಭಾಷಣದೊಂದಿಗೆ ಉದ್ಘಾಟಿಸುತ್ತಿದ್ದ 45ನೇ ಐಎಲ್‌ಸಿ ಸಮ್ಮೇಳನದ ಅಜೆಂಡಾದ ಮೊದಲ ವಿಷಯವೇ ಈ "ಸ್ಕೀಮ್ ಕಾರ್ಯಕರ್ತರ" ಸೇವಾ ಶರತ್ತುಗಳು. ಆದರೆ ಪ್ರಧಾನ ಮಂತ್ರಿಗಳು ಅವರನ್ನು "ಮಾನವ ಅಭಿವೃದ್ಧಿಯ ಸ್ತಂಭಗಳು" ಎಂದು ದೊಡ್ಡದಾಗಿ ವರ್ಣಿಸಿದರೂ ಅವರ ಕೆಲಸದ, ಬದುಕಿನ ಪರಿಸ್ಥಿತಿಗಳನ್ನು ಉತ್ತಮ ಪಡಿಸಬೇಕಾಗಿದೆ ಎಂಬ ಬಗ್ಗೆ ಚಕಾರವೆತ್ತಲಿಲ್ಲ. ಇದು ಸಮ್ಮೇಳನಕ್ಕೆ ಬಂದಿದ್ದ ಕಾರ್ಮಿಕ ಪ್ರತಿನಿಧಿಗಳು ಮತ್ತು ಸುಮಾರು ಒಂದು ಕೋಟಿ 'ಸ್ಕೀಮ್ ಕಾರ್ಯಕರ್ತ'ರಿಗೆ ಭಾರೀ ನಿರಾಶೆ ಉಂಟು ಮಾಡಿದೆ ಎನ್ನುತ್ತಾರೆ ಡಾ. ಹೇಮಲತಾ.

ಸರಕಾರ 'ಸ್ಕೀಮ್ ಕಾರ್ಯಕರ್ತರು' ಎನ್ನುವ ನೌಕರರ ವಿವಿಧ ವಿಭಾಗಗಳ ವಿವಿಧ ಹೋರಾಟಗಳು, ಮತ್ತು ಇವೆಲ್ಲಕ್ಕೆ ಶಿಖರಪ್ರಾಯವಾಗಿ ಕಳೆದ ನವಂಬರಿನಲ್ಲಿ ಸಂಸತ್ತಿನ ಎದುರು ಎರಡು ದಿನಗಳ ಬೃಹತ್ 'ಮಹಾಪಡಾವ್'ನ ಪರಿಣಾಮವಾಗಿ ಕೊನೆಗೂ ಈ ಪ್ರಶ್ನೆ ಐಎಲ್‌ಸಿಯ ಅಜೆಂಡಾದಲ್ಲಿ ಮೊದಲ ಸ್ಥಾನ ಪಡೆಯಿತು. ಆದರೂ ಪ್ರಧಾನ ಮಂತ್ರಿಗಳು ಈ ಬಗ್ಗೆ ತಮ್ಮ ಎಂದಿನ ಮೌನವನ್ನು ಪ್ರದರ್ಶಿಸಿರುವ ಬಗ್ಗೆ ಪ್ಲಿನರಿ ಅಧಿವೇಶನಗಳಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಬೇಸರ ವ್ಯಕ್ತಪಡಿಸುತ್ತ, ನಮ್ಮ ದೇಶದ ಕೋಟ್ಯಂತರ ಮಹಿಳೆಯರು ಮತ್ತು ಮಕ್ಕಳ ಆರೋಗ್ಯ, ಶಿಕ್ಷಣ ಮುಂತಾದವುಗಳಲ್ಲಿ ಮೂಲ ಸೇವೆಗಳನ್ನು ಒದಗಿಸುವ ಈ ಒಂದು ಕೋಟಿ 'ಕಾರ್ಯಕರ್ತೆ'ಯರು ಕನಿಷ್ಟ ಸಂಬಳ, ಕನಿಷ್ಟ ಸಾಮಾಜಿಕ ಭದ್ರತೆಗಳೂ ಇಲ್ಲದೆ ಮೂವತ್ತು ವರ್ಷಗಳ ಸೇವೆಯ ನಂತರ ಬರಿಗೈಯಲ್ಲಿ ಹೋಗುವಂತೆ ಮಾಡುವುದು ಯಾವುದೇ ನಾಗರಿಕ ಸಮಾಜಕ್ಕೆ ಒಪ್ಪುವಂತದ್ದೇನು ಎಂದು ಖಾರವಾಗಿ ಪ್ರಶ್ನಿಸಿದರು.

ಆದರೂ ಯುಪಿಎ-2 ಸರಕಾರದ ಮುಖ್ಯಸ್ಥರಿಗೆ ಕೊನೆಗೂ ಕಾರ್ಮಿಕ ಸಂಘಗಳ ಕಾಳಜಿಗಳ ಅರಿವಾದ ಬಗ್ಗೆ, ಅವರ ಸರಕಾರ ಕಾರ್ಮಿಕ ಸಂಘಗಳೊಂದಿಗೆ ರಚನಾತ್ಮಕ ಸಂವಾದಗಳಿಗೆ ಮುಂದಾಗುವುದೆಂದು ಹೇಳಿರುವ ಬಗ್ಗೆ ಸಂತಸ ವ್ಯಕ್ತಪಡಿಸುತ್ತ ಹಲವು ಪ್ರಶ್ನೆಗಳನ್ನು ಐಎಲ್‌ಸಿ ಸಮ್ಮೇಳನದ ಮುಂದೆ ಮಂಡಿಸಿದರು. ಸರಕಾರವೇ ರಚಿಸಿರುವ ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಾದ ಪಾಲನೆಯಾಗಬೇಕಾದರೆ ಸರಕಾರದ ಆಡಳಿತದ ಶೈಲಿಯ ಕಣ್ಣೋಟದಲ್ಲೇ ಮೂಲಭೂತ ಬದಲಾವಣೆ ಬೇಕಾಗಿದೆ ಎಂದು ಹೇಳಿದ ಅವರು ಯುಪಿಎ-2 ಸರಕಾರದ 'ಪಿಪಿಪಿ'(ಖಾಸಗಿ-ಸಾರ್ವಜನಿಕ ಪಾಲುದಾರಿಕೆ) ಗೀಳು ಕಾರ್ಮಿಕ ಕಾನೂನುಗಳ ಪಾಲನೆಯಲ್ಲೂ ರಾರಾಜಿಸುತ್ತಿದೆ ಎಂದರು. ಸಮಸ್ತ ಕಾರ್ಮಿಕ ಕಾನೂನು ಆಡಳಿತ ಮತ್ತು ಕಾರ್ಮಿಕ ಸಂಬಂಧಗಳ ನಿರ್ವಹಣೆ ಸರಕಾರೀ ಯಂತ್ರ ಮತ್ತು ಕಾರ್ಪೊರೇಟ್ ಮಾಲಕರ ನಡುವಿನ 'ಪಿಪಿಪಿ'ಯಾಗಿ ಬಿಟ್ಟಿದೆ-ಅದು ಕನಿಷ್ಟ ಕೂಲಿ, ದುಡಿಮೆಯ ಅವಧಿ, ಸಾಮಾಜಿಕ ಭದ್ರತೆ, ಕೆಲಸದ ಸ್ಥಳದಲ್ಲಿ ಸುರಕ್ಷಿತತೆ, ಕಾಂಟ್ರಾಕ್ಟ್ ಕೆಲಸ ಮುಂತಾದ ಎಲ್ಲ ವಿಷಯಗಳಿಗೂ ವ್ಯಾಪಿಸಿದೆ ಎಂದು ತಪನ್ ಸೇನ್ ಹೇಳಿದರು.

ತಮ್ಮ ನವ-ಉದಾರವಾದಿ ಗೀಳಿನಿಂದ ತುಸು ಆಚೆ ಬಂದು ಕಾರ್ಮಿಕ ಸಂಘಗಳ ಕಾಳಜಿಯನ್ನು ಕೊನೆಗೂ ಗುರುತಿಸಿದ ಯುಪಿಎ-2 ಸರಕಾರದ ಮುಖ್ಯಸ್ಥರು ನವ-ಉದಾರವಾದದ ಭಾಗವಾದ ಈ 'ಪಿಪಿಪಿ' ಗೀಳಿನಿಂದಲೂ ತುಸು ಆಚೆಗೆ ಬಂದು ತಮ್ಮ ಉದ್ಘಾಟನಾ ಭಾಷಣಕ್ಕೆ ಪ್ರಾಮಾಣಿಕರಾಗಿರುತ್ತಾರೆಯೇ? ಕಳೆದ 9 ವರ್ಷಗಳ ಅನುಭವದಲ್ಲಿ ಇಂತಹ ನಿರೀಕ್ಷೆಗೆ ಅಷ್ಟೇನೂ ಆಸ್ಪದವಿಲ್ಲ. ■


ಜಗದಗಲ

ಶರತ್‌ಚಂದ್ರ

ಡಬ್ಲ್ಯೂ.ಟಿ.ಒ.ನಲ್ಲಿ ಮೂರನೇ ಜಗತ್ತಿನ ಗೆಲುವು

ಡಬ್ಲ್ಯೂ.ಟಿ.ಒ.ಗೆ ಬ್ರೆಜಿಲಿನ ರೊಬರ್ಟೊ ಅಜವೆದೊ ಮುಖ್ಯಸ್ಥರಾಗಿ ಆಯ್ಕೆಯಾಗಿದ್ದಾರೆ. ಇದು ಜಾಗತಿಕ ಆರ್ಥಿಕ ಸಂಘಟನೆಗಳಲ್ಲಿ ಮೂರನೇ ಜಗತ್ತಿನ ದೇಶಗಳ ಪರವಾದ ಅತ್ಯಂತ ಗಮನಾರ್ಹ ಬೆಳವಣಿಗೆ. ರೊಬರ್ಟೊ ಮೂರನೇ ಜಗತ್ತಿನಿಂದ ಬಂದ ಮೊದಲ ಡಬ್ಲ್ಯೂ.ಟಿ.ಒ. ಮುಖ್ಯಸ್ಥರೇನಲ್ಲ. ಆ ಕೀರ್ತಿ 2002–2005 ಅವಧಿಯಲ್ಲಿ ಮುಖ್ಯಸ್ಥರಾಗಿದ್ದ ಥಾಯ್ಲೆಂಡಿನ ಸುಪಚಾಯ್ ಪನಿಟ್ಚಪಾಕಡಿ ಅವರಿಗೆ ಸಲ್ಲುತ್ತದೆ. ಆದರೆ ಅವರು ಅಮೆರಿಕ–ಯುರೋಪಿಯನ್ ಕೂಟ ಬೆಂಬಲಿತ ಅಭ್ಯರ್ಥಿಯಾಗಿದ್ದರು. ಎಲ್ಲಾ ಮೂರನೇ ಜಗತ್ತಿನ ದೇಶಗಳಿಂದ ಬೆಂಬಲಿತ ಅಭ್ಯರ್ಥಿಯಾಗಿ (ರೊಬರ್ಟೊ), ಅಮೆರಿಕ–ಯುರೋಪಿಯನ್ ಕೂಟ ಬೆಂಬಲಿತ ಅಭ್ಯರ್ಥಿಯನ್ನು (ಬಡ ದೇಶವೇ ಆದ ಮೆಕ್ಸಿಕೊದ ಹೆರ್ಮಿನಿಯೊ ಬ್ಲಾಂಕೊ) ಸೋಲಿಸಿದ್ದು ಇದು ಮೊದಲ ಬಾರಿಗೆ. ರೊಬರ್ಟೊಗೆ ಬ್ರಿಕ್ಸ್ ದೇಶಗಳ ಪ್ರಾಯೋಜನೆ ಮತ್ತು ಬಡದೇಶಗಳ ದೃಢ ಬೆಂಬಲ ಇದ್ದಿದ್ದೂ ವಿಶೇಷವೇ.

ಹಿಂದೆ ಮುಖ್ಯಸ್ಥರ ಆಯ್ಕೆಯಲ್ಲಾಗಲಿ ಅಥವಾ ಪ್ರಮುಖ ನೀತಿ–ಕಾರ್ಯಕ್ರಮಗಳಲ್ಲಾಗಲಿ ಯಾವತ್ತೂ ಅಮೆರಿಕ–ಯುರೋಪಿಯನ್ ಕೂಟದ್ದೇ ಅಂತಿಮ ನಿರ್ಧಾರವಾಗಿತ್ತು. ಮೂರನೇ ಜಗತ್ತಿನ ದೇಶಗಳು ಡಬ್ಲ್ಯೂ.ಟಿ.ಒ. ಮುಖ್ಯಸ್ಥರ ಆಯ್ಕೆಯಲ್ಲಿ ತೋರಿಸಿದ ಐಕ್ಯತೆ ಮತ್ತು ದೃಢ ನಿಶ್ಚಯ, ನೀತಿ–ಕಾರ್ಯಕ್ರಮ ರೂಪಿಸುವಿಕೆ ಮತ್ತು ಜಾರಿಯಲ್ಲೂ ತೋರಿಸಿದರೆ ಇದು ಜಾಗತಿಕ ಆರ್ಥಿಕ ನಿರ್ವಹಣೆಯಲ್ಲಿ ಪ್ರಮುಖ ಬದಲಾವಣೆಗಳ ಹರಿಕಾರನಾಗುವ ಭರವಸೆ ಮೂಡಿಸಿದೆ. ರೊಬರ್ಟೊ (1997ರಿಂದ) ದೀರ್ಘ ಕಾಲ ಡಬ್ಲ್ಯೂ.ಟಿ.ಒ.ದಲ್ಲಿ ಬ್ರೆಜಿಲಿನ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದು ಆ ಸಂಘಟನೆಯ ಒಳಗು ಹೊರಗು ಬಲ್ಲ ಅನುಭವಿ. ಮೂರನೇ ಜಗತ್ತಿನ ಹಿತಾಸಕ್ತಿಗಳ ಛಾಂಪಿಯನ್ ಎಂದು ಹೆಸರಾದವರು. ಆ ಸಂಘಟನೆಯನ್ನು ಶ್ರೀಮಂತ ದೇಶಗಳು ತಮ್ಮ ಆಯುಧ ಮಾಡಿಕೊಳ್ಳುವುದರ ವಿರುದ್ಧ ತೀವ್ರ ಪ್ರತಿರೋಧ ಒಡ್ಡಿದವರು. ಅದನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುವ, ನ್ಯಾಯಯುತ ಬಹು–ಪಕ್ಷೀಯ ಜಾಗತಿಕ ವ್ಯಾಪಾರ ನಿಯಮಾವಳಿಗಳನ್ನು ರೂಪಿಸುವ ಸಂಘಟನೆಯಾಗಿ ಮಾಡಲು ಹೋರಾಡಿದವರು. ತಮ್ಮ ಅನುಭವ ಮತ್ತು ಕೆಲಸದಿಂದ ಸಂಘಟನೆಯ ಬಹುಪಾಲು ಎಲ್ಲರ ವಿಶ್ವಾಸ ಮತ್ತು ಗೌರವ ಗಳಿಸಿದವರು.



ಡಬ್ಲ್ಯೂ.ಟಿ.ಒ.ಮುಖ್ಯಸ್ಥರಾಗಿ ರೊಬರ್ಟೊ ಅವರ ಮುಂದೆ ತೀವ್ರ ಸವಾಲುಗಳು ಇವೆ. ದೋಹಾ ಸುತ್ತಿನ ಮಾತುಕತೆಗಳು ನೆನೆಗುದಿಗೆ ಬಿದ್ದಿವೆ. ಶ್ರೀಮಂತ ದೇಶಗಳು ಕೃಷಿ ಸಬ್ಸಿಡಿ ಕಡಿತ ಮಾಡಲು ಒಪ್ಪುತ್ತಿಲ್ಲ. ಬಡ ದೇಶಗಳು ಪೇಟೆಂಟ್ ಮುಂತಾದ ಬೌದ್ಧಿಕ ಹಕ್ಕುಗಳ ನಿಯಮಾವಳಿಗಳು ತಮ್ಮ ಅಭಿವೃದ್ಧಿಗೆ ಮಾರಕವಾಗಲಿವೆ ಎಂದು ವಿರೋಧಿಸುತ್ತಿವೆ. ರೊಬರ್ಟೊ ಅವರೇ ಇತ್ತೀಚೆಗೆ 'ಡಬ್ಲ್ಯೂ.ಟಿ.ಒ. ಒಂದು ಮರಣಾಸನ್ನ ರೋಗಗ್ರಸ್ತ ಸಂಘಟನೆ. ಇದರ ಮುಂದಿನ ಮುಖ್ಯಸ್ಥ ತಕ್ಷಣ ಸರ್ಜರಿ ಮಾಡಲು ತಯಾರಿರಬೇಕು' ಎಂದಿದ್ದು ಅಕ್ಷರಶಃ ನಿಜ. 'ರೊಬರ್ಟೊ ಒಂದು ಚಲನಶೀಲ ನ್ಯಾಯುತ ಡಬ್ಲ್ಯೂ.ಟಿ.ಒ. ಕಟ್ಟುತ್ತಾರೆ ಎಂಬ ಭರವಸೆ ನನಗಿದೆ' ಎಂಬ ಬ್ರೆಜಿಲಿನ ಅಧ್ಯಕ್ಷೆಯ ನಿರೀಕ್ಷೆ ಜಗತ್ತಿನ ಶೇ.80 ಜನ ವಾಸಿಸುವ ಬಡ ದೇಶಗಳದ್ದೂ ಕೂಡಾ. ಈ ನಿರೀಕ್ಷೆಗಳನ್ನು ಈಡೇರಿಸುವುದೂ ರೊಬರ್ಟೊ ಅವರ ಮುಂದಿರುವ ದೊಡ್ಡ ಸವಾಲು.

ಇಂದು 'ಜಾಗತಿಕ ಆರ್ಥಿಕ ಪೆರೆಸ್ಟ್ರೊಯಿಕಾ (ಪುನರ್ಸಂಟನೆ)'ದ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಿದೆ. ಬಡ ದೇಶಗಳ ಜನತೆಯ ಹಿತಾಸಕ್ತಿ ಕಾಪಾಡಲು, ನಿಜವಾದ ಅಭಿವೃದ್ಧಿ ಸಾಧಿಸಲು 'ಜಾಗತಿಕ ಆರ್ಥಿಕ ಪೆರೆಸ್ಟ್ರೊಯಿಕಾ'ದ ಅಗತ್ಯದ ಬಗ್ಗೆ 1988ರಲ್ಲಿ ಡಾ.ಮನಮೋಹನ ಸಿಂ[ಗ್] (ಹೌದು. ಈಗ ಪ್ರಧಾನಿಯಾಗಿ ಅಂತಹ ಆಶಯಗಳ ವಿರುದ್ಧ ಕೆಲಸ ಮಾಡುತ್ತಿರುವ ಸಿಂಗ್ ಅವರೇ) ವಿಶ್ವಸಂಸ್ಥೆಯ ಸೌತ್ ಕಮಿಶನಿನ ಸೆಕ್ರೆಟರಿ ಜನರಲ್ ಆಗಿ ಹೇಳಿದ್ದರು. ಈ ಹೊಸ ಪೆರೆಸ್ಟ್ರೊಯಿಕಾದತ್ತ ರೊಬರ್ಟೊ ಅವರ ಆಯ್ಕೆ ಮೊದಲ ಹೆಜ್ಜೆ.

ಹಿಂದೆ ಬಡದೇಶಗಳು ಸೇರಿದಂತೆ ಜಾಗತಿಕ ಆರ್ಥಿಕ ಅಭಿವೃದ್ಧಿಗೆ ವಿಶೇಷ ಗಮನ ಕೊಡುತ್ತಿದ್ದ ವಿಶ್ವಸಂಸ್ಥೆಯ ಅಂಕ್ಟಾಡ್ (ಯು.ಎನ್.ಸಿ.ಟಿ.ಎ.ಡಿ.) ಮುಖ್ಯಸ್ಥರ ಅವಧಿ ಮುಗಿಯುತ್ತಿದ್ದು ಅವರ ಆಯ್ಕೆ ಸಹ ಸದ್ಯದಲ್ಲೇ ಬರಲಿದೆ. ಅಂಕ್ಟಾಡ್ 2008ರ ಬಿಕ್ಕಟ್ಟಿನ ನಂತರ ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳೂ ಜೂಜಾಟದಲ್ಲಿ ತೊಡಗದಂತೆ ಜಾಗತಿಕ ನಿಬಂಧನೆ[ಗಳ] ಮೇಲೆ ಕೆಲಸ ಮಾಡುತ್ತಿದೆ. ಆದರೆ ಅದಕ್ಕೆ ಅಮೆರಿಕ–ಯುರೋಪಿಯನ್ ಕೂಟ ತೀವ್ರ ಪ್ರತಿರೋಧ ಒಡ್ಡುತ್ತಿವೆ. ಇವೆಲ್ಲಾ ಆಗಲು ಬ್ರಿಕ್ಸ್ ದೇಶಗಳು ಈಗಿನ ಅನ್ಯಾಯಯುತ ಜಾಗತಿಕ ಆರ್ಥಿಕ ವ್ಯವಸ್ಥೆಗೆ ಬದಲಿಯಾದ ಒಂದು ವ್ಯವಸ್ಥೆಯನ್ನು ರೂಪಿಸಿ ಅದಕ್ಕೆ ಬಡದೇಶಗಳ ಬೆಂಬಲ ದೊರಕಿಸಬೇಕಾಗಿದೆ. ರೊಬರ್ಟೊ ಅವರ ಆಯ್ಕೆ ಈ ನಿಟ್ಟಿನಲ್ಲಿ ಸಹಾಯಕವಾಗುತ್ತದೆಯೆ ಎಂದು ಕಾದು ನೋಡಬೇಕು.

ಸಿರಿಯಾ ಸರ್ಕಾರ ಬದಲಾವಣೆಯ ಹವಣಿಕೆಯಲ್ಲಿ ಅಮೆರಿಕ–ಇಸ್ರೇಲ್ ದುಷ್ಟಕೂಟ

ಸಿರಿಯಾದಲ್ಲಿ 'ಸರ್ಕಾರ ಬದಲಾವಣೆ ಇಲ್ಲವೆ ಯುದ್ಧ' ಎಂಬುದು ಅಮೆರಿಕ–ಇಸ್ರೇಲ್ ದುಷ್ಟಕೂಟದ ಘೋಷವಾಕ್ಯ. ಅಮೆರಿಕನ್ ಅಧ್ಯಕ್ಷ ಒಬಾಮಾ ಸಿರಿಯಾದ ಮೇಲೆ ಲಿಬ್ಯಾ–ಮಾದರಿ ಯುದ್ಧಕ್ಕೆ ಸೊಂಟಕಟ್ಟಿ ನಿಂತಂತಿದೆ. ಕೊಲ್ಲಿ ದೇಶಗಳ ಶ್ರೀಮಂತ ಶೇಕುಗಳ ಕೃಪಾಪೋಷಿತ ಅರಬ್ ಲೀಗ್ ಬಳಸಿ ರಾಜಕೀಯ ಮಾತುಕತೆ ಆಧಾರಿತ ಯಾವುದೇ ಒಪ್ಪಂದದ ದಾರಿಯನ್ನು ಮುಚ್ಚಿದೆ. ಸಿರಿಯಾದ ವಿರೋಧಿ ರಂಗದಲ್ಲೂ ರಾಜಕೀಯ ಮಾತುಕತೆಗೆ ಒಲವು ತೋರಿಸಿದ ಮತ್ತು ಸಿರಿಯಾದಲ್ಲಿ ನೆಲೆ ಇರುವ ರಂಗದ ನಾಯಕನಿಗೆ ಗೇಟ್ ಪಾಸ್ ಕೊಟ್ಟು, ಅಮೆರಿಕದ ನಾಗರಿಕನಾಗಿರುವ ಸಿರಿಯಾದಲ್ಲಿ ಯಾವುದೇ ನೆಲೆ ಇಲ್ಲದವನನ್ನು ನಾಯಕನಾಗಿ ಮಾಡಲಾಗಿದೆ. ಆತ ಸ್ವಾಭಾವಿಕವಾಗಿಯೇ ಯಾವುದೇ ರಾಜಕೀಯ ಮಾತುಕತೆಗಳಿಗೆ ವಿರೋಧವಾಗಿದ್ದಾನೆ.

ಯಾರಿಗಾದರೂ ಅಮೆರಿಕದ 'ಭಯೋತ್ಪಾದಕತೆ ವಿರುದ್ಧ ಹೋರಾಟ'ದ ಗೋಸುಂಬೆತನದ ಬಗ್ಗೆ ಅನುಮಾನ ಇನ್ನೂ ಇದ್ದರೆ ಸಿರಿಯಾ ಅದಕ್ಕೆ ಹೊಸ ಪುರಾವೆಗಳನ್ನು ಒದಗಿಸಿದೆ. ಸಿರಿಯಾದ ವಿರೋಧ ರಂಗದಲ್ಲಿ ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳು, ಮುಸ್ಲಿಂ ಬ್ರದರ್ ಹುಡ್ ಅಲ್ಲದೆ, ಅಲ–ಖೈದಾ ಸಂಘಟನೆಗಳಾದ ಜಬಾತ್ ಅಲ್–ನಸ್ರಾಗಳು ಪ್ರಮುಖವಾಗಿ ಸರ್ಕಾರದ ವಿರುದ್ಧ ಯುದ್ಧದಲ್ಲಿ ತೊಡಗಿವೆ. ಈ ಗೆರಿಲ್ಲಾ ಗುಂಪುಗಳು ಸರ್ಕಾರ ಮತ್ತು ಮಿಲಿಟರಿಗೆ ಸೇರಿದ ವ್ಯಕ್ತಿ–ಪ್ರದೇಶಗಳ ಮೇಲೆ ಸಶಸ್ತ್ರ ದಾಳಿ ನಡೆಸುತ್ತಿವೆ. ಭಯೋತ್ಪಾದಕ ದಾಳಿಗಳನ್ನು ನಡೆಸುತ್ತಿವೆ. ಅಲ್ಲದೆ ಸಿರಿಯಾದ ಪ್ರಮುಖ ಅಲ್ಪಸಂಖ್ಯಾತ ಗುಂಪು (ಸುಮಾರು ಶೇ.10) ಆದ ಕ್ರಿಶ್ಚಿಯನ್ ನಾಗರಿಕರ ಮೇಲೂ ವ್ಯವಸ್ಥಿತವಾಗಿ ಭಯೋತ್ಪಾದಕ ದಾಳಿಗಳನ್ನು ನಡೆಸುತ್ತಿವೆ. ಬಹುಪಾಲು ಸಿರಿಯನ್ ಕ್ರಿಶ್ಚಿಯನ್ನರು ದೇಶ ಬಿಟ್ಟು ಹೋಗುವ ಹಾಗೆ ಮಾಡುತ್ತಿದೆ.

ವಿರೋಧಿ ಗೆರಿಲ್ಲಾ ಗುಂಪುಗಳಿಗೆ ನೆ[...] ಟರ್ಕಿ ಮತ್ತು ಜೋರ್ಡಾನ್ ಮೂಲಕ ಹಣ, ಸಾಮಗ್ರಿ, ಶಸ್ತ್ರಾಸ್ತ್ರಗಳನ್ನು ಸಿಐಎ ಪೂರೈಕೆ ಮಾಡುತ್ತಿದೆ. ಅಲ್ಲಿ ತರಬೇತಿಗೆ ಮತ್ತು ವೈದ್ಯಕೀಯ ನೆಲೆಗಳನ್ನು ಒದಗಿಸಲಾಗಿದೆ. ಇದಲ್ಲದೆ ಸಿಐಎ ಹಲವು ಅತ್ಯಾಧುನಿಕ ನಿಷೇಧಿತ ಮಾರಕಾಸ್ತ್ರಗಳನ್ನು ಕ್ರೊಶಿಯಾ ಮುಂತಾದ ಮೂರನೇ ದೇಶಗಳ ಮೂಲಕ ಪೂರೈಕೆ ಮಾಡುತ್ತಿದೆ. ವಿರೋಧಿ ಗೆರಿಲ್ಲಾಗಳ ಬಳಿ ಹಲವು ದೇಶಗಳ ಬಳಿ ಇಲ್ಲದ ವಿಮಾನ–ವಿರೋಧಿ ಕ್ಷಿಪಣಿಗಳು ಮತ್ತು ಟ್ಯಾಂಕ್ ಧ್ವಂಸಕಗಳು ಇವೆ. ಮಾರ್ಚಿನ ಒಂದೇ ತಿಂಗಳಲ್ಲಿ ಸುಮಾರು 3500 ಟನ್ನುಗಳಷ್ಟು ಶಸ್ತ್ರಾಸ್ತ್ರಗಳನ್ನು ವಿರೋಧಿ ಗೆರಿಲ್ಲಾಗಳಿಗೆ ಸರಬರಾಜು ಮಾಡಲಾಗಿದೆ. ಇದು ಸಿರಿಯಾ ಸರ್ಕಾರದ ಆಪಾದನೆ ಅಲ್ಲ, ಸ್ಟಾಕ್ ಹೋಮ್ಸಿನ ಅಂತರ್ರಾಷ್ಟ್ರೀಯ ಶಾಂತಿ ಸಂಶೋ[ಧನಾ] ...

ಚೀನಾದ ಪ್ರಧಾನಿ ಮಂತ್ರಿಗಳ.....

ಪುಟ 8 ರಿಂದ

ಅಯಕಟ್ಟಿನ ಆರ್ಥಿಕ ಸಂವಾದ'ದ ಆಧಾರದಲ್ಲಿ, ಎರಡೂ ದೇಶಗಳು ...ಣಾತ್ಮಕತೆಯನ್ನು ತಡೆಯುವಲ್ಲಿ ಸಮಾನ ಹಿತಗಳನ್ನು ಹೊಂದಿವೆ ಮತ್ತು ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಗಳನ್ನು ತೆರೆಯುವ ಪರವಾಗಿ ಇವೆ ಎಂದು ಹೇಳಲಾಗಿದೆ. 'ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ'(ಆರ್‌ಸಿಇಪಿ) ಕುರಿತು ಮಾತುಕತೆಗಳನ್ನು ಆರಂಭಿಸುವ ಅಗತ್ಯದ ಬಗ್ಗೆ ಅವರು ಒತ್ತು ನೀಡಿದ್ದಾರೆ. ಹೇಳಿಕೆ ಬಿಸಿಐಎಂ(ಬಾಂಗ್ಲಾದೇಶ, ಚೀನ, ಭಾರತ ಮತ್ತು ಮ್ಯಾನ್ಮಾರ್) ಅಡಿಯಲ್ಲಿ ಸಹಕಾರವನ್ನು ಉತ್ತೇಜಿಸುವಲ್ಲಿ ಪ್ರಗತಿಯನ್ನು ಗಮನಿಸಿದೆ ಮತ್ತು ಹೆಚ್ಚು ನಿಕಟವಾದ ಆರ್ಥಿಕ ವ್ಯಾಪಾರ ಹಾಗೂ ಜನತೆಗಳ ನಡುವಿನ ಸಂಪರ್ಕಗಳಿಗೆ ಒಂದು ಜಂಟಿ ಅಧ್ಯಯನ ಗುಂಪನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಬಹಳ ಮುಖ್ಯವಾಗಿ, "...ಾ ಕ್ರಮಗಳನ್ನು ಸರಳಗೊಳಿಸುವತ್ತ ಕೆಲಸ ಮಾಡಬೇಕು" ಎಂದು ಎರಡೂ ಪಕ್ಷಗಳವರು ಒಪ್ಪಿಕೊಂಡಿದ್ದಾರೆ.

ಎರಡೂ ಕಡೆಗಳವರು ಪ್ರಾದೇಶಿಕ ಮತ್ತು ಅದಕ್ಕೂ ಕೆಳಗಿನ ಪ್ರಕ್ರಿಯೆಗಳಲ್ಲಿ ಸಹಕಾರವನ್ನು ವಿಶಾಲಗೊಳಿಸಲು ಮತ್ತು ಇಬ್ಬರಿಗೂ ನೆರೆಯಲ್ಲಿರುವ ದೇಶಗಳೊಡನೆ ಮಿತ್ರತ್ವಪೂರ್ಣ ಸಂಬಂಧಗಳನ್ನು ಬೆಳೆಸಲು ಪರಸ್ಪರರನ್ನು ಬೆಂಬಲಿಸಲು ಕೂಡ ಒಪ್ಪಿದ್ದಾರೆ. ಪೂರ್ವ ಏಶ್ಯಾ ಶೃಂಗಸಭೆ, ಶಾಂಘೈ ಸಹಕಾರ ಸಂಘಟನೆ, ದಕ್ಷಿಣ ಏಶ್ಯ ಪ್ರಾದೇಶಿಕ ಸಹಕಾರ ಸಂಘ ಮತ್ತು ಏಶ್ಯ-ಯುರೋಪ್ ಸಭೆ ಇದರಲ್ಲಿ ಸೇರಿದೆ.

ಬಹುಧ್ರುವೀಯತೆಗೆ ಪ್ರೋತ್ಸಾಹ

ಜಾಗತಿಕ ಸನ್ನಿವೇಶ ಕುರಿತಂತೆ ಜಂಟಿ ಹೇಳಿಕೆ ಸಮಕಾಲೀನ ಮಹತ್ವದ ಎಲ್ಲ ಪ್ರಶ್ನೆಗಳ ಮೇಲೆ ಸಮಾನ ನಿಲುವನ್ನು ಸಮಗ್ರವಾಗಿ ವಿಕಾಸಗೊಳಿಸಿದೆ. "ಜಾಗತಿಕ ಪ್ರಶ್ನೆಗಳ ಮೇಲೆ ತಮ್ಮ ಏಕೀಭಾವವನ್ನು ಗಮನಿಸಿ ಎರಡೂ ಕಡೆಗಳವರು ವಿಶ್ವಸಂಸ್ಥೆಯೂ ಸೇರಿದಂತೆ ಬಹುಪಕ್ಷೀಯ ವೇದಿಕೆಗಳಲ್ಲಿ ತಮ್ಮ ಸಹಕಾರವನ್ನು ಹೆಚ್ಚಿಸಲು ಒಪ್ಪಿಕೊಂಡಿದ್ದಾರೆ. ಚೀನಾ, ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ಒಂದು ದೊಡ್ಡ ಅಭಿವೃದ್ಧಿಶೀಲ ದೇಶವೆಂಬ ಭಾರತದ ಸ್ಥಾನಮಾನಕ್ಕೆ ಅಪಾರ ಮಹತ್ವ ಕೊಡುತ್ತದೆ, ಭದ್ರತಾ ಸಮಿತಿಯೂ ಸೇರಿದಂತೆ ವಿಶ್ವ ಸಂಸ್ಥೆಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುವ ಭಾರತದ ಆಶಯವನ್ನು ಅರ್ಥಮಾಡಿಕೊಳ್ಳುತ್ತದೆ ಮತ್ತು ಬೆಂಬಲಿಸುತ್ತದೆ" ಎಂದು ಹೇಳಿಕೆ ತಿಳಿಸಿರುವುದು ಗಮನಾರ್ಹ.

ಜಾಗತಿಕ ಪ್ರಶ್ನೆಗಳ ಮೇಲೆ ಇಂತಹ ಏಕೀಭಾವದಲ್ಲಿ ಜಾಗತಿಕ ಶಾಂತಿ, ಭದ್ರತೆ ಮತ್ತು ಅಭಿವೃದ್ಧಿಗಾಗಿ ಬಹುಧ್ರುವೀಯತೆಯನ್ನು ಪ್ರೋತ್ಸಾಹಿಸುವುದು ಸೇರಿರುತ್ತದೆ. ಜಾಗತಿ ಮಹತ್ವದ ಇತರ ಪ್ರಶ್ನೆಗಳ ಬಗ್ಗೆ ಜಂಟಿ ಹೇಳಿಕೆ ಹೀಗಂದಿದೆ:

"ಅಭಿವೃದ್ಧಿ ಹೊಂದುತ್ತಿರುವ ದೇಶಗಳಾಗಿ ಭಾರತ ಮತ್ತು ಚೀನಾ ಹವಾಮಾನ ಬದಲಾವಣೆ, ಡಬ್ಲ್ಯುಟಿಒದ ದೋಹ ಅಭಿವೃದ್ಧಿ ಸುತ್ತು, ಇಂಧನ ಮತ್ತು ಆಹಾರ ಭದ್ರತೆ, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಸುಧಾರಣೆ ಮತ್ತು ಜಾಗತಿಕ ಆಡಳಿತ ಮುಂತಾದ ಜಾಗತಿಕ ಮಹತ್ವದ ಹಲವು ವಿಷಯಗಳ ಮೇಲೆ ಸಮಾನ ಹಿತಾಸಕ್ತಿಗಳನ್ನು ಹಂಚಿಕೊಂಡಿವೆ. ಇದು ಬ್ರಿಕ್ಸ್ ಮತ್ತು ಜಿ20-ರ ಚೌಕಟ್ಟುಗಳ ಒಳಗೆ ನಿಕಟ ಸಹಕಾರ ಮತ್ತು ಸಂಯೋಜನೆಯಲ್ಲಿ ಬಿಂಬಿತವಾಗಿದೆ. ಎರಡೂ ಕಡೆಗಳವರು ವಿಶ್ವ ಸಂಸ್ಥೆಯ ತಾಳಿಕೆಯ ಅಭಿವೃದ್ಧಿಯ ಸಮ್ಮೇಳನವನ್ನು ಅನುಸರಿಸಿ ನಡೆಯುವ ಪ್ರಕ್ರಿಯೆಯಲ್ಲಿ ಮತ್ತು 2015ರ ನಂತರದ ಅಭಿವೃದ್ಧಿ ಅಜೆಂಡಾದಲ್ಲಿ, ಅದೇ ರೀತಿ ಹವಾಮಾನ ಬದಲಾವಣೆಯ ಮೇಲೆ ಅಂತರ್ರಾಷ್ಟ್ರೀಯ ಮಾತುಕತೆಗಳಲ್ಲಿ ಸಮನ್ವಯವನ್ನು ಹೆಚ್ಚಿಸಲು ಒಪ್ಪಿಕೊಂಡಿದ್ದಾರೆ.

"ಎರಡೂ ಕಡೆಗಳವರು ಎಲ್ಲ ರೀತಿಗಳ ಮತ್ತು ಸ್ವರೂಪಗಳ ಭಯೋತ್ಪಾದನೆಗೆ ತಮ್ಮ ದೃಢ ವಿರೋಧವನ್ನು ಪುನರುಚ್ಚರಿಸಿದ್ದಾರೆ ಮತು ಭಯೋತ್ಪಾದನೆಗೆ ಪ್ರತಿಯಾದ ಕ್ರಮಗಳಲ್ಲಿ ಸಹಕರಿಸಲು ತಾವು ಬದ್ಧರಾಗುತ್ತೇವೆ ಎಂದಿದ್ದಾರೆ. ಅವರು ಎಲ್ಲ ವಿಶ್ವಸಂಸ್ಥೆಯ ಪ್ರಸ್ತುತವಾದ ನಿರ್ಣಯಗಳನ್ನು, ನಿರ್ದಿಷ್ಟವಾಗಿ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ 1267, 1373, 1540 ಮತ್ತು 1624ನ್ನು ಜಾರಿಗೊಳಿಸುವ ಅಗತ್ಯವನ್ನೂ ಒತ್ತಿ ಹೇಳಿದ್ದಾರೆ."

ಒಟ್ಟಾರೆಯಾಗಿ, ಚೀನಾದ ಪ್ರಧಾನಿಗಳ ಈ ಸಂಕ್ಷಿಪ್ತ ಭೇಟಿ ಮತ್ತು ದ್ವಿಪಕ್ಷೀಯ ಸಂಬಂಧಗಳು, ಪರಸ್ಪರ- ಹಿತದೃಷ್ಟಿಯ ಪ್ರಾದೇಶಿಕ ಮತ್ತು ಅಂತರ್ರಾಷ್ಟ್ರೀಯ ಪ್ರಶ್ನೆಗಳ ಮೇಲೆ ಆಳವಾದ ಅಭಿಪ್ರಾಯಗಳ ವಿನಿಮಯವನ್ನು ಒಂದು ಪ್ರಾಮಾಣಿಕ ಮತ್ತು ಸೌಹಾರ್ದದ ವಾತಾವರಣದಲ್ಲಿ ನಡೆಸಿರುವುದು ದಕ್ಷಿಣ ಏಶ್ಯಾದ ಈ ಎರಡು ಬೃಹತ್ ನೆರೆ ದೇಶಗಳ ನಡುವಿನ ಸಂಬಂಧಗಳನ್ನು ಉತ್ತಮ ಪಡಿಸುವಲ್ಲಿ ಬಹಳಷ್ಟು ಸಹಕಾರಿಯಾಗಲಿದೆ, ಮತ್ತು ಇದು ಜಾಗತಿಕ ಸನ್ನಿವೇಶದ ಮೇಲೆ ಬಹಳಷ್ಟು ಸಕಾರಾತ್ಮಕ ಪ್ರಭಾವ ಬೀರಲಿದೆ.

➡

ಸಂಸ್ಥೆ ಮಾಡಿದ ಅಂದಾಜು. ಈ ಸಂಸ್ಥೆ ಕಾನೂನುಬಾಹಿರ ಶಸ್ತ್ರಾಸ್ತ್ರ ಪೂರೈಕೆಗಳ ಅಧ್ಯಯನದ ಅಂಗವಾಗಿ ಈ ಅಂದಾಜು ಮಾಡಿದೆ. ಅಂತರ್ಯುದ್ಧ ನಡೆಯುವ ದೇಶಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡುವುದು ಅಂತರ್ರಾಷ್ಟ್ರೀಯ ನೈತಿಕತೆಗೆ ಮಾತ್ರವಲ್ಲ, ಕಾನೂನಿಗೂ ವಿರುದ್ಧ ಎಂಬುದರ ಬಗ್ಗೆ ಅಮೆರಿಕ-ನಾಟೋ ದುಷ್ಟಕೂಟ ಯಾವತ್ತೂ ಇಬಗೆ ನೀತಿ ಅನುಸರಿಸಿವೆ.

...ಇಲದ್ದಕ್ಕೆ ಇಸ್ರೇಲ್ ಎರಡು ಬಾರಿ ಸಿರಿಯಾದ ರಾಜಧಾನಿ ಡಮಾಸ್ಕಸ್ ಮೇಲೆ ಯಾವುದೇ ಪ್ರಚೋದನೆ ಇಲ್ಲದೆ ಕ್ಷಿಪಣಿ ದಾಳಿ ನಡೆಸಿವೆ. ಈ ದಾಳಿಯನ್ನು ಖಂಡಿಸಲು ರಶ್ಯಾ ಭದ್ರತಾ ಸಮಿತಿ ಮುಂದೆ ತಂದ ನಿರ್ಣಯವನ್ನು ಎಂದಿನಂತೆ ಅಮೆರಿಕ ವಿಟೋ ಮಾಡಿದೆ. ಆದರೆ ಸಿರಿಯಾದ ಅಧ್ಯಕ್ಷ ಅಂತರ್ಯುದ್ಧದ ಎಲ್ಲಾ ಸಾವುನೋವುಗಳಿಗೆ ಅಸಾದ್ ಹೊಣೆ. ಅಸಾದ್ ಅಧಿಕಾರ ಬಿಟ್ಟುಕೊಡಬೇಕು. ಇಲ್ಲದಿದ್ದರೆ ಗಂಭೀರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಪದೇ ಪದೇ ಎಚ್ಚರಿಕೆ ನೀಡುತ್ತಿದ್ದಾರೆ. ವಿರೋಧಿ ಗುಂಪುಗಳ ಯುದ್ಧ ಅಪರಾಧಗಳು, ಭಯೋತ್ಪಾದಕ ಹಿಂಸಾಚಾರ, ಅಲ್ಪಸಂಖ್ಯಾತರ ಮೇಲೆ ದಾಳಿಯನ್ನು ಖಂಡಿಸಲು ತಯಾರಿಲ್ಲ. ಅದನ್ನು ಒಪ್ಪಿಕೊಳ್ಳಲೂ ತಯಾರಿಲ್ಲ. ಅವೆಲ್ಲ (...ರಿ ಕಟ್ಟಡಗಳು, ವಿಶ್ವವಿದ್ಯಾಲಯಗಳ ಮೇಲೆ ದಾಳಿ ಸೇರಿ) ಸಿರಿಯಾ ಸರ್ಕಾರ ಪಡೆಗಳ ದುಷ್ಕೃತ್ಯಗಳು ಎಂಬ ಭಂಡ ಹೇಳಿಕೆ ನೀಡುತ್ತಿದ್ದಾರೆ. ಸಿರಿಯಾದ ಸರ್ಕಾರ ರಾಸಾಯನಿಕ ಶಸ್ತ್ರಾಸ್ತ್ರ ಬಳಕೆಯ 'ಕೆಂಪು ಗೆರೆ' ದಾಟಬಾರದು ಎಂದು ಪದೇ ಪದೇ ತಾಕೀತು ಮಾಡುತ್ತಿದ್ದಾರೆ. ಆದರೆ ವಿರೋಧಿ ಗೆರಿಲ್ಲಾ ಗುಂಪುಗಳು ರಾಸಾಯನಿಕ ಶಸ್ತ್ರಾಸ್ತ್ರ ಬಳಕೆಗೆ ಪುರಾವೆ ಸಿಕ್ಕಿದೆ ಎಂದು



ಸಿರಿಯಾದ ಮೇಲೆ ಇಸ್ರೇಲಿ ಬಾಂಬ್ ದಾಳಿ

ವಿಶ್ವಸಂಸ್ಥೆಯ ಮಾನವ ಹಕ್ಕು ಸಂಸ್ಥೆ ವಕ್ತಾರರ ಹೇಳಿಕೆಯನ್ನು ಒಪ್ಪಿಕೊಳ್ಳಲು ತಯಾರಿಲ್ಲ.

ಇವೆಲ್ಲದ್ದರಿಂದ ರೋಸಿ ಹೋದ ರಶ್ಯಾ ಈ ವರೆಗೆ ಅಂತರ್ಯುದ್ಧದಿಂದಾಗಿ ತಡೆಹಿಡಿಯಲಾದ ಅತ್ಯಾಧುನಿಕ 'ರಕ್ಷಣಾ ಶಸ್ತ್ರಾಸ್ತ್ರ'ಗಳನ್ನು ಪೂರೈಕೆಯನ್ನು ಮಾಡಲು ನಿರ್ಧರಿಸಿದೆ. ಇಸ್ರೇಲಿ ಕ್ಷಿಪಣಿ ದಾಳಿಯ ನಂತರ ರಶ್ಯಾ ಈ ನಿರ್ಧಾರ ಕೈಗೊಂಡಿದೆ. ಈಗ ಅಮೆರಿಕಕ್ಕೆ ಅಂತರ್ಯುದ್ಧ ನಡೆಯುತ್ತಿರುವ ದೇಶಗಳಿಗೆ ಶಸ್ತ್ರಾಸ್ತ್ರಗಳ ಪೂರೈಕೆಯ ಬಗ್ಗೆ ಇರುವ ಕಾನೂನು ನೆನಪಾಗಿದೆ. ರಶ್ಯಾದ ನಿರ್ಧಾರ ಕಾನೂನು ಬಾಹಿರ ಎಂದು ಖಂಡಿಸಿದೆ. ಇಸ್ರೇಲ್ ಒಂದು ಹೆಜ್ಜೆ ಮುಂದೆ ಹೋಗಿ ಈ ಪೂರೈಕೆ ಮಾಡುವ ಹಡಗಗಳ ಮೇಲೆ ದಾಳಿ ಮಾಡುವ ಬೆದರಿಕೆ ಹಾಕಿದೆ. ರಶ್ಯಾದ ನಿರ್ಧಾರ ಸಿರಿಯಾ ಅಂತರ್ಯುದ್ಧವನ್ನು ಅಂತರ್ರಾಷ್ಟ್ರೀಯ ಯುದ್ಧವಾಗಿಸುವ ಅಪಾಯವನ್ನು ಹೊಂದಿದೆ. ಆದರೆ ಅಮೆರಿಕ-ಇಸ್ರೇಲ್ ದುಷ್ಟಕೂಟದ ಅಟಾಟೋಪಕ್ಕೆ ಕಡಿವಾಣ ಹಾಕುವ ಸಾಧ್ಯತೆಯನ್ನೂ ಹೊಂದಿದೆ. ಎರಡನೇ ಸಾಧ್ಯತೆಯೇ ಹೆಚ್ಚು ಎಂಬುದಕ್ಕೆ ಈಗಾಗಲೇ ಸೂಚನೆಗಳು ಸಿಕ್ಕಿವೆ. ಅಧ್ಯಕ್ಷ ಒಬಾಮ ಸಿರಿಯಾದ ಸಮಸ್ಯೆ ಬಗೆಹರಿಸಲು ರಾಜಕೀಯ ಮಾತುಕತೆಗಳಿಂದ ಸಾ ಧ್ಯ ಎಂದಿದ್ದಾರೆ!

ಆದರೆ ಸಿರಿಯಾದ ನಾಗರಿಕರ ಪರಿಸ್ಥಿತಿ ಭೀಕರವಾಗಿದೆ. ವ್ಯಾಪಕ ನಾಶ, ಹಿಂಸಾಚಾರ, ಅಗತ್ಯ ವಸ್ತುಗಳ ಅಭಾವಗಳಿಂದ ಅವರ ಬದುಕು ದುರ್ಭರವಾಗಿದೆ. ದೊಡ್ಡ ಸಂಖ್ಯೆಯಲ್ಲಿ ದೇಶಾಂತರ ಹೋಗಿ ನೆರೆಯ ದೇಶಗಳಲ್ಲಿ ನಿರಾಶ್ರಿತರಂತೆ ಬದುಕಬೇಕಾಗಿದೆ. ಇಪ್ಪತ್ತು ಲಕ್ಷ ಸಿರಿಯನ್ನರು ನಿರಾಶ್ರಿತರಾಗಿದ್ದಾರೆ. ಅಗತ್ಯ ವಸ್ತುಗಳನ್ನು ಉತ್ಪಾದಿಸುವ 1800 ಘಟಕಗಳು ಕೆಲಸ ನಿಲ್ಲಿಸಬೇಕಾಗಿ ಬಂದಿದೆ. ಒಬಾಮ ಮನಸ್ಸು ಮಾಡಿದರೆ ಒಂದು ದಿನದಲ್ಲಿ ಯುದ್ಧ ನಿಲ್ಲಬಹುದು. ಆದರೆ ಅವರು ಮನಸ್ಸು ಮಾಡುತ್ತಾರಾ ? ಅಥವಾ ಇರಾಕ್-ಲಿಬ್ಯಾ ಮಾದರಿಯ ಸರ್ಕಾರ ಬದಲಾಯಿಸಿ ತಮ್ಮ ಬಾಲಬಡುಕ ಸರ್ಕಾರ ಸ್ಥಾಪಿಸುವ ಹಟ ಸಾಧಿಸುತ್ತಾರಾ ಎಂಬುದರ ಮೇಲೆ ಅವಲಂಬಿತವಾಗಿದೆ. ಈ ವರೆಗೆ ರಶ್ಯಾ ಮಾತ್ರ ಸಿರಿಯಾ ಬಿಕ್ಕಟ್ಟು ಪರಿಹರಿಸುವಲ್ಲಿ ಮಧ್ಯಸ್ಥಿಕೆ ನಡೆಸಲು ಪ್ರಯತ್ನಿಸಿದೆ. ಬ್ರಿಕ್ಸ್ ದೇಶಗಳು ಒಟ್ಟಾಗಿ ಸಿರಿಯಾ ಬಿಕ್ಕಟ್ಟು ಪರಿಹರಿಸಲು ಪ್ರಯತ್ನಿಸಿದರೆ ಒಬಾಮಾ ಮರ್ಜಿಗೆ ಕಾಯಬೇಕಾಗಿಲ್ಲ.

JANASHAKTHI KANNADA VARA PATRIKE JUN 02, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17920 Posted on every ...
Licensed to Post without prepayment License No. WPP-28

'ಬಿಗ್ ಬಾಸ್' – ರಿಯಾಲಿಟಿ ಶೋ ಎಂಬ ವಿಕೃತಿ

– ಆರ್. ರಾಮಕೃಷ್ಣ.

'ಮಾನಕ್ಕೆ ಕೇಮೆ ಇಲ್ಲದವರು ಎಲ್ಲಿಗೋ ಇರುವೆ ಬಿಟ್ಟುಕೊಂಡರು' ಅಂತ ಕೆಲವು ಸಾರಿ ಜನಗಳು ಮಾತನಾಡಿಕೊಳ್ಳುತ್ತಾರೆ. ಹೊಣೆಗೇಡಿಗಳು, ಕೆಲಸಗೇಡಿಗಳು ಬೇಡದ್ದೇನನ್ನೋ ಮಾಡಿದಾಗ ಜನ ಆಡುವ ಸಿಟ್ಟಿನ ಮಾತಿದು.

ಕನ್ನಡದ 'ಈ ಟಿ.ವಿ.' ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಬಿಗ್ ಬಾಸ್' ಎಂಬ ಕಾರ್ಯಕ್ರಮ ನೋಡಿ ಎಷ್ಟು ಜನಕ್ಕೆ ಇಂಥ ಸಿಟ್ಟು ಬಂದಿದೆಯೋ ?

ಹಿಂದೆ ಹಿಂದಿಯಲ್ಲಿ ಅಮಿತಾಬ್ ಬಚ್ಚನ್ ನಡೆಸಿಕೊಟ್ಟ ರಿಯಾಲಿಟಿ ಶೋ ಕಾರ್ಯಕ್ರಮದ ಕನ್ನಡ ಅನುಕರಣೆಯಂತೆ ಇದು. ಹಿರಿ ತೆರೆ-ಕಿರುತೆರೆ ಅಂದ-ರೆ ಸಿನಿಮಾ-ಟಿವಿ ಧಾರಾವಾಹಿಗಳಲ್ಲಿ ಮತ್ತು ಸಮಾಜದ ಇತರೆ ಕ್ಷೇತ್ರಗಳಲ್ಲಿ ಜನಪ್ರಿಯರಾಗಿರುವ ನಟನಟಿಯರು ಮತ್ತು ಖ್ಯಾತ ವ್ಯಕ್ತಿಗಳು ತಮ್ಮ ನಿಜ ಜೀವನದಲ್ಲಿ ಮತ್ತು ತಮ್ಮ ಖಾಸಗಿ ಜೀವನದಲ್ಲಿ ಯಾವ ರೀತಿಯಲ್ಲಿ ವರ್ತಿಸುತ್ತಾರೆ. ತೆರೆ-ಯ ಮೇಲೆ-ಮಾಧ್ಯಮಗಳಲ್ಲಿ ಬಿಂಬಿತವಾದ ಅವರ ವ್ಯಕ್ತಿತ್ವಕ್ಕೂ ಅವರ ನಿಜ ವ್ಯಕ್ತಿತ್ವಕ್ಕೂ ವ್ಯತ್ಯಾಸವೇನು ? ವೈರುಧ್ಯಗಳೇನು ? ಎಂಬುದನ್ನು ಬಯಲು ಮಾಡುವ ಕಾರ್ಯಕ್ರಮವಂತೆ ಅದು.

ಅಮಿತಾಬ್ ಬಚ್ಚನ್‌ನ 'ರಿಯಾಲಿಟಿ ಶೋ'ಗಾಗಿಯೇ ಮಧ್ಯಪ್ರದೇಶದಲ್ಲಿ ಒಂದು ದೊಡ್ಡ ಐಷಾರಾಮಿ ಬಂಗಲೆಯನ್ನ ಕಟ್ಟಲಾಗಿತ್ತು. ಆ ಬಂಗಲೆಯಲ್ಲಿ ಅಂಗಳ, ಹಜಾರ, ವರಾಂಡ, ಅಡುಗೆ ಮನೆ, ಸ್ನಾನದ ಮನೆಗೆ ಹೋಗುವ ಪ್ಯಾಸೇಜ್, ಮಲಗುವ ಕೋಣೆ ಹೀಗೆ ಎಲ್ಲೆಲ್ಲಿಯೂ ಗುಪ್ತ ಕ್ಯಾಮೆರಾಗಳಿವೆ.

ಅದೇ ಬಂಗಲೆಯಲ್ಲಿ ಕನ್ನಡದಲ್ಲಿ ನಟ ಸುದೀಪ್ ನಡೆಸಿಕೊಡುತ್ತಿರುವ ಈ ಕಾರ್ಯಕ್ರಮದಲ್ಲಿ ನಿಯಮದಂತೆ ಹಲವಾರು ಕ್ಷೇತ್ರಗಳ ಖ್ಯಾತನಾಮರು ಈ ಬಂಗಲೆಯಲ್ಲಿ ನೂರು ದಿನ ಒಟ್ಟಿಗೆ ವಾಸ ಮಾಡುತ್ತಾರೆ. ಆಗ ಅಲ್ಲಿ ಅವರ ನಡುವೆ ನಡೆಯುವ ಜಗಳ, ಕದನ, ತಿಕ್ಕಾಟ, ಸಂಘರ್ಷ, ಕೋಪ, ತಾಪ ಸ್ನೇಹ, ಸಹಕಾರಗಳನ್ನು ಹಾಗೂ ಅವರ ಪಿಸುಮಾತು ಅಂದರೆ 'ಖಾಸ್‌ಬಾತ್'ಗಳನ್ನು ರಹಸ್ಯ ಕ್ಯಾಮರಾಗಳಲ್ಲಿ ಸೆರೆ ಹಿಡಿದು ಆಯ್ಕೆಮಾಡಿ ಟಿ.ವಿ.ಯಲ್ಲಿ ಪ್ರಸಾರ ಮಾಡಲಾಗುವುದು.

ಕನ್ನಡದ 'ಬಿಗ್ ಬಾಸ್' ಅನ್ನು ಸೂಕ್ಷ್ಮ ಮನಸ್ಸಿನವರು ಹತ್ತು ನಿಮಿಷ ಕೂತು ನೋಡುವುದು ಕಷ್ಟ. ಈ ಕಾರ್ಯಕ್ರಮಕ್ಕೆ ಕಲೆಹಾಕಿರುವ ಪ್ರತಿಭೆಗಳೂ ಹಾಗೆ ಇವೆ.

ಹಲವು ಸಿನಿಮಾ ನಟ ನಟಿಯರ ಜೊತೆ ರೇಣುಕಾಚಾರ್ಯರ ಗೆಳತಿ ನರ್ಸ್ ಜಯಲಕ್ಷ್ಮಿವರದ್ದು ಒಂದು ಇಲ್ಲಿ ಒಂದು 'ದೊಡ್ಡ' ಪಾತ್ರ, ಜಯಲಕ್ಷ್ಮಿ ಯಾವ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕಿ ಅಂತ ಅವರನ್ನ ಇಲ್ಲಿ ಕರೆಸಲಾಗಿದೆಯೋ ? ಇನ್ನು ಟಿವಿ ಕಾರ್ಯಕ್ರಮಗಳಲ್ಲಿ ಜ್ಯೋತಿಷ್ಯ ಕೇಳುವ ಮುಗ್ಧ ಮಹಿಳೆಯರನ್ನು 'ಮುಂಡೆ', 'ರಂಡೆ' ಅಂತೆಲ್ಲಾ ಬೈದು ಬಾರೀ 'ಖ್ಯಾತಿ'ಗಳಿಸಿರುವ ಬಾರಿ ಬ್ರಹ್ಮಾಂಡ ಜ್ಯೋತಿಷಿ ಈ ನಾಟಕದ



ಇನ್ನೊಂದು 'ದೊಡ್ಡ' ಪಾತ್ರ.

ಮನೆಯೊಳಗೆ ಒಂದು ಕಡೆ ಜಯಲಕ್ಷ್ಮಿ ದಾರಿಗೆ ಅಡ್ಡ ನಿಂತಿದ್ದಾರೆ. ಜ್ಯೋತಿಷಿ ದಾರಿ ಕೇಳುತ್ತಾರೆ. ನರ್ಸ್ ದಾರಿ ಬಿಡುವುದಿಲ್ಲ. ಜ್ಯೋತಿಷಿ ಈಗ ನರ್ಸ್ ಬೆನ್ನ ಮೇಲೆ ಎರಡೂ ಕೈ ಇಟ್ಟು ತಳ್ಳುತ್ತಿದ್ದಾರೆ. ನರ್ಸ್‌ಗೆ ಹಠ. ಈ ತಿಕ್ಕಾಟ ಸಾಕಷ್ಟು ಹೊತ್ತು ನಡೆಯುತ್ತದೆ.



ಇದೊಂದು ದೃಶ್ಯವನ್ನು ನೋಡಿ ಬಿಟ್ಟರೆ ಸಾಕು 'ಬಿಗ್ ಬಾಸ್' ಯೋಗ್ಯತೆ ಅಳೆಯಲು. ಇನ್ನು ರೌಡಿ ಲೋಕದ ವಿಕೃತಿಗಳನ್ನೇ ಪ್ರತಿನಿಧಿಸುತ್ತಾ ಸಿನಿಮಾರಂಗದಲ್ಲಿ , ಬೆಳೆದು ಬಂದ ಲೂಸ್ ಮಾದ-ಯೋಗಿಶ್ ಇಲ್ಲಿ ಹಾಜರ್. ನಟ ದರ್ಶನ್ ಜೊತೆ ಸಂಬಂಧ ಇದೆ ಎಂಬ ದಟ್ಟ ಗುಮಾನಿಗೆ ಮತ್ತು ಆ ಕಾರಣಕ್ಕೆ ವಿವಾದಕ್ಕೊಳಗಾದ ನಟಿ ನಿಖಿತಾಗೂ ಲೂಸ್ ಮಾದನಿಗೂ ಇಲ್ಲಿ ಮದುವೆ ನಾಟಕ. ಹಿಂದೆ ಒಂದು ದಿನ ಇದ್ದವರೆಲ್ಲ ಸೇರಿ ಆಡಿದ ಒಕುಳಿ. ಇಂದು ಕಳ್ಳತನ-ಲಾಕಪ್ ಸೀನ್‌ನ ಹೈಡ್ರಾಮ 'ಕಚಗುಳಿ'. ನಟಿ ಬಟ್ಟೆಯೊಳಗೆ ಏನೋ ಬಚ್ಚಿಟ್ಟುಕೊಂಡಿರುವುದರ ಬಗೆಗೆ ಚರ್ಚೆ. ವಾದ ವಿವಾದ. !! ನಟಿ ಸಂಜನ ಮತ್ತು ನಟ ತಿಲಕ ಅವರು 'ಗಂಡ ಹೆಂಡತಿ' ಸಿನಿಮಾ ಚಿತ್ರೀಕರಣದ ಸಂದರ್ಭ ಮಾಡಿ ಕೊಂಡಿದ್ದ ಜಗಳದ ಮುಂದಿನ ಕಂತು ಈ ಬಿಗ್‌ಬಾಸ್ ಕಾರ್ಯಕರ್ಮದಲ್ಲಿ ನಡೆಯಿತಂತೆ.!!! ಇನ್ನೂ ನಟಿ ರಿಷಿಕ ವಿಚಾರದಲ್ಲಿನ ವಿವಾದದ ಬಗ್ಗೆ ಇಲ್ಲಿ ಹೇಳುವುದೇ ಬೇಡ. 'ಪ್ಯಾಟೆ ಮಂದಿ ಕಾಡಿಗೆ ಬಂದ್ರು' ಕಾರ್ಯಕ್ರಮದಲ್ಲಿ ಭಾಗವಹಿಸಿ ಆ ನಂತರ ಸಿನಿಮಾ ರಂಗ ಪ್ರವೇಶಿಸಿ ಮಾನಸಿಕ ಅಸ್ವಸ್ಥನಾಗಿ ಈಗ ಚೇತರಿಸಿಕೊಂಡಿರುವ ರಾಜೇಶ್ ಇಲ್ಲಿಗೆ ಬಂದು ಹೋದನಂತೆ.

ಸಿನಿಮಾ ನಟ ನಟಿಯರು, ಖ್ಯಾತನಾಮರ ಖಾಸಗಿ ನಡವಳಿಕೆಗಳು ವಿಚಾರಗಳು, ಅವರ ಖಾಸಗಿ ಬದುಕಿನ ವಿವರಗಳ ಬಗೆಗೆ ಜನ... ಇಷ್ಟೊಂದು ಕೂತೂಹಲ ಮೂಡಿಸ... ಅಗತ್ಯ ಈ ವಾಹಿನಿಗಳಿಗೆ ಏ... ಎಂಬುದು ಒಂದು ಪ್ರ... ಆಮೇಲೆ ಆ ವಿವರಗಳ... ಕಟ್ಟಿಕೊಂಡು ನೋಡುಗರು ... ಮಾಡಬೇಕು. ಅದರಿಂದ ನೋಡುಗರಿ... ಸಮಾಜಕ್ಕೆ ಏನು ಪ್ರಯೋಜನ ಎಂಬು... ಇನ್ನೊಂದು ಪ್ರಶ್ನೆ.

ಈ ಬಂಗಲೆಯಲ್ಲಿನ ವಾಸವೇ ಒಂ... ಕೃತಕ ವ್ಯವಸ್ಥೆಯಾಗಿರುವಾಗ ಮತ್ತು ಮನೆಯಲ್ಲಿ ಎಲ್ಲೆಲ್ಲೋ ರಹಸ್ಯ ಕ್ಯಾಮರಾಗ... ಅಡಗಿ ಕುಳಿತಿವೆ ಎಂಬುದು ಮೊದ... ಗೊತ್ತಿರುವಾಗ ಖಾಸಗಿ ನಡವಳಿಕೆಗಳ... ಸಹಜವಾಗಿರುತ್ತವಾ ? ಎಂಬು... ಇನ್ನೊಂದು ಗಂಭೀರ ಪ್ರಶ್ನೆ. ಈ ಪ್ರಶ್ನೆಯ... ಇದೇ ಕನ್ನಡ ಬಿಗ್‌ಬಾಸ್‌ನಲ್ಲಿ ಭಾಗವಹಿ... ಮರಳಿ ಬಂದ ನಟಿ ಅಪರ್ಣಾ ಎತ್ತಿದ್ದಾ...ರೆ. ಇವೆಲ್ಲಾ ಕಾರ್ಯಕ್ರಮದ ಸ್ವರೂ... ಪರಿಕಲ್ಪನೆಯ ಬಗೆಗೇ ಎದ್ದು ಬಂದಿರು... ತಕರಾರುಗಳು.

ಬ್ರಿಟನ್ ದೇಶದ ಆಮದು ರೋಗ

ಬ್ರಿಟನ್‌ನಲ್ಲಿ 'ರಾಜಕುಮಾರಿ' ಅಂತ ಇ... ಆ 'ಡಯಾನ' ಯಾಕೆ ಸತ್ತಳು ಎಂಬುದ... ನೆನಪು ಯಾರಿಗೂ ಬೇಕಿಲ್ಲ. ಹಾಳಾ... ಹೋಗಲಿ ಮೊನ್ನೆ ನಮ್ಮ ಕರ್ನಾಟಕ ಮೂಲ... ಲಂಡನ್ ಆಸ್ಪತ್ರೆ ಉದ್ಯೋಗಿ ಜಸ್ಸಿ... ಸಲ್ಡಾನ. ಆತ್ಮಹತ್ಯೆ ಮಾಡಿಕೊಳ್ಳುವಂತ... ಸ್ಥಿತಿಗೆ ತಳ್ಳಿದ ಅಂಶ ಏನು ಅಂತಲ... ಯಾರಿಗೂ ಬೇಕಿಲ್ಲ. 'ದೊಡ್ಡವರ' ಜೀವನ... ಖಾಸಗಿ ವಿವರಗಳನ್ನು ಟಿವಿ-ಪತ್ರಿ... ರೇಡಿಯೋಗಳಲ್ಲಿ ಪ್ರಕಟಿಸಿ ಬಿಡಬೇ... ಅದೂ ಕೂಡ ತಾವೇ ಮೊದ... ಪ್ರಕಟಿಸಬೇಕು. ಟಿ.ಆರ್.ಪಿ. ಒಂ... ಸಮ ಏರುತ್ತಾ ಹೋಗಬೇ... ತಪ್ಪಿಸಿಕೊಂಡು ಹೋಗುವ ಆತುರದ... ಯಾರು ಅಪಘಾತಕ್ಕೀಡಾ... ಸತ್ತರೂ, ಸಂವೇದನಾಶೀಲ... ಅಪಮಾನಕ್ಕೀಡಾಗಿ ಆತ್ಮಹ... ತುತ್ತಾದರೂ ಚಿಂತೆ ಇಲ್ಲ.

ಬ್ರಿಟನ್ ದೇಶದ ರೋಗ-ರುಜಿನಗ... ನಮಗೆ ಸೊಗಸು. ಸುಂದರವ... ಬಿಳಿಯರಲ್ಲವೇ ? ಅಮೆರಿಕದ ಎ... ದೇಶದ ದನದ ಸಗಣಿಯ ರುಚಿಯ... ಸಿಹಿ ಮತ್ತು ಸವಿಯೇ ಅದ... ಮಾಡಿಕೋ ಹೋಲ್ ಸೇಲ್ ಆಮದ... ಇದಕ್ಕೆ ಏನು ಹೇಳುವುದು ?

ನಮ್ಮ ಸಮಾಜ ಸಂಸ್ಕೃತಿಯಲ್ಲಿ ಜನರ... ಉತ್ತಮ ಮನರಂಜನೆ ಒದಗಿಸುವಂಥದ್ದು... ಮನಸ್ಸನ್ನು ಅರಳಿಸುವಂತಹದ್ದು ಏನ... ಇಲ್ಲವೇ- ಯಾರು ಕೇಳುವುದು ?

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI